26 March 2026 Thursday
SINCE 1957
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ
ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ದೇವರು ಪ್ರಾರ್ಥನೆಯನ್ನು ಮಾತ್ರ ಕೇಳುವುದಿಲ್ಲ, ತಪ್ಪನ್ನು ಕೂಡ ಗಮನಿಸುತ್ತಾನೆ ಎನ್ನುವ ಅರಿವು ನಮಗಿರಬೇಕು!

-ಸ್ನೇಹಾ ಆನಂದ್

info.varthaman@gmail.com



ಕೋಟೆಯಲ್ಲಿ ನಾಳೆ ಜನರೊಂದಿಗೆ ಜನತಾದಳ ಪುಟ ಸಂ. 2



ರಾಮನಗರದಲ್ಲಿ ಒಡೆಯರ್ ಎಕ್ಸ್‌ಪ್ರೆಸ್ ನಿಲುಗಡೆಗೆ ಆದೇಶ ಪುಟ ಸಂ. 3



ತುಟ್ಟಿ ಭತ್ಯ ನಿಲ್ಲಿಸುವುದನ್ನು ಖಂಡಿಸಿ ಮೌನ ಪ್ರತಿಭಟನೆ ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್
VARTHAMAN Volume: 69 Issue: 131 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

# ‘ಗ್ರೇಟರ್ ಮೈಸೂರು’: ಬಜೆಟ್ ಗಾತ್ರ 1,311 ಕೋಟಿ ರೂ.

## ತೆರಿಗೆ ಹೆಚ್ಚಳದ ಪ್ರಸ್ತಾಪವಿಲ್ಲ: 10 ಕೋಟಿ ಉಳಿತಾಯ ಆಯವ್ಯಯ





**ಮೈಸೂರು:** ಮೈಸೂರು ಮಹಾನಗರ ಪಾಲಿಕೆಗೆ 10.20 ಕೋಟಿ ರೂ.ಗಳ ಉಳಿತಾಯ ಬಜೆಟ್ ಮಂಡಿಸಲಾಯಿತು. ವಿಶೇಷವಾಗಿ ಯಾವುದೇ ತೆರಿಗೆ ಹೆಚ್ಚಳದ ಬಗ್ಗೆ ಬಜೆಟ್ ನಲ್ಲಿ ಪ್ರಸ್ತಾಪಿಸಿಲ್ಲ.

ನಗರಪಾಲಿಕೆಯ ಕೌನ್ಸಿಲ್ ಸಭಾಂಗಣದಲ್ಲಿ ಬುಧವಾರ ನಡೆದ ವಿಶೇಷ ಸಭೆಯಲ್ಲಿ ಆಡಳಿತಾಧಿಕಾರಿ ಆಗಿರುವ ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ ಅವರು 1,311.13 ಕೋಟಿ ಗಾತ್ರದ ಬಜೆಟ್ ಮಂಡಿಸಿದರು. ಇದರಲ್ಲಿ 1,300.92 ಕೋಟಿ ಖರ್ಚಾಗಲಿದ್ದು, 10.20 ಕೋಟಿ ಉಳಿತಾಯ ಆಗಲಿದೆ ಎಂದು ಅಂದಾಜಿಸಲಾಗಿದೆ. ವಿವಿಧ ಮೂಲಗಳಿಂದ ಸಂಪನ್ಮೂಲ ನಿರೀಕ್ಷಿಸಲಾಗಿದೆ.

ಮಾರುಕಟ್ಟೆಗಳು ಹಾಗೂ ಈಜುಕೊಳಗಳ ನಿರ್ಮಾಣ, ಗ್ರೀನ್ ಪ್ರಾಪರ್ಟಿ ಟ್ಯಾಗ್, ಉದ್ಯಾನಗಳಲ್ಲಿ ಹೊರಾಂಗಣ ಸಂಗೀತ ವಾದ್ಯಗಳ ಅಳವಡಿಕೆ ಮೊದಲಾದ ಯೋಜನೆಗಳನ್ನು ಒಳಗೊಂಡಿರುವ 2026–27ನೇ ಸಾಲಿನ ಮಹಾನಗರಪಾಲಿಕೆ ಬಜೆಟ್‌ಗೆ ಅನುಮೋದನೆ ನೀಡಲಾಯಿತು.

ಆಸ್ತಿ ತೆರಿಗೆ, ನೀರಿನ ತೆರಿಗೆ ಹಾಗೂ ಒಳಚರಂಡಿ ಕರ, ಯೋಜನೆ ಹಾಗೂ ನಿಬಂಧನೆಗಳಿಗೆ ಸಂಬಂಧಿಸಿದಂತೆ ವಿವಿಧ ಶುಲ್ಕಗಳು, ಉದ್ದಿಮೆ ಪರವಾನಗಿ ಶುಲ್ಕ, ಪಾಲಿಕೆ ಆಸ್ತಿಗಳಿಂದ ಬರುವ ಬಾಡಿಗೆ, ಪುಟ 2ಕ್ಕೆ

### ಮೂರು ಈಜುಕೊಳ ನಿರ್ಮಾಣ

ಕೃಷ್ಣರಾಜ, ಚಾಮರಾಜ ಮತ್ತು ನರಸಿಂಹರಾಜ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ತಲಾ ಒಂದರಂತೆ ಮೂರು ಈಜುಕೊಳಗಳನ್ನು ಪಿಪಿಪಿ/ ಹೈಬ್ರಿಡ್ ಮಾದರಿಯಲ್ಲಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ.

ಚಾಮರಾಜ ಕ್ಷೇತ್ರ ವ್ಯಾಪ್ತಿಯ ಕುಂಬಾರಕೊಪ್ಪಲು ಕ್ರೀಡಾಂಗಣ ಸಮಗ್ರ ಅಭಿವೃದ್ಧಿಗೆ ಯೋಜಿಸಲಾಗಿದೆ. ಇಲ್ಲಿ ಆಧುನಿಕ ಮೂಲ ಸೌಕರ್ಯ ಕಲ್ಪಿಸಲಾಗುವುದು. ಇದಕ್ಕಾಗಿ 50 ಲಕ್ಷ ಕಾಯ್ದಿರಿಸಲಾಗಿದೆ. ಸಾಂಸ್ಕೃತಿಕ, ಶೈಕ್ಷಣಿಕ ಚಟುವಟಿಕೆಗಳಿಗೆ ಹಾಗೂ ಸಭೆ–ಸಮಾರಂಭಗಳಿಗೆ ಪ್ರೋತ್ಸಾಹ ನೀಡಲೆಂದು ಪುರಭವನದ ಅಭಿವೃದ್ಧಿಗೆ ಯೋಜನೆ ಕೈಗೊಳ್ಳಲಾಗಿದೆ. ಇದಕ್ಕಾಗಿ 30 ಲಕ್ಷ ಕಾಯ್ದಿರಿಸಲಾಗಿದೆ.

ನಗರ ಪ್ರದೇಶಗಳಲ್ಲಿ ಹೆಚ್ಚುತ್ತಿರುವ ವಾಹನ ದಟ್ಟಣೆಯ ನಡುವೆ ಪಾದಚಾರಿಗಳ ಸುರಕ್ಷತೆ ಮತ್ತು ಅನುಕೂಲಕ್ಕಾಗಿ ಜನಸ್ನೇಹಿ ಪಾದಚಾರಿ ಮಾರ್ಗಗಳ ನಿರ್ಮಾಣಕ್ಕೆ ಯೋಜಿಸಲಾಗಿದೆ. ಇದು ಸಂಚಾರಕ್ಕೆ ಮಾತ್ರವಲ್ಲದೆ, ಜನರ ಆರೋಗ್ಯ ವೃದ್ಧಿಗೂ ಪೂರಕವಾಗಿವೆ. ಪುಟ 2ಕ್ಕೆ

### ಇ–ಆಫೀಸ್ ಅನುಷ್ಠಾನ

ಪಾಲಿಕೆಯ ಮುಖ್ಯ ಕಚೇರಿಯಲ್ಲಿ ಇ–ಆಫೀಸ್ ಅನುಷ್ಠಾನಗೊಳಿಸಲಾಗಿದೆ. ಅದರಂತೆ ಎಲ್ಲ 9 ವಲಯ ಕಚೇರಿಗಳು ಹಾಗೂ ವಾಣಿವಿಲಾಸ ನೀರು ಸರಬರಾಜು ವಿಭಾಗ, ಮಾರುಕಟ್ಟೆ ವಿಭಾಗ, ಆಸ್ತಿ ವಿಭಾಗ ಮತ್ತು ಆಶ್ರಯ ವಿಭಾಗಗಳಲ್ಲಿ ಏ.1ರಿಂದ ಇ–ಆಫೀಸ್ ಅನುಷ್ಠಾನಕ್ಕೆ ಬರಲಿದೆ.

ನಗರಪಾಲಿಕೆಯ ಕೇಂದ್ರ ಕಚೇರಿ ಅಭಿಲೇಖಾಲಯದ ಎ, ಬಿ, ಸಿ, ಡಿ ವರ್ಗದ ಕಡತಗಳನ್ನು ರೆಕಾರ್ಡ್ ಇಂಡೆಕ್ಸಿಂಗ್ ಪುಟ 2ಕ್ಕೆ

## ಡಿನ್ನರ್ ಪಾಲಿಟಿಕ್ಸ್ ದೆಹಲಿಗೆ ಶಿಫ್ಟ್

### ಬೆಂಬಲಿಗರ ಸಭೆಯಲ್ಲಿ ಡಿಕೆಶಿ ರಾಜಕೀಯ ಚರ್ಚೆ



**ಬೆಂಗಳೂರು:** ಉಪ ಮುಖ್ಯಮಂತ್ರಿ ಡಿಕೆ.ಶಿವಕುಮಾರ್ ಅವರು ದೆಹಲಿಗೆ ಭೇಟಿ ನೀಡಿರುವ ಸಂದರ್ಭದಲ್ಲಿ ತಮ್ಮ ಬೆಂಬಲಿಗರೊಂದಿಗೆ ಖಾಸಗಿ ಹೋಟೆಲ್‌ನಲ್ಲಿ ಭೋಜನ ಕೂಟದೊಂದಿಗೆ ಸಭೆ ನಡೆಸಿದ್ದಾರೆ. ಈ ಬೆಳವಣಿಗೆ ಬೆನ್ನಲ್ಲೇ ರಾಜ್ಯ ರಾಜಕೀಯದಲ್ಲಿ ನಾಯಕತ್ವ ಬದಲಾವಣೆ ಕುರಿತು ಮತ್ತೆ ಚರ್ಚೆ ಆರಂಭವಾಗಿದೆ.

ಸಿದ್ದರಾಮಯ್ಯ ಅವರು ಎರಡೂವರೆ ವರ್ಷ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ ನಂತರ ರಾಜೀನಾಮೆ ನೀಡಬೇಕು ಎಂಬ ಹೈಕಮಾಂಡ್ ಮಟ್ಟದಲ್ಲಿ ಆದ ಒಪ್ಪಂದಕ್ಕೆ ಅನುಗುಣವಾಗಿ, ಮುಖ್ಯಮಂತ್ರಿ ಹುದ್ದೆಯಲ್ಲಿ ಬದಲಾವಣೆಗಾಗಿ ಕಾಂಗ್ರೆಸ್ ಹೈಕಮಾಂಡ್ ಮೇಲೆ ಒತ್ತಡ ಹೇರುವ ಕುರಿತು ಸಭೆಯಲ್ಲಿ ಮಾತುಕತೆ ನಡೆದಿದೆ ಎನ್ನಲಾಗಿದೆ.

ಸಭೆಯಲ್ಲಿ ಚರ್ಚೆಯಾಗಿರುವ ಮತ್ತೊಂದು ಪ್ರಮುಖ ವಿಚಾರವೆಂದರೆ, ವಿವಿಧ ಮಂಡಳಿ ಮತ್ತು ನಿಗಮಗಳಲ್ಲಿ ಅವಧಿ ವಿಸ್ತರಣೆ ಪಡೆದಿರುವ ಸದಸ್ಯರನ್ನು ಬದಲಾಯಿಸುವ ಬೇಡಿಕೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಪಾಳಯದ ಪ್ರಭಾವ ಕಡಿಮೆ ಮಾಡುವ ಉದ್ದೇಶದಿಂದ ಈ ಚರ್ಚೆ ನಡೆದಿದೆ ಎಂಬ ಮಾತು ಕೇಳಿಬಂದಿದೆ.

ಇದುವರೆಗೆ ಮೂರು ಅಥವಾ ಅದಕ್ಕಿಂತ ಹೆಚ್ಚು ಬಾರಿ ಗೆದ್ದಿರುವ ಸುಮಾರು 40 ಶಾಸಕರು ಸಿದ್ದರಾಮಯ್ಯ ಬೆಂಬಲಿಗರು ಏಪ್ರಿಲ್ 12 ರಂದು ದೆಹಲಿಗೆ ತೆರಳಿ ಕಾಂಗ್ರೆಸ್ ಹೈಕಮಾಂಡ್ ಅನ್ನು ಭೇಟಿ ಮಾಡುವ ಯೋಜನೆ ರೂಪಿಸಿದ್ದಾರೆಂದು ತಿಳಿದುಬಂದಿದೆ.

ಮುಂದಿನ ಸಚಿವ ಸಂಪುಟ ಪುನರ್ ರಚನೆಯಲ್ಲಿ ತಮ್ಮವರಿಗೆ ಸ್ಥಾನ ಕಲ್ಪಿಸುವುದು ಪ್ರಮುಖ ಬೇಡಿಕೆ. ಇದಕ್ಕೆ ಪ್ರತಿಯಾಗಿ ಡಿಕೆ. ಶಿವಕುಮಾರ್ ಆಪ್ತ ನಾಯಕರು ಕೂಡ ತಮ್ಮ ಶಕ್ತಿ ಪ್ರದರ್ಶನಕ್ಕೆ ಮುಂದಾಗಿದ್ದಾರೆ. ಕನಿಷ್ಠ ಐದು ಮಂದಿಗೆ ಸಚಿವ ಸ್ಥಾನ ನೀಡುವಂತೆ ಆಗ್ರಹಿಸಲು ಸಿದ್ಧರಾಗಿದ್ದಾರೆ. ಒಟ್ಟಾರೆ ಮುಖ್ಯಮಂತ್ರಿ ಸ್ಥಾನ ಬದಲಾವಣೆ ವಿಚಾರ ಮತ್ತೊಮ್ಮೆ ಮುನ್ನೆಲೆಗೆ ಬಂದಿದೆ.

## ಮುಕ್ತ ವಿವಿ ಭ್ರಷ್ಟಾಚಾರ ತನಿಖೆ: ಬ್ಯಾಂಕ್ ಖಾತೆ ಸ್ಥಗಿತಕ್ಕೆ ಆದೇಶ



**ಬೆಂಗಳೂರು:** ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ (ಕೆಎಸ್‌ಒಯು) ನಡೆದಿದೆ ಎನ್ನಲಾದ ಲಂಚ ಹಾಗೂ ಭ್ರಷ್ಟಾಚಾರ ಆರೋಪಗಳ ತನಿಖೆ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಕಠಿಣ ಕ್ರಮ ಕೈಗೊಂಡಿದೆ. ಪ್ರಕರಣಗಳ ತನಿಖೆಗೆ ನಿವೃತ್ತ ನ್ಯಾಯಮೂರ್ತಿ ಆರ್.ಆರ್.ಪಾಟೀಲ ಸಮಿತಿಯನ್ನು ನೇಮಕ ಮಾಡಲಾಗಿದೆ.

ತನಿಖೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಹಣಕಾಸಿನ ದುರುಪಯೋಗವನ್ನು ತಡೆಯಲು ವಿಶ್ವವಿದ್ಯಾಲಯದ ಎಲ್ಲಾ ಬ್ಯಾಂಕ್ ಖಾತೆಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲು ಉನ್ನತ ಶಿಕ್ಷಣ ಇಲಾಖೆ ಸಂಬಂಧಪಟ್ಟ ಬ್ಯಾಂಕುಗಳಿಗೆ ಸೂಚನೆ ನೀಡಿದೆ. ಈ ಕ್ರಮದಿಂದ ಪ್ರಕರಣಕ್ಕೆ ಸಂಬಂಧಿಸಿದ ಹಣಕಾಸು ವ್ಯವಹಾರಗಳ ಮೇಲೆ ಕಟ್ಟುನಿಟ್ಟಿನ ನಿಯಂತ್ರಣ ಹೇರಲು ಸರ್ಕಾರ ಮುಂದಾಗಿದೆ.

## ನಾಮಪತ್ರ ವಾಪಸ್ ಪಡೆಯಲ್ಲ: ಸಾಧಿಕ್

**ದಾವಣಗೆರೆ:** ಶಾಮನೂರು ಶಿವಶಂಕರಪ್ಪ ನಿಧನದ ಬಳಿಕ ತೆರವಾದ ದಾವಣಗೆರೆ ದಕ್ಷಿಣ ಕ್ಷೇತ್ರದ ಉಪ ಚುನಾವಣೆಗೆ ಕಾಂಗ್ರೆಸ್ ಬಂಡಾಯ ಅಭ್ಯರ್ಥಿ ಸಾಧಿಕ್ ಪೈಲ್ವಾನ್ ಕಣಕ್ಕಿಳಿದಿರುವುದು ಕಾಂಗ್ರೆಸ್‌ಗೆ ಪುಟ 2ಕ್ಕೆ

## ಯುಗಾದಿ, ಶಿವರಾತ್ರಿ ದಿನವೂ ಮಾಂಸ ತಿನ್ನುವೆ: ಸಿದ್ದರಾಮಯ್ಯ

**ಬೆಂಗಳೂರು:** ನಾನು ಯಾವುದೇ ಕೆಲಸ ಮಾಡಲು ರಾಹುಕಾಲ, ಗುಳಿಕಕಾಲ ನೋಡುವುದಿಲ್ಲ. ನನಗೆ ಅದರ ಮೇಲೆ ನಂಬಿಕೆಯೂ ಇಲ್ಲ ಎಂದು ಮುಖ್ಯ ಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ವಿಧಾನಸಭೆಯಲ್ಲಿ ಬಜೆಟ್ ಮೇಲಿನ ಭಾಷಣದ ಮೇಲಿನ ಚರ್ಚೆ ವೇಳೆ ಮಾತನಾಡಿದ ಅವರು, ನಾನು ಯಾವುದೇ ರಾಹುಕಾಲ, ಗುಳಿಕಕಾಲ ನೋಡುವುದಿಲ್ಲ. ಯಾರಾದರೂ ಯುಗಾದಿ– ಶಿವರಾತ್ರಿ ದಿನದಂದು ಮಾಂಸ ತಿಂತೀರಾ? ಎಂದು ಪ್ರಶ್ನಿಸಿದ ಸಿದ್ದರಾಮಯ್ಯ ಅವರು, ಆದರೆ, ನಾನು ತಿಂತೇನೆ. ನಮ್ಮ ಮನೇಲಿ ಹಬ್ಬ ಮಾಡ್ತಾರೆ. ಅದು ನನ್ನಿಷ್ಟ ನಾನು ತಿನ್ನುತ್ತೇನೆ ಎಂದರು.



ಮೊದಲೆಲ್ಲಾ ಟವೆಲ್ ಹಾಕುತ್ತಿದ್ದೆ. ಬಗ್ಗಿದಾಗ ಅದು ಬಿದ್ದು ಹೋಗುತ್ತಿತ್ತು. ಹಾಗಾಗಿ ಶಲ್ಯ ಹಾಕೋಕೆ ಶುರು ಮಾಡಿದೆ. ಈಗ ನಾನು ಹಾಕಿರುವ ಶಲ್ಯ ಡಿ.ಕೆ.ಶಿವಕುಮಾರ್ ಅವರು ತಂದು ಕೊಟ್ಟಿದ್ದು. ಇದರ ಬೆಲೆ 13 ಸಾವಿರ ಎಂದು ಮಾಹಿತಿ ನೀಡಿದರು.


ಈ ವೇಳೆ ಮಾತನಾಡಿದ ವಿರೋಧ ಪಕ್ಷದ ನಾಯಕ ಆರ್.ಅಶೋಕ್, ಈ ಬಾರಿ ರಾಹುಕಾಲ ಮುಗಿದ ಮೇಲೆ ಬಜೆಟ್ ಮಂಡಿಸಿದ್ದೀರಿ. ಮುಂದಿನ ಬಾರಿಯೂ ನೀವೇ ಬಜೆಟ್ ಮಂಡಿಸಬೇಕು ಎಂಬ ಉದ್ದೇಶದಿಂದ ಒಳ್ಳೆಯ ಸಮಯ ನೋಡಿ ಬಜೆಟ್ ಮಂಡಿಸಿದ್ರಿ ಎಂದು ವ್ಯಂಗ್ಯವಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ನಮ್ಮದು ಪ್ರಜಾಪ್ರಭುತ್ವ ಸರ್ಕಾರ. ಎಲ್ಲರ ಅಭಿಪ್ರಾಯಗಳಿಗೂ ಬೆಲೆ ಕೊಡಬೇಕು. ಮನೇಲೂ ಹೇಳಿದರು. ಅದರ ಜೊತೆಗೆ ಅಧಿಕಾರಿಗಳು ಕೂಡ ರಾಹುಕಾಲದಲ್ಲಿ ಬಜೆಟ್ ಮಂಡಿಸೋದು ಬೇಡ ಎಂದು ಸಲಹೆ ನೀಡಿದರು. ಹೀಗಾಗಿ ಅವರ ಸಲಹೆಯಂತೆ ನಡೆದುಕೊಂಡೆ ಎಂದು ಸಿದ್ದರಾಮಯ್ಯ ತಿಳಿಸಿದರು. ಪುಟ 2ಕ್ಕೆ

## ಹೈಕಮಾಂಡ್ ಹೇಳೋವರೆಗೆ ನಾನೇ ಸಿಎಂ

### ವಿಧಾನಸಭೆಯಲ್ಲಿ ವಿಪಕ್ಷಗಳ ಟೀಕೆಗೆ ಸಿದ್ದರಾಮಯ್ಯ ತಿರುಗೇಟು

**ಬೆಂಗಳೂರು:** ಕಾಂಗ್ರೆಸ್ ಹೈಕ ಮಾಂಡ್ ತೀರ್ಮಾನ ಮಾಡು ವವರೆಗೂ ನಾನೇ ರಾಜ್ಯದ ಮುಖ್ಯಮಂತ್ರಿ ಆಗಿರುತ್ತೇನೆ ಎಂದು ವಿಧಾನಸಭೆ ಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪುನರುಚ್ಚ ರಿಸಿದರು.



ಸದನದಲ್ಲಿ ಬಜೆಟ್ ಉತ್ತರ ವೇಳೆ ಡಿಕೆಶಿ ಹೆಸರು ಹಾಗೂ ಸ್ಪೀಕರ್ ಖಾದರ್ ಫೋಟೋ ಸೆಷನ್ ವಿಚಾರ ಪ್ರಸ್ತಾಪಿಸಿ ವಿಪಕ್ಷಗಳ ನಾಯಕರು ಸಿದ್ದರಾಮಯ್ಯ ಅವರ ಕಾಲೆಳೆದರು. ವಿಪಕ್ಷಗಳ ಲೇವಡಿಗೆ ಉತ್ತರಿಸಿದ ಸಿಎಂ, ನಮ್ಮಲ್ಲಿ ಎಲ್ಲ ಶಾಸಕರೂ ಸಿಎಂ ಹುದ್ದೆಗೆ ಅರ್ಹರು. ಯಾರೇ ಸಿಎಂ ಆದರೂ ನನಗೆ ಖುಷಿಯಾಗು ತ್ತದೆ. ಹೈಕಮಾಂಡ್ ಎಲ್ಲಿಯವರೆಗೆ ಇರು ಅಂತಾರೋ, ಅಲ್ಲೀವರೆಗೂ ಖಾದರ್ ಸ್ಪೀಕರ್ ಆಗಿರುತ್ತಾರೆ. ವಿಪಕ್ಷಗಳು ಏನೇ ಪುಟ 2ಕ್ಕೆ

### ಡಿಕೆಶಿ ಸಿಎಂ ಆಗಲಿ ಅನ್ನಿ!

ಶಾಸಕ ಸುನೀಲ್ ಕುಮಾರ್ ಮಾತಾಡಿ, ಡಿಕೆಶಿ ಸಿಎಂ ಆದ್ರೂ ಖುಷಿ ಪಡುವೆ ಅಂತ ಹೇಳಿ ಸರ್ ನೋಡೋಣ ಅಂತ ಸವಾಲ್ ಹಾಕಿದರು. ಇದಕ್ಕೆ ಉತ್ತರ ಕೊಟ್ಟ ಸಿಎಂ, ನೋಡಪ್ಪ, ಹೈಕಮಾಂಡ್ ತೀರ್ಮಾನ ಮಾಡುವವರೆಗೂ ನಾನೇ ಸಿಎಂ. ನಮ್ಮಲ್ಲಿ ಯಾರೂ ಸಿಎಂ ಆದರೂ ಖುಷಿನೇ. ಯಾಕೆ ಎಂ.ಬಿ ಪಾಟೀಲ್ ಆಗಬಾರದೇ? ಮುನಿಯಪ್ಪ ಆಗಬಾರದಾ? ಕೋನರೆಡ್ಡಿ, ಖಂಡ್ರೆ, ಶಿವಾನಂದ ಪಾಟೀಲ್, ದಿನೇಶ್ ಗುಂಡೂರಾವ್ ಸಿಎಂ ಆಗಬಾರದೇ? ನಮ್ಮಲ್ಲಿ ಎಲ್ಲರಿಗೂ ಸಿಎಂ ಆಗುವ ಅರ್ಹತೆ ಇದೆ. ಅವಕಾಶಗಳು ಸಿಗಬೇಕು ಅಷ್ಟೇ. ಎಲ್ಲರಿಗೂ ಯೋಗ್ಯತೆ ಇದೆ. ಅವಕಾಶ ಸಿಗಲ್ಲ ಅಷ್ಟೇ. ಅವಕಾಶ ಬಂದರೆ ಎಲ್ರೂ ಆಗ್ತಾರೆ ಅಂದಿದ್ದಾರೆ. ಇಷ್ಟೆಲ್ಲಾ ಹೇಳಿದರೂ ಕೊನೆಗೂ ಡಿಕೆಶಿ ಹೆಸರನ್ನು ಸಿದ್ದರಾಮಯ್ಯ ಹೇಳಲೇ ಇಲ್ಲ. ಈ ಸಂದರ್ಭದಲ್ಲಿ ಸದನದಲ್ಲಿ ಡಿ.ಕೆ.ಶಿವಕುಮಾರ್ ಇರಲಿಲ್ಲ.

## ಗ್ಯಾಸ್ ಬುಕ್ಕಿಂಗ್ ಅವಧಿ ಬದಲಾವಣೆ ಆಗಿಲ್ಲ


**ನವದೆಹಲಿ:** ಗ್ಯಾಸ್ ಬುಕ್ಕಿಂಗ್ ಅವಧಿಯಲ್ಲಿ ಬದಲಾವಣೆಯಾಗಿದೆ ಎಂಬ ವರದಿ ಸರಿಯಲ್ಲ. ಯಾವುದೇ ರೀತಿಯ ಬದಲಾವಣೆಗಳಾಗಿಲ್ಲ ಎಂದು ಕೇಂದ್ರ ಸರ್ಕಾರ ಸ್ಪಷ್ಟನೆ ನೀಡಿದೆ.

ಈ ಕುರಿತು ಇಂಡಿಯನ್ ಆಯಿಲ್ ಕಂಪನಿ ಪೋಸ್ಟ್ ಹಂಚಿಕೊಂಡಿದ್ದು, ಎಲ್‌ಪಿಜಿ ರಿಫೀಲ್ ಬುಕ್ಕಿಂಗ್ ಅವಧಿಯಲ್ಲಿ ಬದಲಾವಣೆಗಳಾಗಿವೆ ಎಂಬ ವರದಿಗಳು ತಪ್ಪಾಗಿವೆ. ಸದ್ಯ ಜಾರಿಯಲ್ಲಿರುವ ಅವಧಿಯಲ್ಲಿ ಯಾವುದೇ ಬದಲಾವಣೆಗಳಿಲ್ಲ. ದೇಶಾದ್ಯಂತ ಎಲ್‌ಪಿಜಿ ಸರಬರಾಜಿನಲ್ಲಿಯೂ ಯಾವುದೇ ಸಮಸ್ಯೆ ಇಲ್ಲ. ಸ್ಟಾಕ್ ಇದೆ ಎಂದು ಸರ್ಕಾರ ತಿಳಿಸಿದೆ.

ಪಿಎಂಯುವೈ (ಉಜ್ವಲ್ ಗ್ಯಾಸ್) 45 ದಿನ, ನಗರ ಪ್ರದೇಶಕ್ಕೆ 25 ದಿನ ಹಾಗೂ ಗ್ರಾಮೀಣ ಭಾಗಕ್ಕೆ 45 ದಿನ ಇದರಲ್ಲಿ ಯಾವುದೇ ಬದಲಾವಣೆಯಿಲ್ಲ. ಜನರು ಅಧಿಕೃತವಾಗಿ ಕಂಪನಿಗಳಿಂದ ಬರುವ ಮಾಹಿತಿಗಳ ಮೇಲೆ ಮಾತ್ರ ಗಮನಹರಿಸಿ. ಗಾಬರಿಯಲ್ಲಿ ಗ್ಯಾಸ್ ಬುಕ್ ಮಾಡಬೇಡಿ ಎಂದು ತಿಳಿಸಿದೆ.

## ಪಿಎನ್‌ಜಿಗೆ ಬದಲಾವಣೆ ಕಡ್ಡಾಯ: ಕೇಂದ್ರದ ಆದೇಶ

**ನವದೆಹಲಿ:** ಒಂದೇ ಇಂಧನ ಮೂಲದ ಮೇಲಿನ ಅವಲಂಬನೆ ಕಡಿಮೆ ಮಾಡಲು ಪೈಪ್ಡ್ ನೈಸರ್ಗಿಕ ಅನಿಲ (ಪಿಎನ್‌ಜಿ) ಸಂಪರ್ಕ ಜಾಲ ಹೊಂದಿರುವ ಮನೆಗಳಿಗೆ ಎಲ್‌ಪಿಜಿ ಪೂರೈಕೆ ಸ್ಥಗಿತಕ್ಕೆ ಕೇಂದ್ರ ಸರ್ಕಾರ ಮುಂದಾಗಿದೆ.



ಗ್ರಾಹಕರು ಪೈಪ್ಡ್ ನೈಸರ್ಗಿಕ ಅನಿಲಕ್ಕೆ ಬದಲಾಯಿಸಲು ವಿಫಲವಾದರೆ ಮನೆಗಳಿಗೆ ಅಡುಗೆ ಅನಿಲ ಪೂರೈಕೆಯನ್ನು ನಿಲ್ಲಿ ಸಲಾಗುವುದು. ಅಡುಗೆಮನೆ ಬರ್ನರ್‌ಗೆ ಪೈಪ್‌ಲೈನ್‌ಗಳ ಮೂಲಕ ಪಿಎನ್‌ಜಿಯನ್ನು ನಿರಂತರವಾಗಿ ಪೂರೈಸಲಾಗುತ್ತದೆ. ಇದು ಮರು ಪೂರಣವನ್ನು ಕಾಯ್ದಿರಿಸುವ ಅಗತ್ಯವನ್ನು ನಿವಾರಿಸುತ್ತದೆ. ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಪಶ್ಚಿಮ ಏಷ್ಯಾದಲ್ಲಿನ ಯುದ್ಧದಿಂದಾಗಿ ಭಾರತ ಗ್ಯಾಸ್ ಕೊರ ತೆಯನ್ನು ಎದುರಿಸುತ್ತಿರುವ ಪುಟ 2ಕ್ಕೆ

## ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪ್ರಕಟ


**ಬೆಂಗಳೂರು:** ಕರ್ನಾಟಕ ಸಾಹಿತ್ಯ ಅಕಾಡೆಮಿಯ 2025ನೇ ಸಾಲಿನ ವಾರ್ಷಿಕ ಪ್ರಶಸ್ತಿಗಳನ್ನು ಬುಧವಾರ ಪ್ರಕಟಿಸಲಾಗಿದೆ. ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಕೊಡುಗೆ ನೀಡಿದ ಹಿರಿಯ ಸಾಹಿತಿಗಳಿಗೆ ನೀಡಲಾಗುವ ಕರ್ನಾಟಕ ಸಾಹಿತ್ಯ ಅಕಾಡೆಮಿ ವರ್ಷದ ಗೌರವ ಪ್ರಶಸ್ತಿಗೆ ಪ್ರೊ.ಶಿವರಾಮಯ್ಯ, ಚಂದ್ರಶೇಖರ ತಾಳ್ಯ, ಡಾ. ಚಂದ್ರಶೇಖರ ಪೋಕಳೆ, ಡಾ.ವಸುಂಧರಾ ಭೂಪತಿ ಹಾಗೂ ಡಾ.ಎಸ್.ತುಕಾರಾಂ ಅವರನ್ನು ಆಯ್ಕೆ ಮಾಡಲಾಗಿದೆ. ಈ ಪ್ರಶಸ್ತಿಯು 50 ಸಾವಿರ ನಗದು ಒಳಗೊಂಡಿದೆ.



50ರಿಂದ 60 ವರ್ಷ ವಯೋಮಾನದ ಸಾಹಿತಿಗಳಿಗೆ ನೀಡಲಾಗುವ ಸಾಹಿತ್ಯಶ್ರೀ ಪ್ರಶಸ್ತಿಗೆ ಬಿ.ಎಂ.ಬಷೀರ್, ಕಂಕನಾಡಿ ನಾರಾಯಣ ಸೇರಿದಂತೆ 10 ಮಂದಿಯನ್ನು ಆಯ್ಕೆ ಮಾಡಲಾಗಿದೆ. ಈ ಪ್ರಶಸ್ತಿಯು 25 ಸಾವಿರ ನಗದು ಒಳಗೊಂಡಿದೆ. 2024ರಲ್ಲಿ ಪ್ರಕಟಗೊಂಡಿರುವ 17 ವಿವಿಧ ಸಾಹಿತ್ಯ ಪ್ರಕಾರದ ಕೃತಿಗಳು 2024ನೇ ಸಾಲಿನ ವರ್ಷದ ಪುಸ್ತಕ ಬಹುಮಾನಕ್ಕೆ ಆಯ್ಕೆಯಾಗಿವೆ. ಈ ಪ್ರಶಸ್ತಿಯು 25 ಸಾವಿರ ನಗದು ಒಳಗೊಂಡಿದೆ. 2024ನೇ ಸಾಲಿನ ಅಕಾಡಮಿ ದತ್ತಿ ಬಹುಮಾನ ಪುರಸ್ಕೃತರ ಪಟ್ಟಿಯನ್ನು ಕೂಡ ಬಿಡುಗಡೆ ಮಾಡಲಾಗಿದೆ.

## ಸಿಎಂಗೆ ಕ್ಲೀನ್ ಚಿಟ್ ಪ್ರಶ್ನಿಸಿ ಹೈಕೋರ್ಟ್‌ಗೆ ಮೇಲ್ಮನವಿ

**ಬೆಂಗಳೂರು:** ಮುಡಾ ಹಗರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನೀಡಿರುವ ಕ್ಲೀನ್ ಚಿಟ್ ಪ್ರಶ್ನಿಸಿ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.



ಹಗರಣ ಪ್ರಕರಣದ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತವರ ಕುಟುಂಬ ಸದಸ್ಯರ ವಿರುದ್ಧ ಮೈಸೂರಿನ ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ ಸಲ್ಲಿಸಿದ ಬಿ ರಿಪೋರ್ಟ್ ಅನ್ನು ಅಂಗೀಕರಿಸಿದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಕ್ರಮ ಪ್ರಶ್ನಿಸಿ ಸ್ನೇಹಮಯಿ ಕೃಷ್ಣ ಹೈಕೋರ್ಟ್ ಗೆ ಅರ್ಜಿ ಸಲ್ಲಿಸಿದ್ದಾರೆ.

ಅಧಿಕಾರ ದುರುಪಯೋಗ ಆರೋಪ ಎದುರಿಸುತ್ತಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಅವರ ಕುಟುಂಬದವರಿಗೆ ಅನುಕೂಲವಾಗುವಂತೆ ಬಿ ರಿಪೋರ್ಟ್ ಅಂಗೀಕರಿಸಿರುವುದು ತನಿಖಾ ಪ್ರಕ್ರಿಯೆಯ ಪುಟ 2ಕ್ಕೆ

## ಹಾರ್ಮುಜ್ ಜಲಸಂಧಿ ಓಪನ್: ಟ್ರಂಪ್ ಸುಳಿವು

**ವಾಷಿಂಗ್ಟನ್:** ಇರಾನ್ ನಮಗೆ ದೊಡ್ಡ ಗಿಫ್ಟ್ ಕೊಟ್ಟಿದೆ ಎಂದು ಹಾರ್ಮುಜ್ ಜಲಸಂಧಿ ಓಪನ್ ಬಗ್ಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸುಳಿವು ನೀಡಿದ್ದಾರೆ. ಮಧ್ಯಪ್ರಾಚ್ಯ ಪುಟ 2ಕ್ಕೆ

## ಮೋದಿ ಪ್ರಧಾನಿಯಾದ ಬಳಿಕ 165 ಲಕ್ಷ ಕೋಟಿ ಸಾಲ: ಸಿಎಂ

**ಬೆಂಗಳೂರು:** ನರೇಂದ್ರ ಮೋದಿ ದೇಶದ ಪ್ರಧಾನಿ ಆದ ಬಳಿಕ 165 ಲಕ್ಷ ಕೋಟಿ ರೂ. ಸಾಲ ಮಾಡಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಿಸಿದರು.

ವಿಧಾನಸಭೆಯಲ್ಲಿ ರಾಜ್ಯದ ಸಾಲ ಹಾಗೂ ಕೇಂದ್ರದ ಸಾಲದ ಬಗ್ಗೆ ತುಲನೆ ಮಾಡಿ ವಿವರಣೆ ನೀಡಿದ ಸಿಎಂ, ನಾವು ಸಾಲ ಮಾಡಿದ್ದೀವಿ, ಇಲ್ಲ ಅಂತ ಹೇಳೋದಿಲ್ಲ. ರಾಜ್ಯದಲ್ಲಿ 8,24,369 ಕೋಟಿ ರೂ. ಸಾಲ ಮಾಡಿದ್ದೇವೆ. ನಾವೆಷ್ಟು ಸಾಲ ಮಾಡಿದ್ದೇವೆ, ನೀವೆಷ್ಟು ಮಾಡಿದ್ದೀರಿ ಎಂದು ಎಲ್ಲ ಹೇಳುತ್ತೇನೆ. ಕೇಂದ್ರ ಸರ್ಕಾರ ಎಷ್ಟು ಸಾಲ ಮಾಡಿದೆ ಗೊತ್ತಾ? ಅದನ್ನೆಲ್ಲ ನೀವು ತಿಳಿದುಕೊಳ್ಳಬೇಕು. 2014ರಲ್ಲಿ ಕೇಂದ್ರದ ಸಾಲ 53.11 ಲಕ್ಷ ಕೋಟಿ ರೂ. ಇತ್ತು. ಈಗ 2026–27 ರಲ್ಲಿ 218 ಲಕ್ಷ ಕೋಟಿಗೂ ಹೆಚ್ಚು ಸಾಲ ಮಾಡಿದ್ದಾರೆ ಎಂದು ಮಾಹಿತಿ ನೀಡಿದರು.

ಮೋದಿ ಪಿಎಂ ಆದ ಬಳಿಕ 165 ಲಕ್ಷ ಕೋಟಿ ಸಾಲ ಮಾಡಿದ್ದಾರೆ. ಅವರು ಸಾಲ ಮಾಡಿಲ್ವಾ? ಭಾರತ ಸಾಲದ ದೇಶ ಅಲ್ವಾ? ಕೇಂದ್ರ ಈ ವರ್ಷ 16.96 ಲಕ್ಷ





ಕೋಟಿ ಸಾಲ ಮಾಡಿದರೆ, ನಾವು 1.32 ಲಕ್ಷ ಕೋಟಿ ಮಾಡಿದ್ದೇವೆ. ಇದನ್ನೆಲ್ಲ ನಿಮ್ಮ ಪಕ್ಷದವರು ನಿಮಗೆ ಹೇಳಿಕೊಟ್ಟಿಲ್ಲ ಅನಿಸುತ್ತೆ ಎಂದು ವಿಪಕ್ಷದವರ ಕಾಲೆಳೆದರು.

ರಾಜ್ಯಕ್ಕೆ ತೆರಿಗೆ ಅನ್ಯಾಯ ಆಗಿದೆ. ತೆರಿಗೆ ತಾರತಮ್ಯ ವಿಚಾರವಾಗಿ ಕೇಂದ್ರ ಬಳಿಗೆ ಅಧಿವೇಶನದ ಬಳಿಕ ನಿಯೋಗ ಹೋಗೋಣ. ನಿಮ್ಮ ನೇತೃತ್ವದಲ್ಲೇ ನಿಯೋಗ ಹೋಗೋಣ. ಭದ್ರಾ ಮೇಲ್ದಂಡೆ ಯೋಜನೆಗೆ 5,300 ಕೋಟಿ ಕೊಡುತ್ತೇವೆ ಎಂದಿದ್ದರು. ನಾಲ್ಕು ಬಜೆಟ್ ನಲ್ಲೂ ಒಂದು ರೂಪಾಯಿ ಬಿಡುಗಡೆ ಪುಟ 2ಕ್ಕೆ

## ಕುರ್ಚಿಗೆ ಅಂಟಿಕೊಂಡು ಆತ್ಮವಂಚನೆ

### ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಆರ್.ಅಶೋಕ್ ವಾಗ್ದಾಳಿ

**ಬೆಂಗಳೂರು:** ರಾಜ್ಯದಲ್ಲಿ ದಾಖಲೆಯ 17 ಬಜೆಟ್ ಮಂಡಿಸಿರುವ, ಹೈಕಮಾಂಡ್ ಒಪ್ಪಿದರೆ ಇನ್ನೆರಡು ಬಜೆಟ್ ಮಂಡಿಸಲು ಸಿದ್ಧವಿರುವ ಸ್ವಯಂಘೋಷಿತ ಆರ್ಥಿಕ ತಜ್ಞರು, ಬಜೆಟ್ ಬೃಹಸ್ಪತಿಗಳಿಗೆ ಬಂಡವಾಳ ವೆಚ್ಚ ಮತ್ತು ಉತ್ಪಾದಕ ಆಸ್ತಿ ಸೃಜನೆ ಬಗ್ಗೆ ಪಾಠ ಹೇಳಬೇಕಾದ ಶೋಚನೀಯ ಪರಿಸ್ಥಿತಿ ಬಂದಿರುವುದು ವಿಷಾದನೀಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ವಿಧಾನಸಭೆ ವಿಪಕ್ಷ ನಾಯಕ ಆರ್.ಅಶೋಕ್ ವಾಗ್ದಾಳಿ ನಡೆಸಿದರು.

ಬಜೆಟ್ ಮೇಲಿನ ಚರ್ಚೆಗೆ ಸದನದಲ್ಲಿ ಸಿದ್ದರಾಮಯ್ಯ ಅವರು ನೀಡಿರುವ ಉತ್ತರದ ವಿರುದ್ಧ ಅಶೋಕ್ ತೀವ್ರವಾಗಿ ಕಿಡಿಕಾರಿದರು. ಸಿದ್ದರಾಮಯ್ಯನವರೇ, 17 ಬಜೆಟ್ ಮಂಡಿಸಿರುವ ನಿಮಗೆ ರಾಜ್ಯದ ಆರ್ಥಿಕ ಪರಿಸ್ಥಿತಿ ಎಷ್ಟು ಹದಗೆಟ್ಟಿದೆ, ಇದರ ದುಷ್ಪರಿಣಾಮಗಳೇನು ಎನ್ನುವುದು ಎಲ್ಲರಿಗಿಂತ ಚೆನ್ನಾಗಿ ಗೊತ್ತಿದೆ. ಆದರೆ ಕುರ್ಚಿಗೆ ಅಂಟಿಕೊಂಡು ತಮಗೆ ತಾವೇ ಆತ್ಮವಂಚನೆ ಮಾಡಿಕೊಳ್ಳುತ್ತಿದ್ದೀ



ರಲ್ಲ, ಇದು ನಿಮ್ಮ ರಾಜಕೀಯ ಜೀವನದ ಅತ್ಯಂತ ದೊಡ್ಡ ದುರಂತ ಎಂದು ಕಿಡಿಕಾರಿದರು.

ಸಿದ್ದರಾಮಯ್ಯ ಅವರೇ, ಸಾಲ ಮಾಡುವುದು ತಪ್ಪಲ್ಲ. ಆದರೆ, ಆ ಸಾಲವನ್ನು ಯಾವ ಉದ್ದೇಶಕ್ಕೆ ಬಳಸಲಾಗುತ್ತಿದೆ ಎಂಬುದು ಮುಖ್ಯ. ಕೇಂದ್ರ ಸರ್ಕಾರ ಮಾಡಿರುವ ಸಾಲದ ದೊಡ್ಡ ಭಾಗ ಬಂಡವಾಳ ವೆಚ್ಚಕ್ಕೆ ಹೋಗುತ್ತಿದೆ. ಇಂದು ಕೇಂದ್ರ ಸರ್ಕಾರದ ಬಂಡವಾಳ ವೆಚ್ಚ ಸುಮಾರು ರೂ.12.2 ಲಕ್ಷ ಕೋಟಿ, ಅಂದರೆ ಸುಮಾರು ಶೇ.3.1ರಷ್ಟು, ಮತ್ತು ಒಟ್ಟು ಸರ್ಕಾರಿ ವೆಚ್ಚದ ಸುಮಾರು ಶೇ.22–23ರಷ್ಟು. ಅಂದರೆ ಕೇಂದ್ರ ಸರ್ಕಾರ ತಾನು ಮಾಡಿದ ಸಾಲವನ್ನು ಮುಖ್ಯವಾಗಿ ರಸ್ತೆಗಳು, ರೈಲು ಮಾರ್ಗಗಳು, ಮೂಲಸೌಕರ್ಯ ಹಾಗೂ ದೀರ್ಘಕಾಲಿಕ ಆರ್ಥಿಕ ಸಾಮರ್ಥ್ಯ ನಿರ್ಮಾಣಕ್ಕೆ ಬಳಸುತ್ತಿದೆ.

ಆದರೆ, ನಿಮ್ಮ ನೇತೃತ್ವದ ಕಾಂಗ್ರೆಸ್ ಸರ್ಕಾರದ ಅಂಕಿ–ಅಂಶಗಳು ರಾಜ್ಯವನ್ನು ಬೆಚ್ಚಿಬೀಳಿಸುವಂತಿವೆ. ತಾವು ಮಂಡಿಸಿದ 2026–27ರ ಕರ್ನಾಟಕ ರಾಜ್ಯ ಬಜೆಟ್‌ನ ಒಟ್ಟು ಗಾತ್ರ ರೂ.4.48 ಲಕ್ಷ ಕೋಟಿ ಇದ್ದರೂ, ಅದರಲ್ಲಿ ಬಂಡವಾಳ ವೆಚ್ಚ ಕೇವಲ ರೂ.74,682 ಕೋಟಿ ಮಾತ್ರ. ಅಂದರೆ ಇದು ಒಟ್ಟು ವೆಚ್ಚದ ಸುಮಾರು ಶೇ.16–17ರಷ್ಟು ಮಾತ್ರ, ಮತ್ತು ಜಿಡಿಪಿಯ ಕೇವಲ ಶೇ.2.2ರಿಂದ 2.5.ರಷ್ಟು ಮಾತ್ರ ಎಂದು ಆರೋಪಿಸಿದರು.

ರಾಜ್ಯದ ಒಟ್ಟು ಸಾಲ ಈಗಾಗಲೇ ಪುಟ 2ಕ್ಕೆ

# ಕೋಟೆಯಲ್ಲಿ ನಾಳೆ ಜನರೊಂದಿಗೆ ಜನತಾದಳ



ಎಚ್.ಡಿ.ಕೋಟೆ: ಪಟ್ಟಣದ ಹುಣಸೂರು–ಬೇಗೂರು ಮುಖ್ಯರಸ್ತೆಯ ಸಂತೆಮಾಳದಲ್ಲಿ ಶುಕ್ರವಾರ ನಡೆಯುವ ಜನರೊಂದಿಗೆ ಜನತಾದಳ ಕಾರ್ಯಕ್ರಮಕ್ಕೆ ಪೂರ್ವ ಸಿದ್ದತೆ ಮಾಡಿಕೊಂಡಿದ್ದು, ಜೆಡಿಎಸ್ ಪಕ್ಷದ ಹಿರಿಯ ಮುಖಂಡರುಗಳು, ಪಕ್ಷದ ಕಾರ್ಯಕರ್ತರುಗಳು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಪಟ್ಟಣದ ಪ್ರವಾಸಿ ಮಂದಿರದಲ್ಲಿ ಬುಧವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಜೆಡಿಎಸ್ ಮುಖಂಡ ಎಂ. ಕೃಷ್ಣನಾಯಕ ಹೇಳಿದರು.

ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿ, ಜೆಡಿಎಸ್ ರಾಜ್ಯ ಘಟಕದ ಯುವ ನಾಯಕ ನಿಖಿಲ್ ಕುಮಾರ ಸ್ವಾಮಿ ಅವರು 60 ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರವಾಸ ಮುಗಿಸಿ ಮಾರ್ಚ್ 27ರಂದು ಹೆಚ್.ಡಿ.ಕೋಟೆಯಲ್ಲಿ ನಡೆಯುವ ಜನರೊಂದಿಗೆ ಜನತಾದಳ ಕಾರ್ಯಕ್ರಮಕ್ಕೆ ಬೆ.11ಗಂಟೆಗೆ ಹ್ಯಾಂಡ್‌ಪೋಸ್ಟ್‌ಗೆ ಬರಲಿದ್ದು, ಅಲ್ಲಿಂದ ಅವರನ್ನು ಸ್ವಾಗತಿಸಿ ರೋಡ್ ಶೋ ಮೂಲಕ ಹೆಚ್.ಡಿ.ಕೋಟೆ ಪಟ್ಟಣದ ಸಂತೇಮಾಳದಲ್ಲಿ ನಡೆಯುವ ವೇದಿಕೆ ಕಾರ್ಯಕ್ರಮಕ್ಕೆ ಬರಮಾಡಿಕೊಳ್ಳಲಾಗುವುದು ಎಂದರು. ಮೈಸೂರು ಜಿಲ್ಲೆಯ ಮಾಜಿ ಸಚಿವರು, ಹಿರಿಯ ರಾಜಕಾರಣಿ ಸಾ.ರಾ. ಮಹೇಶ್‌ರವರ ನೇತೃತ್ವದಲ್ಲಿ ಪಕ್ಷದ ಹಿರಿಯ ಗಣ್ಯರುಗಳು ಮೈಸೂರಿನ ಬೇರೆ ಬೇರೆ ತಾಲೂಕಿನ ಜೆಡಿಎಸ್ ಪಕ್ಷದ ಮಾಜಿ ಹಾಗೂ ಹಾಲಿ ಶಾಸಕರುಗಳು, ಜಿಲ್ಲಾಧ್ಯಕ್ಷರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ತಾಲೂಕಿನ ಜೆಡಿಎಸ್ ಪಕ್ಷದ ಹಿರಿಯ, ಕಿರಿಯ ಮುಖಂಡರುಗಳು, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ, ಟಿಎಪಿಸಿಎಂಎಸ್ ನ ಸದಸ್ಯರುಗಳು ನಿಖಿಲ್‌ಕುಮಾರಸ್ವಾಮಿ ಅವರನ್ನು ಅದ್ದೂರಿ ಸ್ವಾಗತದೊಂದಿಗೆ ಕಾರ್ಯಕ್ರಮಕ್ಕೆ ಬರಮಾಡಿಕೊಳ್ಳಲು ಸಕಲ ಸಿದ್ದತೆಗಳನ್ನು ಮಾಡಿಕೊಂಡಿದ್ದಾರೆ ಎಂದರು.

ರಾಜ್ಯದಲ್ಲಿ ಜೆಡಿಎಸ್ ಪಕ್ಷವು ನೊಂದವರಪರ, ಬಡವರಪರವಾಗಿದ್ದು, ತಾಲೂಕಿನಲ್ಲಿ ಹುಲಿದಾಳಿಗೊಳಗಾದ ಕುಟುಂಬಗಳಿಗೆ ಕುಟುಂಗಳಿಗೆ ನಿಖಿಲ್‌ಕುಮಾರ್‌ಸ್ವಾಮಿ ಭೇಟಿ ನೀಡಿ ಸಾಂತ್ವಾನ ಹೇಳಿ ಅವರ ಕುಟುಂಬಕ್ಕೆ ನೆರವಾದರು. 1989ನೇ ಇಸವಿಯಲ್ಲಿ ಇಡೀ ರಾಜ್ಯವೇ ಸೋತಂತಹ ಸಂದರ್ಭದಲ್ಲಿ ಹೆಗ್ಗಡ ದೇವನಕೋಟೆಯ ಜನತೆ ಜೆಡಿಎಸ್ ಪಕ್ಷಕ್ಕೆ ಮತ ನೀಡಿ ಆಶೀರ್ವದಿಸಿದ ಕೈ ಹಿಡಿದ ಕ್ಷೇತ್ರವಿದು ಎಂದು ನೆನಪಿಸಿ ಕೊಂಡರು. ಜೆಡಿಎಸ್‌ನ ಮಹಿಳಾ ಕಾರ್ಯಕರ್ತರುಗಳು, ಪಕ್ಷದ ಮುಖಂಡರುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ತಾಲೂಕು ಜೆಡಿಎಸ್ ಪಕ್ಷದ ಅಧ್ಯಕ್ಷ ರಾಜೇಂದ್ರ, ಸರಗೂರು ತಾಲೂಕು ಅಧ್ಯಕ್ಷ ಗೋಪಾಲಸ್ವಾಮಿ, ಮಾಜಿ ತಾಲೂಕು ಜೆಡಿಎಸ್ ಅಧ್ಯಕ್ಷ ನರಸಿಂಹ ಗೌಡ, ಒಕ್ಕಲಿಗ ಸಮಾಜದ ತಾಲೂಕು ಅಧ್ಯಕ್ಷ ವೈ ಬಿ ಹರೀಶ್ ಗೌಡ, ಯೋಗನರಸಿಂಹ, ಮಟಕೆರೆ ರಾಜೇಶ್, ವಡ್ಡರಗುಡಿ ರಘು, ಎಲೆಹುಂಡಿ ವೆಂಕಟೇಗೌಡ, ಶಿವಯ್ಯ, ಬೊಪ್ಪನಹಳ್ಳಿ ಶಿವು, ಕಾಳಪ್ಪಾಜಿ, ಹಾಗೂ ಇನ್ನಿತರರು ಇದ್ದರು.

> ಜನರೊಂದಿಗೆ ಜನತಾದಳ ಸದಸ್ಯತ್ವ ಅಭಿಯಾನ ಕಾರ್ಯಕ್ರಮವನ್ನು ಜೆಡಿಎಸ್ ಮುಖಂಡ ಕೃಷ್ಣನಾಯಕ ಅವರ ನೇತೃತ್ವದಲ್ಲಿ ಹಮ್ಮಿಕೊಂಡಿದ್ದು, ಪಕ್ಷದ ಅಧ್ಯಕ್ಷರುಗಳು, ಮುಖಂಡರುಗಳ ಜೊತೆಗೂಡಿ ಪ್ರತಿಯೊಂದು ಗ್ರಾಮದ ಬೂತ್ ಮಟ್ಟಕ್ಕೂ ಭೇಟಿ ನೀಡಿ ಹೆಚ್ಚಿನ ಜನರನ್ನ ಸೇರಿಸಿ ವೇದಿಕೆ ಕಾರ್ಯಕ್ರಮವನ್ನು ಮಾಡುತ್ತಿದ್ದು, ಈ ಕಾರ್ಯಕ್ರಮಕ್ಕೆ ಜೆಡಿಎಸ್ ರಾಜ್ಯ ಘಟಕದ ಯುವ ನಾಯಕ ನಿಖಿಲ್ ಕುಮಾರಸ್ವಾಮಿ ಆಗಮಿಸುತ್ತಿದ್ದು, ಅದ್ದೂರಿ ವೇದಿಕೆ ಕಾರ್ಯಕ್ರಮ ನಡೆಯಲಿದೆ
>
> **ಗೋಪಾಲಸ್ವಾಮಿ** ಸರಗೂರು ತಾಲೂಕು ಜೆಡಿಎಸ್ ಅಧ್ಯಕ್ಷ.

> ತಾಲೂಕಿನಲ್ಲಿ ಸತತವಾಗಿ 3 ಬಾರಿ ಒಂದೇ ಕುಟುಂಬಕ್ಕೆ ಅಧಿಕಾರವನ್ನು ನೀಡಿದ್ದೇವೆ, 2028ರಲ್ಲಿ ನಡೆಯುವ ವಿಧಾನಸಭಾ ಕ್ಷೇತ್ರ ಚುನಾವಣೆಯಲ್ಲಿ ಜೆಡಿಎಸ್ ಮುಖಂಡ ಕೃಷ್ಣನಾಯಕ ಹೆಚ್ಚಿನ ಮತಗಳ ಅಂತರದಿಂದ ಜಯಭೇರಿ ಭಾರಿಸಲಿದ್ದಾರೆ.
>
> **–ರಾಜೇಂದ್ರ** ಜೆಡಿಎಸ್ ತಾಲೂಕು ಅಧ್ಯಕ್ಷ ಹೆಚ್.ಡಿ.ಕೋಟೆ.

### ಆಡಳಿತ ಮೆಚ್ಚಿ ಪಕ್ಷಕ್ಕೆ ಸೇರ್ಪಡೆ

ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವರ ಆಡಳಿತದ ಅವಧಿಯಲ್ಲಿ ರೈತರ ಸಾಲಮನ್ನಾ, ಕೂಲಿಕಾರ್ಮಿಕರ ಪರವಾಗಿ ಕೊಟ್ಟ ಕಾರ್ಯಕ್ರಮಗಳು, ಲಾಟರಿ ನಿಷೇದ, ಸಾರಾಯಿ ನಿಷೇದ ಇವೆಲ್ಲವನ್ನು ಅರಿತು ಜನರು ಕಾಂಗ್ರೆಸ್ ಪಕ್ಷವನ್ನು ತೊರೆದು ಕಾರ್ಯಕ್ರಮ ಮುಗಿದ ಬಳಿಕ ನಿಖಿಲ್ ಕುಮಾರ್‌ಸ್ವಾಮಿ ಅವರ ಸಮ್ಮುಖದಲ್ಲಿ ತಾಲ್ಲೂಕಿನಲ್ಲಿ ಸುಮಾರು ಹದಿನೆಂಟು ಗ್ರಾಮಗಳಿಂದ ಒಂದು ಸಾವಿರಕ್ಕೂ ಹೆಚ್ಚು ಜನರು ಜೆಡಿಎಸ್ ಪಕ್ಷಕ್ಕೆ ಸೇರ್ಪಡೆಯಾಗಲಿದ್ದಾರೆ ಎಂದು ಕೆ.ಎಂ.ಕೃಷ್ಣನಾಯಕ ತಿಳಿಸಿದರು.

# ಸ್ತ್ರೀ ಆರೋಗ್ಯವಾಗಿದ್ದರೆ ಕುಟುಂಬವೇ ಆರೋಗ್ಯ

## ಆರ್‌ಎಲ್‌ಎಚ್ ಪಿ ನಿರ್ದೇಶಕಿ ಸರಸ್ವತಿ ಅಭಿಮತ | ಮಹಿಳಾ ದಿನಾಚರಣೆ




ಮೈಸೂರು: ಕುಟುಂಬದಲ್ಲಿ ಹೆಣ್ಣು ಮಕ್ಕಳು ಆರೋಗ್ಯವಾಗಿದ್ದರೆ ಇಡೀ ಕುಟುಂಬವೇ ಆರೋಗ್ಯದಿಂದ ಇರುವಂತೆ ಆಕೆ ನೋಡಿಕೊಳ್ಳಲಿದ್ದಾಳೆ. ಹೀಗಾಗಿ ನಿಮ್ಮ ಆರೋಗ್ಯದ ಕಡೆ ಹೆಚ್ಚಿನ ಗಮನಹರಿಸಿ ಎಂದು ಆರ್ ಎಲ್‌ಎಚ್ ಪಿ ನಿರ್ದೇಶಕಿ ಸರಸ್ವತಿ ತಿಳಿಸಿದರು.

ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ, ಚೈಲ್ಡ್ ಫಂಡ್ ಇಂಟರನ್ಯಾಷನಲ್ ಬೆಂಗಳೂರು ಮತ್ತು ಧ್ವನಿ ಮಹಿಳಾ ಒಕ್ಕೂಟದ ಸಹಯೋಗ ದೊಂದಿಗೆ ಟೌನ್ ಹಾಲ್‌ನಲ್ಲಿ ನಡೆದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಸಂಸ್ಥೆಯು ಕಳೆದ 42 ವರ್ಷಗಳಿಂದ ಕರ್ನಾಟಕದ ಎಂಟು ಜಿಲ್ಲೆಗಳಲ್ಲಿ ಮಹಿಳೆಯರ, ಮಕ್ಕಳ, ಯುವ ಜನರ ಮತ್ತು ಸಮುದಾಯದ ಅಭಿವೃದ್ಧಿಗಾಗಿ ಶ್ರಮಿಸುತ್ತಿದೆ. ಗ್ರಾಮೀಣ ಭಾಗದಲ್ಲಿ ಆರೋಗ್ಯ ಕಾರ್ಯಕ್ರಮವನ್ನು ಮುಖ್ಯವಾಗಿರಿಸಿಕೊಂಡು ಕಾರ್ಯನಿರ್ವಹಿಸುತ್ತಿದ್ದು, ಮಹಿಳೆಯರ ಆರೋಗ್ಯ ರಕ್ಷಣೆಗೆ ಪ್ರಮುಖ ಪಾತ್ರ ವಹಿಸಲಾಗುತ್ತಿದೆ ಎಂದು ತಿಳಿಸಿದರು.

ಮಹಿಳೆಯರ ಮೇಲಿನ ದೌರ್ಜನ್ಯ ವಿರೋಧಿಸಿ ಜಾಗೃತಿ ಜಾಥಾವನ್ನು ಹಮ್ಮಿಕೊಳ್ಳಲಾಗಿತ್ತು.ಈ ಜಾಥಾವನ್ನು ನಿವೃತ್ತ ಪ್ರಾಧ್ಯಾಪಕ ಪ್ರೊ.ಕಾಳಚೆನ್ನೇಗೌಡ ಉದ್ಘಾಟಿಸಿ ಮಾತನಾಡಿ, ನಾವು 21ನೇ ಶತಮಾನದಲ್ಲಿದ್ದರು ಹೆಣ್ಣನ್ನು ಇನ್ನು ದ್ವಿತಿಯ ದರ್ಜೆಯ ವ್ಯಕ್ತಿಯನ್ನಾಗಿ ಕಾಣುತ್ತಿದ್ದೇವೆ. ಇವತ್ತಿಗೂ ಪಿತ್ರಪ್ರಧಾನ ವ್ಯವಸ್ಥೆಯಲ್ಲಿ ನಾವಿದ್ದೇವೆ, ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳು ದಿನೆ ದಿನೆ ಹೆಚ್ಚಾಗುತ್ತಿರುವುದು. ದೌರ್ಜನ್ಯ ತಮ್ಮ ಸ್ವರೂಪ ಬದಲಾಯಿಸುತ್ತಿರುವುದು ಕಾಣುತ್ತಿದ್ದೇವೆ. ಇದರ ವಿರುದ್ಧ ಜಾಗೃತಿ ಮೂಡಿಸುವುದು ಈ ಜಾಥಾದ ಮೂಲ ಉದ್ಧೇಶವಾಗಿದೆ. ಮಹಿಳೆಯರು ತಮ್ಮ ಮೇಲೆ ಯಾವೂದೇ ರೀತಿಯ ದೌರ್ಜನ್ಯಗಳು ನಡೆದಾಗ ಅದರ ವಿರುದ್ಧ ಧ್ವನಿ ಎತ್ತಬೇಕು ಮತ್ತು ಸಮಾಜ ಇವತ್ತು ಮಹಿಳೆಯರನ್ನು ಸಮಾನವಾಗಿ ಕಾಣಬೇಕು, ಸಮಾನ ಅವಕಾಶಗಳನ್ನು ನೀಡಬೇಕು ಎಂದು ಹೇಳಿದರು. ಲೇಖಕಿ, ರಂಗಕರ್ಮಿ ಮತ್ತು ಸಾಮಾಜಿಕ ಹೋರಾಟಗಾರ್ತಿ ಡಾ.ದು.ಸರಸ್ವತಿ ಮಾತನಾಡಿದರು. ಧ್ವನಿ ಮಹಿಳಾ ಒಕ್ಕೂಟಗೌರವ ಅಧ್ಯಕ್ಷೆ ಶೋಭಾ, ಅಧ್ಯಕ್ಷೆ ವಸಂತ, ದೂರದರ್ಶನ ಕೇಂದ್ರ ಕ್ಷೇತ್ರ ಪ್ರಚಾರ ಇಲಾಖೆ (ಸುದ್ದಿ ಸಂಪಾದಕ) ಬಿ.ಎಸ್.ಮೀನಾಕ್ಷಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಿ.ಚಂದ್ರುಕುಮಾರ್ ಇತರರು ಉಪಸ್ಥಿತರಿದ್ದರು.

### ಜಾಗೃತಿ ಮೂಡಿಸುವುದು ತುಂಬಾ ಅವಶ್ಯ

ಗ್ಯಾರಂಟಿ ಯೋಜನೆ ನಗರ ಅಧ್ಯಕ್ಷೆ ಪುಷ್ಪವಲ್ಲಿ ಕಾರ್ಯಕ್ರಮ ಉಧ್ಘಾಟಿಸಿ ಮಾತನಾಡಿ, ಇವತ್ತು ಸಮಾಜದಲ್ಲಿ ಹೆಣ್ಣಿನ ಕುರಿತು ಜಾಗೃತಿ ಮೂಡುವುದು ತುಂಬಾ ಅವಶ್ಯಕತೆಯಿದೆ, ಇದಕ್ಕೆ ಕಾರಣ ಇವತ್ತು ಹೆಣ್ಣು ಮಕ್ಕಳ ಮೇಲೆ ನಾನ ರೀತಿಯಲ್ಲಿ ನಡೆಯುತ್ತಿತುವ ದೌರ್ಜನ್ಯಗಳೆ ಸಾಕ್ಷಿ. ಕಾನೂನುಗಳ ಪರಿಣಾಮಕಾರಿ ಅನುಷ್ಠಾನ ಆಗಬೇಕಾಗಿದೆ. ಎಲ್ಲಾ ಮಹಿಳೆಯರಿಗೆ ಅವರ ಹಕ್ಕುಗಳ ಬಗ್ಗೆ ತಿಳಿವಳಿಕೆ ನೀಡುವುದರೊಂದಿಗೆ, ಹೆಣ್ಣಿನ ಕುರಿತಾಗಿ ಜಾಗೃತಿ ಮೂಡಬೇಕಾಗಿದೆ ಎಂದು ಹೇಳೀದರು.

**ಸರ್ಕಾರಿ ನಿವೃತ್ತ ನೌಕರರ ಸಂಘದವತಿಯಿಂದ ಆಯೋಜನೆ**

# ಉಚಿತ ನೇತ್ರ ತಪಾಸಣೆ: ಚೇತನ್ ಶ್ಲಾಘನೆ



ರಾಮನಗರ: ನಿವೃತ್ತ ಸರ್ಕಾರಿ ನೌಕರರಿಗಾಗಿ ಉಚಿತ ನೇತ್ರ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿತ್ತು. 60 ಮಂದಿ ನೇತ್ರ ತಪಾಸಣೆಗೆ ಒಳಗಾಗಿದ್ದು, ಈ ಪೈಕಿ 13 ಮಂದಿಗೆ ಶಸ್ತ್ರಚಿಕಿತ್ಸೆ ಅಗತ್ಯವಿದೆ. ಶಸ್ತ್ರಚಿಕಿತ್ಸೆಯನ್ನು ಉಚಿತವಾಗಿ ಆಯೋಜಿಸಲಾಗಿದ್ದು, ಕನ್ನಡಗಳನ್ನು ಸಹ ಉಚಿತವಾಗಿ ವಿತರಿಸಲಾಗುವುದು ಎಂದು ಬೆಂಗಳೂರು ದಕ್ಷಿಣ ಜಿಲ್ಲಾ ಸರ್ಕಾರಿ ನಿವೃತ್ತ ನೌಕರರ ಸಂಘದ ಪದಾಧಿಕಾರಿಗಳು ತಿಳಿಸಿದ್ದಾರೆ.

ನಗರದಲ್ಲಿರುವ ಸಂಘದ ಕಚೇರಿ ಚೈತನ್ಯ ಭವನದಲ್ಲಿ ಈ ಶಿಬಿರ ಆಯೋಜನೆಯಾಗಿತ್ತು. ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎ.ಬಿ.ಚೇತನ್ ಕುಮಾರ್ ಶಿಬಿರವನ್ನು ಉದ್ಘಾಟಿಸಿದರು. ಈ ವೇಳೆ ಮಾತನಾಡಿದ ಅವರು ನಿವೃತ್ತ ನೌಕರರ ಸಂಘದ ವತಿಯಿಂದ ಇಂತಹ ಔಚಿತ್ಯ ಪೂರ್ಣ ಶಿಬಿರ ಆಯೋಜಿಸಿರುವುದು ಶ್ಲಾಘನೀಯ ಎಂದರು. ಸಂಘದ ಸದಸ್ಯರು ಸರ್ಕಾರದ ಸೇವೆ ಸಲ್ಲಿಸಿ ನಿವೃತ್ತರಾದ ನಂತರವೂ ಸೇವೆ ಮಾಡುತ್ತಿರುವುದು ಪುಣ್ಯದ ಕೆಲಸ ಎಂದರು.

ಜಿಲ್ಲೆಯಲ್ಲಿ ನಿವೃತ್ತ ನೌಕರರ ಸಂಖ್ಯೆ ಸುಮಾರು 8 ಸಾವಿರದಷ್ಟು ಮಂದಿ ಇದ್ದಾರೆ. ಈ ಪೈಕಿ 1500 ಮಂದಿ ನೊಂದಾಯಿತರಾಗಿದ್ದಾರೆ. ಪ್ರತಿ ತಿಂಗಳು ಸಭೆ ನಡೆಯುತ್ತಿದೆ. ಅಲ್ಲದೆ ಇಂತಹ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ ಎಂದು ಪದಾಧಿಕಾರಿಗಳು ನೀಡಿದ ಮಾಹಿತಿಗೆ ಎ.ಬಿ.ಚೇತನ್ ಕುಮಾರ್ ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಸಂಘದ ಎಲ್ಲಾ ಸದಸ್ಯರೂ ಮತ್ತು ಪದಾಧಿಕಾರಿಗಳು ನನಗೆ ಗುರು ಸಮಾನರು. ಮತ್ತು ನನಗೆ ವಿದ್ಯೆ ಕಲಿಸಿದ ಗುರುಗಳು ಸಹಾ ಸಂಘದ ಸದಸ್ಯರ ಪೈಕಿ ಇದ್ದಾರೆ. ನಿಮ್ಮಗಳ ಸೇವೆ ಮಾಡಲು ನನಗೆ ತುಂಬಾ ಸಂತೋ?ವಾಗುತ್ತದೆ. ನಿಮ್ಮ ಸಂಘಕ್ಕೆ ಬಲ ನೀಡಲು ಸದಾ ಸಿದ್ಧನಿದ್ದೇನೆ ಎಂದರು.

ಶಿಬಿರದ ಉಸ್ತುವಾರಿಯನ್ನು ನಿವೃತ್ತ ಜಿಲ್ಲಾ ವೈದ್ಯಾಧಿಕಾರಿ ಡಾ: ನಯಾಜ್ ಅಹ್ಮದ್ ಮತ್ತು ಸಹಾಯಕ ರಮೇಶ್ 'ಹಿಸಿದ್ದರು. ಬೆಂಗಳೂರು ಹೊಸಕೆರೆ ಹಳ್ಳಿ ವಿಠಲ್ ಅಂತಾ ರಾಷ್ಟ್ರೀಯ ನೇತ್ರಾಲಯದ ವೈದ್ಯಾಧಿಕಾರಿಗಳು ಭಾಗವಹಿಸಿದ್ದರು. ಸಂಘದ ಪದಾಧಿಕಾರಿಗಳು ನಿರ್ದೇಶಕರು ಮತ್ತು ಸದಸ್ಯರು ಹಾಜರಿದ್ದರು.

**ಮೊದಲ ಪುಟದಿಂದ**

### ಮೈಸೂರು ಮಹಾನಗರ ಪಾಲಿಕೆಗೆ 1,311 ಕೋಟಿ ಮೊತ್ತದ ಬಜೆಟ್

ಜಾಹೀರಾತು ಶುಲ್ಕ, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅನುದಾನಗಳಿಂದ ಆರ್ಥಿಕ ಸಂಪನ್ಮೂಲ ನಿರೀಕ್ಷಿಸಲಾಗಿದೆ.

ಈ ನಗರ ಸ್ಥಳೀಯ ಸಂಸ್ಥೆಯಲ್ಲಿ ಸದ್ಯ ಜನಪ್ರತಿನಿಧಿಗಳಿಲ್ಲ. ಹೀಗಾಗಿ, ಅಧಿಕಾರಿಗಳು ಮಾತ್ರವೇ ಪಾಲ್ಗೊಂಡಿದ್ದರು. ಯಾವುದೇ ಚರ್ಚೆಯೂ ನಡೆಯಲಿಲ್ಲ. ಬಜೆಟ್‌ನಲ್ಲಿ ಘೋಷಿಸಲಾದ ಯೋಜನೆಗಳ ಸಂಪೂರ್ಣ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಬೇಕು ಎಂಬ ಪ್ರಾದೇಶಿಕ ಆಯುಕ್ತರ ಸೂಚನೆಯೊಂದಿಗೆ ಸಭೆ ಮುಕ್ತಾಯಗೊಂಡಿತು. ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್ ಹಾಗೂ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

### ಕುರ್ಚಿಗೆ ಅಂಟಿಕೊಂಡು ಆತ್ಮವಂಚನೆ

ರೂ.8.24 ಲಕ್ಷ ಕೋಟಿ ಮುಟ್ಟಿದೆ. ಈ ವರ್ಷ ಒಂದರಲ್ಲೇ ರೂ.1.32 ಲಕ್ಷ ಕೋಟಿ ಹೊಸ ಸಾಲ ತೆಗೆದುಕೊಳ್ಳಲಾಗುತ್ತಿದೆ. ಇನ್ನೂ ಮುಖ್ಯವಾಗಿ ರೂ.22,957 ಕೋಟಿ ರಾಜಸ್ವ ಕೊರತೆ ಇದೆ. ರಾಜಸ್ವ ಕೊರತೆ ಎಂದರೆ ರಾಜ್ಯ ಸರ್ಕಾರ ತನ್ನ ದಿನನಿತ್ಯದ ಆಡಳಿತಾತ್ಮಕ ಖರ್ಚುಗಳನ್ನು ಪೂರೈಸಲು ಕೂಡ ಸಾಲ ತೆಗೆದುಕೊಳ್ಳಬೇಕಾಗಿರುವುದು. ಅಂದರೆ ಸಾಲದ ಒಂದು ದೊಡ್ಡ ಭಾಗ ಮೂಲಸೌಕರ್ಯ ನಿರ್ಮಾಣಕ್ಕೆ ಅಲ್ಲ, ದಿನನಿತ್ಯದ ವೆಚ್ಚಗಳಿಗೆ ಹೋಗುತ್ತಿದೆ ಎಂದು ಅರ್ಥ. ಕೇಂದ್ರ ಸರ್ಕಾರ ಸಾಲ ತೆಗೆದುಕೊಂಡು ಉತ್ಪಾದಕ ಆಸ್ತಿಗಳನ್ನು ನಿರ್ಮಿಸುತ್ತದೆ ಮತ್ತು ದೀರ್ಘಕಾಲೀನ ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸುತ್ತದೆ. ಆದರೆ, ನಿಮ್ಮ ಸರ್ಕಾರ ದಿನನಿತ್ಯದ ಆಡಳಿತಾತ್ಮಕ ವೆಚ್ಚಗಳಿಗೆ ಬಳಸುತ್ತಿದೆ. ಹೀಗಾಗಿ ಪ್ರಶ್ನೆ ಇರುವುದು ಸಾಲದ ಪ್ರಮಾಣದ ಬಗ್ಗೆ ಅಲ್ಲ. ಸಾಲದ ಬಳಕೆ ಗುಣಮಟ್ಟದ ಬಗ್ಗೆ. ದಿನನಿತ್ಯದ ವೆಚ್ಚಗಳಿಗೆ ತೆಗೆದ ಸಾಲವು ಕನ್ನಡಿಗರ ಸಾಲದ ಭಾರವನ್ನು ಮಾತ್ರ ಹೆಚ್ಚಿಸುತ್ತದೆ ಎಂದು ಅವರು ಕಿಡಿಕಾರಿದರು.

### ಹಾರ್ಮುಜ್ ಜಲಸಂಧಿ ಓಪನ್: ಟ್ರಂಪ್ ಸುಳಿವು

ಯುದ್ಧದ ಬಗ್ಗೆ ಹೇಳಿಕೆ ನೀಡಿರುವ ಟ್ರಂಪ್, ಇರಾನ್ ವಿರುದ್ಧದ ಯುದ್ಧದಲ್ಲಿ ನಾವು ಗೆದ್ದಂತಾಗಿದೆ. ಇರಾನ್ ಅದ್ಭುತವಾದ ಕೆಲಸ ಮಾಡಿದೆ. ನಮಗೆ ಇರಾನ್ ದೊಡ್ಡ ಉಡುಗೊರೆ ನೀಡಿದೆ. ಇರಾನ್ ಅಮೆರಿಕಕ್ಕೆ ತೈಲ, ಅನಿಲಕ್ಕೆ ಸಂಬಂಧಿಸಿದ ಹಾರ್ಮುಜ್ ಓಪನ್ ಮಾಡಿ ಉಡುಗೊರೆ ನೀಡಿದೆ ಎಂದು ಟ್ರಂಪ್ ಹೇಳಿದ್ದಾರೆ.

ಇರಾನ್‌ನ ವಿದ್ಯುತ್ ಸ್ಥಾವರಗಳ ಮೇಲೆ ದಾಳಿ ಮಾಡುವ ಬೆದರಿಕೆಯನ್ನು ಅಮೆರಿಕದ ಅಧ್ಯಕ್ಷರು ಐದು ದಿನಗಳವರೆಗೆ ಮುಂದೂಡಿದ್ದಾರೆ. ಯುದ್ಧವನ್ನು ಕೊನೆಗೊಳಿಸುವ ಒಪ್ಪಂದಕ್ಕಾಗಿ ಇರಾನ್‌ನೊಂದಿಗೆ ಮಾತುಕತೆಗೆ ನಿರ್ಧರಿಸಿದ್ದಾರೆ. ಆದರೆ, ಇರಾನ್ ಯಾವುದೇ ಕದನ ವಿರಾಮಕ್ಕೆ ಸಂಬಂಧಿಸಿದ ಮಾತುಕತೆಗಳ ಭಾಗವಾಗುವುದನ್ನು ನಿರಾಕರಿಸಿದೆ ಎನ್ನಲಾಗಿದೆ.

### ನಾಮಪತ್ರ ವಾಪಸ್ ಪಡೆಯಲ್ಲ:

ತಲೆನೋವಾಗಿ ಪರಿಣಮಿಸಿದೆ.

ತಮ್ಮ ಸ್ಪರ್ಧೆ ಬಗ್ಗೆ ವಿಡಿಯೋ ಬಿಡುಗಡೆ ಮಾಡಿರುವ ಸಾಧಿಕ್, ನಾನು ಯಾವುದೇ ಕಾರಣಕ್ಕೂ ನಾಮಪತ್ರ ವಾಪಸ್ ಪಡೆಯಲ್ಲ ಎಂದು ಅವರು ಸವಾಲು ಹಾಕಿದ್ದಾರೆ. ಅಹಿಂದ ಸಮುದಾಯದ ಬೆಂಬಲದಿಂದ ಈ ಬಾರಿ ಚುನಾವಣೆ ಕಣದಲ್ಲಿ ಇದ್ದೇನೆ. ಅಹಿಂದ ಸಮುದಾಯ ಬಿಟ್ಟು ನಾನಿಲ್ಲ. ಅವರ ಆಶೀರ್ವಾದ ನನ್ನ ಮೇಲೆ ಇದೆ ಎಂದು ತಿಳಿಸಿದ್ದಾರೆ.

**ಮೊದಲ ಪುಟದಿಂದ**

### ಸಿಎಂಗೆ ಕ್ಲೀನ್ ಚಿಟ್ ಪ್ರಶ್ನಿಸಿ ಹೈಕೋರ್ಟ್‌ಗೆ ಮೇಲ್ಮನವಿ

ಸಮ್ಮತಿ ಮತ್ತು ನಿಷ್ಪಕ್ಷಪಾತದ ಮೇಲೆ ಸಾರ್ವಜನಿಕ ವಿಶ್ವಾಸ ಕುಂದಿಸುತ್ತದೆ ಎಂದು ಆರೋಪಿಸಿದ್ದಾರೆ.

ಈ ಮೊದಲು ವಿಶೇಷ ನ್ಯಾಯಾಲಯ ಲೋಕಾಯುಕ್ತ ಪೊಲೀಸ್ ಸಲ್ಲಿಸಿದ್ದ ಬಿ ರಿಪೋರ್ಟ್ ಅನ್ನು ಅಂಗೀಕರಿಸಿ, ಸಿದ್ದರಾಮಯ್ಯ, ಅವರ ಪತ್ನಿ ಪಾರ್ವತಿ ಬಿಎಂ, ಮಲ್ಲಿಕಾರ್ಜುನಸ್ವಾಮಿ ಹಾಗೂ ಮತ್ತೊಬ್ಬರಿಗೆ ಕ್ಲೀನ್ ಚಿಟ್ ನೀಡಿತ್ತು. ಪ್ರಕರಣಕ್ಕೆ ಸಂಬಂಧಿಸಿದಂತೆ ಇತರರ ವಿರುದ್ಧ ತನಿಖೆ ಮುಂದುವರಿಯುತ್ತಿರುವ ಸಂದರ್ಭದಲ್ಲಿ ಕೆಲವರಿಗೆ ಮಾತ್ರ ಮುಂಚಿತವಾಗಿ ಕ್ಲೀನ್ ಚಿಟ್ ನೀಡಿರುವುದು ತಪ್ಪು ಸಂದೇಶ ರವಾನಿಸುತ್ತದೆ ಎಂದು ವಾದಿಸಿದ್ದಾರೆ. ಇದರಿಂದ ದೂರುದಾರರಿಗೆ ಅನ್ಯಾಯವಾಗಿದೆ. ಪ್ರಕರಣದ ಸಮಗ್ರ ತನಿಖೆಗೆ ಅಡ್ಡಿಯಾಗುತ್ತದೆ ಎಂದು ಹೇಳಿದ್ದಾರೆ. ವಿಶೇಷ ನ್ಯಾಯಾಲಯ ಜನವರಿ 28, 2026ರಂದು ನೀಡಿದ ಆದೇಶವನ್ನು ರದ್ದುಗೊಳಿಸುವಂತೆ ಹಾಗೂ ಪ್ರಕರಣದ ತನಿಖೆಯನ್ನು ಸ್ವತಂತ್ರ ಸಂಸ್ಥೆಗೆ ವರ್ಗಾಯಿಸಿ ಹೈಕೋರ್ಟ್ ನಿವೃತ್ತ ನ್ಯಾಯಾಧೀಶರ ಮೇಲ್ವಿಚಾರಣೆಯಲ್ಲಿ ಮರುತನಿಖೆ ನಡೆಸುವಂತೆ ಮನವಿ ಮಾಡಿದ್ದಾರೆ.

### ಪಿಎನ್‌ಜಿಗೆ ಬದಲಾವಣೆ ಕಡ್ಡಾಯ: ಕೇಂದ್ರದ ಆದೇಶ

ಹಿನ್ನೆಲೆಯಲ್ಲಿ ಸರ್ಕಾರ ಮನೆಗಳು ಮತ್ತು ವಾಣಿಜ್ಯ ಬಳಕೆದಾರರನ್ನು ಪೈಪ್ಡ್ ನೈಸರ್ಗಿಕ ಅನಿಲಕ್ಕೆ ಬದಲಾಯಿಸಲು ಒತ್ತಾಯಿಸುತ್ತಿದೆ. ಇದು ದೇಶೀಯವಾಗಿ ಉತ್ಪಾದಿಸಲ್ಪಡುವ ಮತ್ತು ವೈವಿಧ್ಯಮಯ ಪೂರೈಕೆ ಮೂಲಕ ಪಡೆಯಬಹುದಾದ ಹೆಚ್ಚು ಅನುಕೂಲಕರ ಪರ್ಯಾಯವಾಗಿದೆ ಎಂದು ಕೇಂದ್ರ ತಿಳಿಸಿದೆ.

### ಮೂರು ಈಜುಕೊಳ ನಿರ್ಮಾಣ

ಈ ಉದ್ದೇಶಕ್ಕಾಗಿ 10 ಕೋಟಿ ಕಾಯ್ದಿರಿಸಲಾಗಿದೆ. ಪಾಲಿಕೆ ವ್ಯಾಪ್ತಿಯ ಜೆ.ಪಿ. ನಗರದಲ್ಲಿರುವ ಪುಟ್ಟರಾಜ ಗವಾಯಿ ಕ್ರೀಡಾಂಗಣದ ಒಳಾಂಗಣದಲ್ಲಿ ನಿರ್ಮಿಸಿರುವ ಕನ್ನಡ ಭವನದ ಮತ್ತು ಒಳಾಂಗಣ ಕ್ರೀಡಾಂಗಣಗಳ ಮುಂದುವರಿದ ಅಭಿವೃದ್ಧಿ ಕಾಮಗಾರಿಗಳಿಗೆ 1.10 ಕೋಟಿ ಕಾಯ್ದಿರಿಸಲಾಗಿದೆ.

ಕೃಷ್ಣರಾಜ, ಚಾಮರಾಜ ಮತ್ತು ನರಸಿಂಹರಾಜ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಪ್ರಮುಖ ವೃತ್ತಗಳ ಅಭಿವೃದ್ಧಿಗೆ 5 ಕೋಟಿ, ಪ್ರಮುಖ ರಸ್ತೆ ಹಾಗೂ ಚರಂಡಿಗಳ ಅಭಿವೃದ್ಧಿಗೆ 30 ಕೋಟಿ, ನೀರು ಸರಬರಾಜು ಮತ್ತು ಒಳಚರಂಡಿಗಳ ಕೊಳವೆಮಾರ್ಗಗಳ ಅಭಿವೃದ್ಧಿಗೆ 30 ಕೋಟಿ ಕಾಯ್ದಿರಿಸಲಾಗಿದೆ.

### 165 ಲಕ್ಷ ಕೋಟಿ ಸಾಲ

ಮಾಡಿಲ್ಲ. ಇದು ಅನ್ಯಾಯ ಅಲ್ಲವಾ? ಇದನ್ನು ಕೇಳ್ಬೇಕಾ, ಬೇಡ್ವಾ? ಬಸವರಾಜ್ ಬೊಮ್ಮಾಯಿ ಸಿಎಂ ಆಗಿದ್ದಾಗ ಬಜೆಟ್ ಮಂಡಿಸಿದ್ದರು. ಅವರೇ ಕೇಂದ್ರದಿಂದ ಅನುದಾನ ಬರುತ್ತದೆ ಎಂದಿದ್ದರು. ನ್ಯಾಷನಲ್ ಪ್ರಾಜೆಕ್ಟ್ ಮಾಡ್ತೀನಿ ಅಂದಿದ್ದರು. ಆದರೆ ಇವತ್ತಿನವರೆಗೂ ಒಂದು ರೂಪಾಯಿ ಬಂದಿಲ್ಲ. ಇದು ಅನ್ಯಾಯ ಅಲ್ಲವೇ? ರಾಜ್ಯಕ್ಕೆ ಮಾಡಿರುವ ದೊಡ್ಡ ದ್ರೋಹ ಅಲ್ಲವೇ? ನನ್ನ ಪ್ರಕಾರ ಬಿಜೆಪಿಯವರು ಕೂಡ ಕೇಳಬೇಕು. 11,495 ಕೋಟಿ ವಿಶೇಷ ಅನುದಾನ ಕೊಡಬೇಕು. ಕರ್ನಾಟಕಕ್ಕೆ ಅನ್ಯಾಯ ಆಗಿದೆ. ಇದನ್ನು ಸರಿಪಡಿಸಿ ಅಂದರೆ ಟೀಕೆ ಮಾಡುತ್ತಾರೆ. ಸಿದ್ದರಾಮಯ್ಯಗೆ ಬೇರೆ ಕೆಲಸ ಇಲ್ಲ ಅಂತಾರೆ. ನ್ಯಾಯಯುತವಾದ ಪಾಲನ್ನು ಕೊಡಿ ಎಂದರೆ ಕೊಡುತ್ತಿಲ್ಲ ಎಂದು ಕೇಂದ್ರದ ವಿರುದ್ಧ ಸಿದ್ದರಾಮಯ್ಯ ಆಕ್ರೋಶ ಹೊರಹಾಕಿದರು.

### ಅನುಷ್ಠಾನ

ಅಂಡ್ ಡಿಜಿಟೈಜೇಸನ್ ತಂತ್ರಾಂಶ ಅಭಿವೃದ್ಧಿಪಡಿಸಿ ಸಂರಕ್ಷಿಸುವ ಕ್ರಮ ಕೈಗೊಳ್ಳಲಾಗಿದೆ. ಈಗಾಗಲೇ, 12,87,133 ಪ್ರತಿಗಳನ್ನು ಗಣಕೀಕರಣಗೊಳಿಸಲಾಗಿದೆ. ಉಳಿದಂತೆ ಎಲ್ಲ ವಲಯ ಕಚೇರಿಗಳಲ್ಲಿನ ಹಾಗೂ ಆಸ್ತಿ ಶಾಖೆಯ ಎಲ್ಲಾ ದಾಖಲೆಗಳನ್ನು ಪ್ರಸಕ್ತ ಆರ್ಥಿಕ ವರ್ಷದಲ್ಲಿ ಸಂಪೂರ್ಣವಾಗಿ ಗಣಕೀಕರಣಗೊಳಿಸಲು ಉದ್ದೇಶಿಸಲಾಗಿದೆ. ಇದಕ್ಕಾಗಿ 50 ಲಕ್ಷ ಇಡಲಾಗಿದೆ.

### ನಾನೇ ಸಿಎಂ

ಕಿತಾಪತಿ ಮಾಡಿದರೂ ಖಾದರ್ ಮನ್ನಣೆ ಕೊಡಲ್ಲ. ಅವರು ಸಚಿವರಾದರೆ ಸಂತೋಷವೇ. ಕನಸು ಎಲ್ಲರಿಗೂ ಇದೆ. ಅಶೋಕ್‌ಗೂ ಸಿಎಂ ಆಗೋ ಕನಸಿದೆ. ಆದರೆ ಅದಕ್ಕೆ ವಿಜಯೇಂದ್ರ ಅವಕಾಶ ಕೊಡಲ್ಲ. ಅಶೋಕ್ ಸಿಎಂ ಆದರೂ ಸಂತೋಷನೇ, ಬೆಲ್ಲದ್ ಆದರೂ ಸಂತೋಷ ಎಂದು ಸಿದ್ದರಾಮಯ್ಯ ಕಾಲೆಳೆದರು.

# ಡಿಕೆಶಿ ಸ್ಟಾಲಿನ್‌ರಿಂದ ಒಪ್ಪಿಗೆ ತರಲಿ

## ಮೇಕೆದಾಟು ಯೋಜನೆ ವಿಚಾರ: ನಿಖಿಲ್ ಕುಮಾರಸ್ವಾಮಿ ಹೇಳಿಕೆ



ರಾಮನಗರ: ಮೇಕೆದಾಟು ಯೋಜನೆಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ತಮಿಳುನಾಡು ಸಿಎಂ ಸ್ಟಾಲಿನ್‌ರಿಂದ ಒಪ್ಪಿಗೆ ತರಲಿ. ಒಪ್ಪಿಗೆ ಪಡೆದ ಮರುದಿನವೇ ಕೇಂದ್ರದಿಂದ ಯೋಜನೆಗೆ ಅನುಮತಿಗೆ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಹಾಗೂ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೋರಾಟ ಮಾಡುತ್ತಾರೆ ಎಂದು ಯುವ ಜೆಡಿಎಸ್ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದರು.

ತಾಲ್ಲೂಕಿನ ಚಿಕ್ಕೇಗೌಡನದೊಡ್ಡಿಯ ಮುನೇಶ್ವರ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಆಗಮಿಸಿದ್ದ ನಿಖಿಲ್ ಕುಮಾರಸ್ವಾಮಿ ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದರು. ನೆನೆಗುದಿಗೆ ಬಿದ್ದ ಎತ್ತಿನ ಹೊಳೆ ಯೋಜನೆಗೆ ಮರುಜೀವ ಪಡೆಯಲು ದೇವೇಗೌಡರು ಸದನದಲ್ಲಿ ಅಂಗಲಾಚಿ ಬೇಡಿದ್ದಾರೆ. ದೇವೇಗೌಡರ ಹಿರಿತನಕ್ಕೆ ಕೇಂದ್ರ ನಾಯಕರು ಕ್ಲಿಯರೆನ್ಸ್ ಕೊಟ್ಟಿದ್ದಾರೆ. ಮೇಕೆದಾಟು ಯೋಜನೆಗೆ ಕೇಂದ್ರದ ಅನುಮತಿ ಕೊಡಿಸಲು ದೇವೇಗೌಡರು, ಕುಮಾರಸ್ವಾಮಿ ಬದ್ಧರಾಗಿದ್ದಾರೆ ಎಂದು ತಿಳಿಸಿದರು.

**ಸಿದ್ದರಾಮಯ್ಯ ತಮ್ಮ ಕುರ್ಚಿ ಉಳಿಸಿಕೊಳ್ಳಲು ಕೇರಳಕ್ಕೆ ರಾಜ್ಯದಿಂದ ಪರಿಹಾರ**

ಕೇರಳ ರಾಜ್ಯದಲ್ಲಿ ಭೂಕುಸಿತದಿಂದ ಸಮಸ್ಯೆ ಸೃಷ್ಟಿಯಾದಾಗ ಅಲ್ಲಿನ ಮುಖ್ಯಮಂತ್ರಿಗಳು ಪರಿಹಾರ ಘೋಷಿಸಬೇಕು. ಆದರೆ ಸಿದ್ದರಾಮಯ್ಯ ಅವರು ತಮ್ಮ ಕುರ್ಚಿ ಉಳಿಸಿಕೊಳ್ಳುವುದು ಮತ್ತು ತಮ್ಮ ಪಕ್ಷದ ಹೈಕಮಾಂಡ್‌ನ ವಿಶ್ವಾಸಗಳಿಸಲು ರಾಜ್ಯದ ತೆರಿಗೆ ಹಣದಲ್ಲಿ 10 ಕೋಟಿ ರೂ ಅನುದಾನ ನೀಡಿದ್ದಾರೆ ಎಂದು ನಿಖಿಲ್ ಟೀಕಾ ಪ್ರಹಾರ ನಡೆಸಿದರು. ಕೇರಳದಲ್ಲಿ ಭೂಕುಸಿತ ಸಮಯದಲ್ಲಿ ರಾಜ್ಯದ ಉತ್ತರ ಭಾಗದ ಜಿಲ್ಲೆಗಳಲ್ಲಿ ಅತಿವೃಷ್ಟಿಯಾಗಿತ್ತು. ಪರಿಹಾರ ಕೇಳಿದ ರೈತರಿಗೆ ಸಿದ್ದರಾಮಯ್ಯ ಸ್ಪಂದಿಸಲಿಲ್ಲ ಎಂದು ನಿಖಿಲ್ ಅಸಮಾಧಾನ ವ್ಯಕ್ತಪಡಿಸಿದರು.

**ಎಚ್.ಡಿ.ಕೆ ಪ್ರಚಾರದಲ್ಲಿ ಭಾಗಿಯಾಗ್ತಾರೆ**

ರಾಜ್ಯದಲ್ಲಿ ಎರಡು ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಜೆಡಿಎಸ್ ಅಂತರ ಕಾಯ್ದುಕೊಂಡಿರುವ ವಿಚಾರದಲ್ಲಿ ಮಾಧ್ಯಮ ಪ್ರತಿನಿಧಿಗಳು ಪ್ರಶ್ನಿಸಿದಾಗ ಪ್ರತಿಕ್ರಿಯಿಸಿದ ನಿಖಿಲ್, ನಾಮಪತ್ರ ಸಲ್ಲಿಕೆ ವೇಳೆ ಜೆಡಿಎಸ್ ನಾಯಕರು ಭಾಗಿಯಾಗಿದ್ದರು. ಎರಡೂ ಕ್ಷೇತ್ರಗಳಲ್ಲಿ ಕುಮಾರಸ್ವಾಮಿ ಸಹ ಪ್ರಚಾರ ಮಾಡುತ್ತಾರೆ ಜೆಡಿಎಸ್ ನಾಯಕರು ಕೂಡ ಹೋಗಿ ಪ್ರಚಾರ ಮಾಡಲಿದ್ದಾರೆ ಎಂದರು.

ಹೆಚ್.ಡಿ.ದೇವೇಗೌಡರನ್ನ ರಾಜ್ಯಸಭಾ ಸದಸ್ಯ ಸ್ಥಾನಕ್ಕೆ ಎನ್‌ಡಿಎ ನೇರ ಆಯ್ಕೆ ಮಾಡುವ ತಿರ್ಮಾನ ವಿಚಾರವಾಗಿ ಪ್ರತಿಕ್ರಿಯೆ ನೀಡಿದ ಅವರು ಇದು ಕೇಂದ್ರದ ನಾಯಕರಿಗೆ ಬಿಟ್ಟ ವಿಚಾರ. ನಮ್ಮ ಪಕ್ಷದಲ್ಲಿ ಯಾವುದೇ ಚರ್ಚೆ ನಡೆದಿಲ್ಲ ಎಂದರು.

ಜಿ.ಟಿ.ದೇವೇಗೌಡರು ಜೆಡಿಎಸ್‌ನಿಂದ ಮತ್ತೆ ಸ್ಪರ್ಧೆ ಮಾಡುತ್ತೇನೆ ಎಂದು ನೀಡಿರುವ ಹೇಳಿಕೆ ಬಗ್ಗೆ ಗಮನ ಸೆಳೆದಾಗ ಪ್ರತಿಕ್ರಿಯಿಸಿದ ಅವರು, ಅವರು (ಜಿಟಿಡಿ) ಕಳೆದ ಬಾರಿ ಜೆಡಿಎಸ್ ಚಿಹ್ನೆಯಲ್ಲಿ ನಿಂತು ಗೆದ್ದಿದ್ದಾರೆ. ಮುಂಬರುವ ಸಾರ್ವತ್ರಿಕ ಚುನಾವಣೆಯಲ್ಲಿ ಏನು ಮಾಡಬೇಕು ಎಂಬುದಲ್ಲಿ ವರಿ?ರು ತಿರ್ಮಾನ ಮಾಡುತ್ತಾರೆ ಎಂದರು.

**ಎಸ್.ಟಿ.ಆರ್.ಆರ್ ರಸ್ತೆ, ಪರಿಹಾರಕ್ಕೆ ಪ್ರಾಮಾಣಿಕ ಪ್ರಯತ್ನದ ಭರವಸೆ**

ಸ್ಯಾಟಲೈಟ್ ಟೌನ್ ರಿಂಗ್ ರೋಡ್(ಎಸ್‌ಟಿಆರ್‌ಆರ್) ಯೋಜನೆಗೆ ಸಂಬಂಧಿಸಿದಂತೆ ಪರಿಹಾರ ಕೊಡಿಸಲು ಪ್ರಾಮಾಣಿಕ ಪ್ರಯತ್ನ ಪಡುವುದಾಗಿ ನಿಖಿಲ್ ಕುಮಾರಸ್ವಾಮಿ ಭರವಸೆ ನೀಡಿದರು. ಸ್ಯಾಟಲೈಟ್ ಟೌನ್ ರಿಂಗ್ ರೋಡ್ ಯೋಜನೆಯ ರಸ್ತೆ ನಿರ್ಮಾಣಕ್ಕಾಗಿ ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಭೂಮಿಯನ್ನು ಕಳೆದುಕೊಂಡ ರೈತರ ಅಹವಾಲುಗಳನ್ನು ನಿಖಿಲ್ ಆಲಿಸಿದರು. ಎಲ್ಲರ ಮನವಿಗೆ ಸ್ಪಂದಿಸುವ ಜೊತೆಗೆ 40 ಮಂದಿ ರೈತರ ನಿಯೋಗವನ್ನು ರಚಿಸಿದರು. ನಿಯೋಗದ ಸದಸ್ಯರನ್ನು ದೆಹಲಿಗೆ ಕರೆದುಕೊಂಡು ಹೋಗುವ ಜೊತೆಗೆ ಕೇಂದ್ರ ಸಚಿವರಾದ ಹೆಚ್.ಡಿ ಕುಮಾರಸ್ವಾಮಿ ಭೇಟಿ ಮಾಡಿಸಲಾಗುವುದು. ಅಲ್ಲದೇ ಭೂಸ್ವಾಧೀನದ ಪರಿಹಾರದ ಹಣವನ್ನ ಕೇಂದ್ರ ಸರ್ಕಾರದಿಂದ ಕೊಡಿಸಲು ಪ್ರಾಮಾಣಿಕವಾಗಿ ಯತ್ನಿಸುವುದಾಗಿ ತಿಳಿಸಿದರು. ಈ ಸಂದರ್ಭದಲ್ಲಿ ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಸಬ್ಬಕೆರೆ ಶಿವಲಿಂಗಪ್ಪ, ದೊರೆಸ್ವಾಮಿ, ಕೃ?ಮೂರ್ತಿ (ಕಿಟ್ಟಿ), ಚಂದ್ರಣ್ಣ, ಸಂತೋ?, ಶ್ರೀ ಮೂರ್ತಿ, ಮೋಹನ್, ರವಿ ಸೇರಿದಂತೆ ಹಲವರಿದ್ದರು.

# ಶಾಶ್ವತ ನೀರು ತುಂಬಿಸುವಂತೆ ಡಿಸಿಗೆ ಮನವಿ

ಚಾಮರಾಜನಗರ: ನಗರದ ಅತ್ಯಂತ ಪ್ರಮುಖ ಕೊಳವಾದ ದೊಡ್ಡರಸನ ಕೊಳಕ್ಕೆ ಕೆರೆ ಹಾಗೂ ನದಿಯಿಂದ ಶಾಶ್ವತವಾಗಿ ನೀರು ತುಂಬಿಸುವಂತೆ ಒತ್ತಾಯಿಸಿ ಅಖಿಲ ಕರ್ನಾಟಕ ಕನ್ನಡ ಮಹಾಸಭಾದ ವತಿಯಿಂದ ನಗರದ ಜಿಲ್ಲಾಡಳಿತ ಭವನದಲ್ಲಿ ಜಿಲ್ಲಾಧಿಕಾರಿ ಶ್ರೀರೂಪ ಅವರಿಗೆ ಮನವಿ ಸಲ್ಲಿಸಲಾಯಿತು.

ಇತ್ತೀಚಿನ ದಿನಗಳಲ್ಲಿ ಬಿಸಿಲಿನ ತಾಪದಿಂದ ಹಾಗೂ ಕಾಲಕಾಲಕ್ಕೆ ಸರಿಯಾಗಿ ಮಳೆಯಾಗದೆ ಅಂತರ್ಜಲ ತೀವ್ರ ಕುಸಿದು ಕುಡಿಯುವ ನೀರಿಗೆ ತತ್ವಾರ ಉಂಟಾಗಿದೆ. ದಶಗಳ ಹಿಂದೆ ನಗರದ ಬಹುತೇಕ ಕಡೆ ಕೊಳಗಳಿದ್ದವು. ಶ್ರೀ ಚಾಮರಾಜೇಶ್ವರ ದೇವಾಲಯದ ಮುಂದೆ ಕಲ್ಯಾಣಿ ಇತ್ತು. ಕಾಲಾನಂತರ ಎಲ್ಲವೂ ಮುಚ್ಚಿಹೋಗಿದ್ದು,

ನಗರದಲ್ಲಿದ್ದ ಅಂತರ್ಜಲ ಕುಸಿದ ಹಿನ್ನೆಲೆಯಲ್ಲಿ ನೀರಿನ ಕೊರತೆ ಉಂಟಾಗಿ ಆತಂಕ ಹುಟ್ಟಿಸಿದೆ. ಪ್ರತಿ ಬೇಸಿಗೆಯಲ್ಲಿ ನೀರಿನ ಸಮಸ್ಯೆ ತೀವ್ರವಾಗಿ ಕಾಡುತ್ತಿದೆ. ನಗರದ ವ್ಯಾಪ್ತಿಯಲ್ಲಿ ಬರುವ ಬೋರ್ ವೆಲ್ ಗಳು, ಬಾವಿಗಳು ಬರಡಾಗಿವೆ

ಆದ್ದರಿಂದ ತಾವು ದೊಡ್ಡ ಅರಸನ ಕೊಳಕ್ಕೆ ಶಾಶ್ವತವಾಗಿ ನೀರನ್ನು ತುಂಬಿಸುವ ವ್ಯವಸ್ಥೆಯನ್ನು ಮಾಡಬೇಕು ಎಂದು ಜಿಲ್ಲಾಧಿಕಾರಿಗಳಿಗೆ ನೀಡಿರುವ ಮನವಿ ಪತ್ರದಲ್ಲಿ ತಿಳಿಸಲಾಗಿದೆ.

ಈ ಹಿಂದೆ ದೊಡ್ಡ ಅರಸನ ಕೊಳದ ಪಕ್ಕದಲ್ಲಿ ದೊಡ್ಡ ಕೆರೆಯಿದ್ದು ಇಲ್ಲಿಗೆ ಮಳೆಯಾದ ಸಂದರ್ಭದಲ್ಲಿ ನೀರು ದೊಡ್ಡ ಕೆರೆಗೆ ತುಂಬಿ ಆ ನಂತರ ದೊಡ್ಡ ಅರಸನ ಕೊಳವು ತುಂಬಿ



ಆ ನಂತರ ಚಾಮರಾಜನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದ ಮುಂದೆ ಇದ್ದ ಕಲ್ಯಾಣಿಗೂ ನೀರು ತುಂಬುವ ವ್ಯವಸ್ಥೆ ಇತ್ತು. ಆದರೆ ಈಗ ಇಲ್ಲದಿರುವುದರಿಂದ ತಾವು ಈ ತಕ್ಷಣ ಪ್ರಸಿದ್ಧ ದೊಡ್ಡ ಅರಸಿನ ಕೊಳಕ್ಕೆ ಶಾಶ್ವತವಾದಂತಹ ಯಾವುದಾದರು ನದಿ, ಕೆರೆಯ ಮೂಲದಿಂದ ಶಾಶ್ವತವಾಗಿ ನೀರನ್ನು ತುಂಬಿಸುವ ವ್ಯವಸ್ಥೆ ಮಾಡಬೇಕೆಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಪಣ್ಯದಹುಂಡಿ ರಾಜು, ನಿಜಧ್ವನಿ ಗೋವಿಂದರಾಜ, ರವಿಚಂದ್ರಪ್ರಸಾದ್ ಕಹಳೆ, ರಾಚಪ್ಪ ಇತರರು ಹಾಜರಿದ್ದರು.

# ಪೂರ್ವಭಾವಿ ಸಭೆ ಗದ್ದಲದ ನಡುವೆ ಮುಕ್ತಾಯ

ಕೊಳ್ಳೇಗಾಲ: ಇಂದು ನಡೆದ ಬಾಬು ಜಗಜೀವನ್ ರಾವ್ ರವರ ಜಯಂತಿ ಆಚರಣಾ ಪೂರ್ವಭಾವಿ ಸಭೆ ಗದ್ದಲದ ನಡುವೆ ಮುಕ್ತಾಯಗೊಂಡಿತು.

ಪಟ್ಟಣದ ತಾ.ಪಂ ಸಭಾಂಗಣದಲ್ಲಿ ಪೂರ್ವ ಭಾವಿ ಸಭೆಯಲ್ಲಿ ಪ್ರಾರಂಭದಲ್ಲಿ ಗೋಪಾಲ್ ಮಾತನಾಡಿ, ನಾನು ಬಾಬುಜಗಜೀವನರಾವ್ ಅಧ್ಯಕ್ಷನ್ನಾಗಿ ಆಯ್ಕೆಯಾಗಿದ್ದೇನೆ. ಹಿಂದೆ ಇದ್ದಂತಹ ಪದಾಧಿಕಾರಿಗಳು ಇಲ್ಲ ಎನ್ನುತ್ತಿದ್ದಂತಯೇ ಹಿಂದಿನ ಅಧ್ಯಕ್ಷ ಬಾಲರಾಜು ರವರು ನಾನೇ ಅಧ್ಯಕ್ಷ ನೀನು ಯಾರು ಪ್ರಶ್ನೆ ಮಾಡಿದಾಗ ಸಭೆಯಲ್ಲಿದ್ದವರ ನಡುವೆ ಗೊಂದಲ ಸೃಷ್ಟಿ ಕೆಲಕಾಲ ಜೋರು ವಾಗ್ವಾಳಿ ನಡೆಯಿತು.

ಮಧ್ಯೆಪ್ರವೇಶಿಸಿದ್ದ ತಹಶಿಲ್ದಾರ್ ಬಸವರಾಜು ರವರು, ನಮ್ಮ ದೇಶದ ಮಹನೀಯರಿಗೆ ಗೌರವ ಸೂಚಿಸುವ ಸಲುವಾಗಿ ಇಂದು ಸಭೆ ಕರೆಯಲಾಗಿದೆ. ಅದನ್ನು ಬಿಟ್ಟು ನಿಮ್ಮ ನಿಮ್ಮಲ್ಲಿರುವ ಸಮಸ್ಯೆಗಳ ಬಗ್ಗೆ ಮಾತನಾಡಿದೇ ಬಾಬು ಜಗಜೀವನ್ ರಾವ್ ಜಯಂತಿಯನ್ನು ಯಾವ ರೀತಿಯಲ್ಲಿ ಆಚರಿಸಬೇಕು ಎನ್ನುದರ ಬಗ್ಗೆ ಸಲಹೆ ನೀಡಿ ಗದ್ದಲವನ್ನು ತಿಳಿಗೊಳಿಸಿದ ಬಳಿಕ ಏ.5 ರಂದು ನಡೆಯುವ ಬಾಬು ಜಗಜೀವನ್ ರಾವ್



ಜಯಂತಿಯನ್ನು ಪಟ್ಟಣದ ಗುರುಭವನದಲ್ಲಿ ಕ್ಷೇತ್ರ ಶಾಸಕರ ಅಧ್ಯಕ್ಷತೆಯಲ್ಲಿ ಆಚರಣೆ ಮಾಡಲಾಗುವುದು. ಕಾರ್ಯಕ್ರಮದಲ್ಲಿ ನಿಮ್ಮ ಸಲಹೆಯಂತೆ ಉತ್ತಮ ಅಂಕ ಪಡೆದ ಮಕ್ಕಳಿಗೆ ಸನ್ಮಾನಿಸಲಾಗುವುದು. ಮುಖ್ಯ ಭಾಷಣಕಾರರು ಯಾರು ಎಂದು ತಿಳಿಸಿ ಇಲ್ಲವಾದಲ್ಲಿ ಇಲಾಖೆಯ ವತಿಯಿಂದ ಮಹನೀಯರ ಕುರಿತು ಮಾತನಾಡುವರನ್ನು ಗುರುತಿಸಲಾಗುವುದು ಎಂದು ಹೇಳಿದರು.

ಮುಳ್ಳೂರು ಮಂಜು ಮಾತನಾಡಿ, ಎಲ್ಲಾ ಸಮಾಜದ ಸಮುದಾಯ ಭವನ ಇದೆ. ಅದೇ ರೀತಿಯಲ್ಲಿ ನಮ್ಮ ಬಾಬು ಜಗಜೀವನ್ ರಾವ್ ಭವನವನ್ನು ಏ.5 ರಂದು ಸ್ಥಳ ನಿಗದಿಪಡಿಸಿ ನಿರ್ಮಾಣಗೊಳಿಸಿ ಶೈಕ್ಷಣಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ನಮ್ಮ ಸಮಾಜವನ್ನು ಮುನ್ನಡೆಸಬೇಕು. ಕಾರ್ಯಕ್ರಮದಲ್ಲಿ ನಮ್ಮ ಸಮಾಜದ ಎಸ್.ಎಸ್.ಎಲ್.ಸಿ ಪಿಯುಸಿ ಮಕ್ಕಳಿಗೆ ಸನ್ಮಾನಿಸಿ ಪ್ರೋತ್ಸಾಹಿಸಬೇಕು ಎಂದರು.

ಈ ಪೂರ್ವಭಾವಿ ಸಭೆಯಲ್ಲಿ ತಾ.ಪಂ ಇಒ ಗುರುಶಾಂತಪ್ಪ ಬೆಳ್ಳುಂಡಗಿ, ಕ್ಷೇತ್ರ ಶಿಕ್ಷಣಾಧಿಕಾರಿ ಮಂಜುಳಾ, ಸಮಾಜ ಕಲ್ಯಾಣಾಧಿಕಾರಿ ಕೇಶವಮೂರ್ತಿ, ನಗರಸಭೆ ಪೌರಯುಕ್ತರು ರುದ್ರಮ್ಮ ಶರಣಯ್ಯ ಹಾಗೂ ಮುಖಂಡರು ಇದ್ದರು.

# ಭಾನವಿ ಆಸ್ಪತ್ರೆಯಲ್ಲಿ ಫರ್ಟಿಲಿಟಿ ಘಟಕ ಆರಂಭ

ಮೈಸೂರು: ನಗರದ ಸಂತಸ ಫರ್ಟಿಲಿಟಿ ಸೆಂಟರ್ ಮತ್ತು ಭಾನವಿ ಆಸ್ಪತ್ರೆ ಸಹಯೋಗ ದೊಂದಿಗೆ ಭಾನವಿ ಆಸ್ಪತ್ರೆಯಲ್ಲಿ ಭಾನವಿ ಸಂತಸ ಫರ್ಟಿಲಿಟಿ ಘಟಕ ಆರಂಭಿಸಿದೆ ಎಂದು ಸಂತಸ ಫರ್ಟಿಲಿಟಿ ನಿರ್ದೇಶಕಿ ಡಾ.ಸೌಮ್ಯ ದಿನೇಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರ, ಕಳೆದ 18 ವರ್ಷಗಳಿಂದ ಸಂತಸ ಫರ್ಟಿಲಿಟಿ ಸೆಂಟರ್‌ನಿಂದ ಉತ್ತಮ ಸೇವೆಯನ್ನು ನೀಡುತ್ತ ಬಂದಿದ್ದು, ಈಗ ಮತಷ್ಟು ಜನರಿಗೆ ಅನುಕೂಲ ವಾಗುವ ನಿಟ್ಟನಲ್ಲಿ ಭಾನವಿ ಆಸ್ಪತ್ರೆಯೊಂದಿಗೆ ಒಡಬಡಿಕೆ ಮಾಡಿಕೊಂಡು ಆತ್ಪತ್ರೆಯಲ್ಲಿ ಘಟಕ ಆರಂಭಿಸಲಾಗಿದೆ ಎಂದರು.

ಈ ಘಟಕದಲ್ಲಿ ಎಲ್ಲ ವಿಧದ ಸಂತಾನ ಮತ್ತ ಐವಿಎಫ್ ಚಿಕಿತ್ಸೆಗಳು ಒಂದೇ ಸ್ಥಳದಲ್ಲಿ ಲಭ್ಯವಾಗುತ್ತವೆ. ನುರಿತ ವೈದ್ಯರು ಮತ್ತು ಅಧುನಿಕ ಯಂತ್ರೋಪಕರಣಗಳ ಸಹಾಯದಿಂದ ಎಐ ತಂತ್ರಜ್ಞಾನದೊಂದಿಗೆ ರೋಗಿಗಳಿಗೆ ಉತ್ತಮ ಸೇವೆ ನೀಡಲಾಗುವುದು. ಮಕ್ಕಳಾಗದ ಸಮಸ್ಯೆಗೆ ಪರೀಕ್ಷೆ, ಸಲಹೆ ಮತ್ತು ಚಿಕಿತ್ಸೆ ಎಲ್ಲವೂ ಒಂದೇ ಸ್ಥಳದಲ್ಲಿ ಸುಲಭವಾಗಿ ಪಡೆಯಲು ವ್ಯವಸ್ಥೆ ಮಾಡಲಾಗಿದೆ. ಜನರಿಗೆ ಕೈಗೆಟಕುವ ದರದಲ್ಲಿ ನೀಡಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಭಾನವಿ ಆಸ್ಪತ್ರೆ ಪ್ರಧಾನ ವ್ಯವಸ್ಥಾಪಕ ಆರ್.ಪ್ರಶಾಂತ್, ಸಂತಸ ಫರ್ಟಿಲಿಟಿ ಸೆಂಟರ್ ಪ್ರಧಾನ ವ್ಯವಸ್ಥಾಪಕ ಜಗದೀಶ್, ಭಾನವಿ ಅಸ್ಪತ್ರೆಯ ಹಿರಿಯ ಸೀರೋಗ ತಜ್ಞೆ ಡಾ.ಆರ್.ಲತಾ, ವೈದ್ಯಕೀಯ ಅಧೀಕ್ಷಕ ಡಾ. ಹೆಚ್.ಎನ್.ಚಂದನ್‌ಕುಮಾರ್, ಆಸ್ಪತ್ರೆಯ ನರ್ಸಿಂಗ್ ಅಧೀಕ್ಷಕ ನಿರಂಜನ್ ಸ್ವಾಮಿ ಉಪಸ್ಥಿತರಿದ್ದರು.




# ರಾಮನಗರದಲ್ಲಿ ಒಡೆಯರ್ ಸ್ಟಾಪ್

## ಜನರ ಧ್ವನಿಗೆ ಸಂದ ಜಯ! । ಕೇಂದ್ರ ರೈಲ್ವೆ ಇಲಾಖೆ ಆದೇಶ


ರಾಮನಗರ: ಮೈಸೂರು ಮತ್ತು ಬೆಂಗಳೂರು ನಡುವೆ ಸಂಚರಿಸುತ್ತಿದ್ದ ಒಡೆಯರ್ ಎಕ್ಸ್‌ಪ್ರೆಸ್ ರೈಲು ನಿಲುಗಡೆಗೆ ಕೇಂದ್ರ ರೈಲ್ವೆ ಇಲಾಖೆ ಆದೇಶ ಹೊರಡಿಸಿದೆ. ಮಂಡ್ಯ ಮತ್ತು ಕೆಂಗೇರಿಯಲ್ಲಿ ಮಾತ್ರ ನಿಲುಗಡೆ ಇದ್ದ ಈ ರೈಲು ಈಗ ಜಿಲ್ಲಾ ಕೇಂದ್ರ ರಾಮನಗರದಲ್ಲಿ ನಿಲುಗಡೆಯಾಗುತ್ತಿರುವುದನ್ನು ಪ್ರಯಾಣಿಕರು ಸ್ವಾಗತಿಸಿದ್ದಾರೆ.

ಬೆಳಿಗ್ಗೆ ಮತ್ತು ಸಂಜೆ ವೇಳೆ ರಾಮನಗರದಲ್ಲಿ ಬೆಂಗಳೂರು ಅಥವಾ ಮೈಸೂರು ಕಡೆಗೆ ರೈಲುಗಳ ಓಡಾಟ ಇದ್ದೇ ಇದೆ. ಆದರೆ ಬೆಳಿಗ್ಗೆ 11 ಗಂಟೆಯ ನಂತರದಲ್ಲಿ ರೈಲು ಸಂಚಾರ ಕಡಿಮೆ. ಒಡೆಯರ್ ರೈಲು ನಿಲುಗಡೆಗೆ ಬಹಳ ದಿನಗಳ ಬೇಡಿಕೆ ಇತ್ತು. ಇದೀಗ ಕೇಂದ್ರ ರೈಲ್ವೆ ಇಲಾಖೆ ಒಡೆಯರ್ ರೈಲು ರಾಮನಗರದಲ್ಲಿ ನಿಲುಗಡೆಗೆ ಆದೇಶ ನೀಡಿದೆ.




### ಸಂಸದರ ಅಭಿಪ್ರಾಯ

ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಸಂಸದ ಡಾ.ಸಿ.ಎನ್.ಮಂಜುನಾಥ್ ರೈಲು ನಿಲುಗಡೆ ಆದೇಶಕ್ಕೆ ಸಂತಸ ವ್ಯಕ್ತಪಡಿಸಿದ್ದಾರೆ. ಈ ಭಾಗದ ಪ್ರಯಾಣಿಕರು ವಿಶೇಷವಾಗಿ ವ್ಯಾಪಾರಸ್ಥರು ಬೇಡಿಕೆ ಇಟ್ಟಿದ್ದರು. ಇವರೊಂದಿಗೆ ವಿದ್ಯಾರ್ಥಿಗಳು, ಉದ್ಯೋಗಾರ್ಥಿಗಳು ಮತ್ತು ಸಾಮಾನ್ಯ ನಾಗರೀಕರು ಎದುರಿಸುತ್ತಿದ್ದ ಸಂಚಾರದ ತೊಂದರೆಗಳನ್ನು ವ್ಯಕ್ತಪಡಿಸಿದ್ದರು. ಈ ನಿಲುಗಡೆ ಅತ್ಯಂತ ಅಗತ್ಯವಾಗಿತ್ತು. ಜನರ ಈ ನ್ಯಾಯಸಮ್ಮತ ಬೇಡಿಕೆಯನ್ನು ಈಡೇರಿಸಲು ನಾನು ನಿರಂತರವಾಗಿ ಕೇಂದ್ರ ಸರ್ಕಾರದ ಗಮನ ಸೆಳೆದಿದ್ದೆ ಎಂದು ತಿಳಿಸಿದ್ದಾರೆ.



ರೈಲು ನಿಲುಗಡೆ ಸಂಬಂಧ ತಾವು ಹಲವು ಬಾರಿ ಪತ್ರಗಳ ಮೂಲಕ ಮನವಿ ಸಲ್ಲಿಸುವುದರ ಜೊತೆಗೆ, ಖುದ್ದಾಗಿ ಕೇಂದ್ರ ರೈಲ್ವೇ ಸಚಿವರಾದ ಅಶ್ವಿನಿ ವೈಷ್ಣವ್ ಮತ್ತು ರಾಜ್ಯ ರೈಲ್ವೇ ಖಾತೆ ಸಚಿವರಾದ ವಿ. ಸೋಮಣ್ಣ ಅವರನ್ನು ಭೇಟಿ ಮಾಡಿ, ರಾಮನಗರದಲ್ಲಿ ಈ ರೈಲು ನಿಲುಗಡೆಯ ಅಗತ್ಯತೆ ಮತ್ತು ಜನರಿಗೆ ಆಗುವ ಅನುಕೂಲಗಳನ್ನು ವಿವರವಾಗಿ ಮನವರಿಕೆ ಮಾಡಿಕೊಟ್ಟಿದ್ದೆ. ಈ ಪ್ರಯತ್ನಗಳಿಗೆ ಇಂದು ಸಕಾರಾತ್ಮಕ ಫಲ ದೊರೆತಿರುವುದು ಅಪಾರ ಸಂತೋಷವನ್ನುಂಟುಮಾಡಿದೆ.

ನನ್ನ ಮನವಿಗೆ ಸ್ಪಂದಿಸಿ, ರಾಮನಗರದಲ್ಲಿ ಒಡೆಯರ್ ಎಕ್ಸಪ್ರೆಸ್ ನಿಲುಗಡಗೆ ಅನುಮೋದನೆ ನೀಡಿದ ಕೇಂದ್ರ ರೈಲ್ವೇ ಸಚಿವರಾದ ಅಶ್ವಿನಿ ವೈಷ್ಣವ್, ರೈಲ್ವೇ ರಾಜ್ಯ ಖಾತೆ ಸಚಿವರಾದ ವಿ.ಸೋಮಣ್ಣ ಹಾಗೂ ಈ ಕಾರ್ಯದಲ್ಲಿ ಕೈಜೋಡಿಸಿದ ಎಲ್ಲಾ ಸಂಬಂಧಪಟ್ಟ ಅಧಿಕಾರಿಗಳಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ತಿಳಿಸಿದ್ದಾರೆ.

ಈ ನಿರ್ಧಾರದಿಂದ ರಾಮನಗರ ಮತ್ತು ಚನ್ನಪಟ್ಟಣ ಭಾಗದ ಜನತೆಗೆ ಬಹಳಷ್ಟು ಅನುಕೂಲವಾಗಲಿದೆ. ಬೆಂಗಳೂರು ಸೇರಿದಂತೆ ಪ್ರಮುಖ ನಗರಗಳೊಂದಿಗೆ ಸಂಪರ್ಕ ಮತ್ತಷ್ಟು ಸುಗಮವಾಗುವುದರಿಂದ ಶಿಕ್ಷಣ, ಉದ್ಯೋಗ, ಆರೋಗ್ಯ ಸೇವೆಗಳು ಹಾಗೂ ವ್ಯಾಪಾರ ಚಟುವಟಿಕೆಗಳಿಗೆ ಉತ್ತೇಜನ ದೊರೆಯಲಿದೆ. ವಿಶೇಷವಾಗಿ ದೈನಂದಿನ ಪ್ರಯಾಣಿಕರಿಗೆ ಇದು ದೊಡ್ಡ ಮಟ್ಟದ ನೆರವಾಗಲಿದೆ.

ಮುಂದಿನ ದಿನಗಳಲ್ಲಿ ಕೂಡ ಜನರ ಅಗತ್ಯಗಳನ್ನು ಮನಗಂಡು, ಈ ಭಾಗದ ಅಭಿವೃದ್ಧಿಗೆ ಇನ್ನಷ್ಟು ಸೌಲಭ್ಯಗಳನ್ನು ತರಲು ನಾನು ಬದ್ಧನಾಗಿದ್ದೇನೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಡೆಯರ್ ರೈಲು ರಾಮನಗರದಲ್ಲಿ ನಿಲುಗಡೆಗೆ ಆದೇಶ ಹೊರಡಿಸಲಾಗಿದೆ. ಆದರೆ ಇನ್ನು ಅಧಿಕೃತ ವೇಳಾ ಪಟ್ಟಿ ಬಿಡುಗಡೆಯಾಗಿಲ್ಲ ಎಂಬುದನ್ನು ಪ್ರಯಾಣಿಕರು ಗಮನಿಸಬೇಕು. ಈ ರೈಲು ಮೈಸೂರ ಜಂಕ್ಷನ್ ನಿಲ್ದಾಣದಿಂದ ಬೆಳಿಗ್ಗೆ 11.30ಕ್ಕೆ ಹೊರಡಲಿದೆ. ಮಂಡ್ಯ ನಿಲ್ದಾಣದಿಂದ 12.16ಕ್ಕೆ ಹೊರಡಲಿದೆ. ಅಂದರೆ ಅಂದಾಜು 12.55ರವೇಳೆಗೆ ರಾಮನಗರವನ್ನು ತಲುಪಬಹುದು ಎಂದು ಹೇಳಲಾಗಿದ್ದು, ಕೆಂಗೇರಿಯಲ್ಲಿ ನಿಲುಗಡೆ ನಂತರ ಬೆಂಗಳೂರು ಕೆ.ಎಸ್.ಆರ್ ನಿಲ್ದಾಣವನ್ನು 13.36ರವೇಳೆಗೆ ತಲುಪಲಿದೆ. ಇದೇ ರೈಲು ಬೆಂಗಳೂರು ಕೆ.ಎಸ್.ಆರ್.ನಿಲ್ದಾಣದಿಂದ ಮಧ್ಯಾಹ್ನ 3.15ಕ್ಕೆ ಹೊರಡಲಿದೆ. ಕೆಂಗೇರಿಯಲ್ಲಿ ನಿಲುಗಡೆ ನಂತರ ರಾಮನಗರಕ್ಕೆ ಸುಮಾರು 4 ಗಂಟೆವೇಳೆಗೆ ತಲುಪಬಹುದು ಎಂದು ಹೇಳಲಾಗಿದೆ. ಅಧಿಕೃತ ವೇಳಾ ಪಟ್ಟಿ ಬಿಡುಗಡೆ ನಂತರ ನಿಖರ ಮಾಹಿತಿ ದೊರೆಯಲಿದೆ.



## ಕೃಷ್ಣ ವಂದನ

**ಸ್ನೇಹಾ ಆನಂದ್**



### ಹೇ ಕೃಷ್ಣಾ!

ಕೂಸನು ಕಂಡಿರಾ,
ಬಾಲಕೃಷ್ಣನ ಕಂಡಿರಾ,
ಗೊಲ್ಲನ ಕಂಡೀರಾ,
ಯದುಕುಲ ತಿಲಕನ ಕಂಡಿರಾ!

ದೇವಕಿ ಉದರದಿ ಜನಿಸಿತು ಕೂಸು,
ಯಮುನಾ ಶರದಿಯ ದಾಟಿತು ಕೂಸು!
ಗೋಕುಲದೆಡೆಗೆ ನಡೆಯಿತು ಕೂಸು,
ಯಶೋದೆಯ ಮಡಿಲಲಿ ಬೆಳೆದ ಕೂಸು!

ವಿಷದ ಹಾಲನು ಉಂಡಿತು ಕೂಸು,
ಹಿಡಿಯ ಮಣ್ಣನು ಮುಕ್ಕಿತು ಕೂಸು!
ಜಗವನೇ ಬಾಯೊಳು ತೋರಿತು ಕೂಸು,
ಬೆಣ್ಣೆ ಚೋರನೆಂಬ ಹೆಸರಿನ ಕೂಸು!

ಕಂಸ ಮಾವನ ಕೊಂದಿತು ಕೂಸು,
ಸರ್ಪದ ಹೆಡೆಯನು ಮೆಟ್ಟಿತು ಕೂಸು!
ಬಲಿಯ ಶಿರವನ್ನು ಒತ್ತಿದ ಕೂಸು,
ಹೇಮ ಗಿರೀಶನೆಂಬ ಪ್ರೇಮದ ಕೂಸು!

# ವಿದ್ಯಾರ್ಥಿಗಳ ಭವಿಷ್ಯ ರೂಪಿಸಿಕೊಳ್ಳಲು ಕೆರಿಯರ್ ಮೇಳ ಸಹಕಾರಿ

**ಸಿಇಓ ಮೋನಾರೋತ್**



ಚಾಮರಾಜನಗರ, ಜಿಲ್ಲೆಯಲ್ಲಿ ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ನಿಟ್ಟನಲ್ಲಿ ಆಯೋಜಿಸಲಾಗಿದ್ದ ವೃತ್ತಿ ಶಿಕ್ಷಣ ಪ್ರದರ್ಶನ ಮತ್ತು ಕೆರಿಯರ್ ಮೇಳವು ಮಂಗಳವಾರ ನಡೆಯಿತು.

10ನೇ ತರಗತಿ ಮತ್ತು ಪಿಯುಸಿ ನಂತರದ ಶೈಕ್ಷಣಿಕ ಅವಕಾಶಗಳು, ಉದ್ಯೋಗಾವಕಾಶಗಳು ಹಾಗೂ ಕೌಶಲ್ಯಾಧಾರಿತ ಕೋರ್ಸ್‌ಗಳ ಬಗ್ಗೆ ವಿದ್ಯಾರ್ಥಿಗಳಿಗೆ ಸಮಗ್ರ ಮಾರ್ಗದರ್ಶನ ನೀಡಲಾಯಿತು. ಕೌಶಲ್ಯ ಕಡೆ ಗಮನಹರಿಸಲು ಮತ್ತು ಉಜ್ವಲ ಭವಿಷ್ಯ ರೂಪಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡಲಾಯಿತು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಕರ್ನಾಟಕ ಸರ್ಕಾರ, ಸಮಗ್ರ ಶಿಕ್ಷಣ- ಕರ್ನಾಟಕ,ಜಿಲ್ಲಾಡಳಿತ ಹಾಗೂ ಜಿ.ಪಂ, ಶಾಲಾ ಶಿಕ್ಷಣ ಇಲಾಖೆ , ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಜಿಲ್ಲಾ ವೃತ್ತಿಪರ ಮತ್ತು ವೃತ್ತಿ ಮಾರ್ಗದರ್ಶನ ಘಟಕ ಇವರ ವತಿಯಿಂದ ಅಯೋಜಿಸಿದ ವೃತ್ತಿ ಶಿಕ್ಷಣ ಪ್ರದರ್ಶನ ಮತ್ತು ಕೆರಿಯರ್ ಮೇಳದಲ್ಲಿ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಹಂತದ ವಿದ್ಯಾ ರ್ಥಿಗಳಿಗಾಗಿ ಮೇಳ ಹಮ್ಮಿಕೊಳ್ಳಲಾ ಗಿತ್ತು. ವಿವಿಧ ವೃತ್ತಿ ಶಿಕ್ಷಣದ 20 ಮಾರ್ಗದರ್ಶನ ಕೇಂದ್ರದವರು ಮಳಿಗೆ ತೆರೆದು, ವಿದ್ಯಾರ್ಥಿಗಳಿಗೆ ಮಾಹಿತಿ ಒದಗಿಸಿದರು.

ಮೇಳ ಉದ್ಘಾಟಿಸಿದ ಜಿ.ಪಂ. ಸಿಇಓ ಮೋನಾರೋತ್ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಲು ಇದೊಂದು ಒಳ್ಳೆಯ ಅವಕಾಶ. ವಿದ್ಯಾರ್ಥಿಗಳು, ವೃತ್ತಿ ಶಿಕ್ಷಣದ ಮಾಹಿತಿ ಪಡೆದು ಜೀವನದಲ್ಲಿ ಸದುಪಯೋಗಪಡೆದುಕೊಳ್ಳಬೇಕು ಎಂದರು. ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯಲ್ಲಿ ಉಪನಿರ್ದೇಶಕ ಚಂದ್ರಪಾಟೀಲ್, ಪ್ರಭಾರ ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಕೇಶವನ್, ವೃತ್ತಿ ಮಾರ್ಗದರ್ಶನ ಸಂಪನ್ಮೂಲ ವ್ಯಕ್ತಿ ಹೆಚ್. ಎಂ. ಪೃಥ್ವಿರಾಜ್, ಪ್ರೌಢ ಶಾಲಾ ಶಿಕ್ಷಕರ ಸಂಘದ ಜಿಲ್ಲಾ ಕಾರ್ಯದರ್ಶಿ ಎಂ.ಕಿರಣ್ ರಾಜ್, ಐಟಿಐ ಕಾಲೇಜು ಪ್ರಾಂಶುಪಾಲ ಶ್ರೀಕಂಠಾರಾಧ್ಯ ಇತರರು ಹಾಜರಿದ್ದರು.

# ಪಿಂಚಣಿದಾರರ ಹಕ್ಕಿಗಾಗಿ ಪ್ರತಿಭಟನೆ



ಮೈಸೂರು: ಕೇಂದ್ರ ಸರ್ಕಾರದ ನಿವೃತ್ತ ನೌಕರರಿಗೆ ಸಂಬಂಧಿಸಿದ ಊರ್ಜಿತ ಕಾಯಿದೆ (ವ್ಯಾಲಿಡೇಷನ್ ಆಕ್ಟ್) ಹಾಗೂ 8ನೇ ವೇತನ ಆಯೋಗದ ನಿಯಮಾವಳಿಗಳಲ್ಲಿ ಪಿಂಚಣಿದಾರರಿಗೆ ಅನಾನುಕೂಲ ವಾಗುವ ನಿರ್ಧಾರಗಳನ್ನು ಖಂಡಿಸಿ, ಮೈಸೂರಿನಲ್ಲಿ ನಿವೃತ್ತ ನೌಕರರು ಕಪ್ಪುಬಟ್ಟೆ ಧರಿಸಿ ಸಾಂಕೇತಿಕ ಪ್ರತಿಭಟನೆ ನಡೆಸಿದರು.

ಕೇಂದ್ರ ಸರ್ಕಾರದ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಂಡಿಸಿರುವ ಪ್ರಸ್ತಾವನೆಯ ಪ್ರಕಾರ, 01-01-2026 ರಿಂದ ಪೂರ್ವಾನ್ವಯವಾ ಗುವಂತೆ ಪಿಂಚಣಿದಾರರನ್ನು ವಿಭಜಿಸಿ, ಮುಂದಿನ ದಿನಗಳಲ್ಲಿ ವೇತನ ಪರಿಷ್ಕರಣೆ ಹಾಗೂ ವಾರ್ಷಿಕವಾಗಿ ನೀಡುತ್ತಿದ್ದ ಎರಡು ತುಟ್ಟಿ ಭತ್ಯೆ ನೀಡಲು ಸಾಧ್ಯವಾ ಗುವುದಿಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವುದರಿಂದ ನಿವೃತ್ತ ನೌಕರರಲ್ಲಿ ಆತಂಕ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಅಖಿಲ ಭಾರತ ನಿವೃತ್ತ ನೌಕರರ ಫೆಡರೇಷನ್ ಹಾಗೂ ವಿವಿಧ ಸಂಘಟನೆಗಳ ಕರೆ ಮೇರೆಗೆ ದೇಶಾದ್ಯಂತ ಪ್ರತಿಭಟನೆಗಳು ನಡೆಯುತ್ತಿದ್ದು, ಮೈಸೂರಿನ ಹೊಸ ಡಿಸಿ ಕಚೇರಿ ಆವರಣದಲ್ಲಿ ನಿವೃತ್ತ ನೌಕರರು ಪ್ರತಿಭಟನೆ ನಡೆಸಿದರು.

# ಕೇಂದ್ರ ಸರ್ಕಾರದ ನೀತಿಗೆ ಖಂಡನೆ




ಕೊಳ್ಳೇಗಾಲ: ನಿವೃತ್ತ ನೌಕರರಿಗೆ ಹಾಗೂ ಕುಟುಂಬ ಪಿಂಚಣಿದಾರರಿಗೆ ಸಂಬಂಧಪಟ್ಟಂತೆ, ಮುಂದಿನ ದಿನಗಳಲ್ಲಿ ನಿವೃತ್ತಿ ವೇತನ ಮತ್ತು ಕುಟುಂಬ ಪಿಂಚಣಿಯನ್ನು ಪರಿಷ್ಕರಣೆ ಮಾಡಲು ಹಾಗೂ ವಾರ್ಷಿಕವಾಗಿ ನೀಡುತ್ತಿದ್ದ 2 ತುಟ್ಟಿ ಭತ್ಯೆಯನ್ನು ನೀಡಲು ಸಾಧ್ಯವಿಲ್ಲ ಕೇಂದ್ರ ಸರ್ಕಾರದ ನೀತಿಯನ್ನು ಖಂಡಿಸಿ ಕರ್ನಾಟಕ ನಿವೃತ್ತ ನಿವೃತ್ತ ನೌಕರರ ಸಂಘ ತಾಲ್ಲೂಕು ಘಟಕದ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು.

ಪಟ್ಟಣದ ತಾಲ್ಲೂಕು ಕಚೇರಿ ಮುಂಭಾಗದಲ್ಲಿ ತೋಳಿಗೆ ಕಪ್ಪುಪಟ್ಟಿಯನ್ನು ಧರಿಸಿ ಜಮಾಯಿಸಿದ್ದ ನಿವೃತ್ತ ನೌಕರರು ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ಪ್ರಧಾನಮಂತ್ರಿ ಹೆಸರಿನ ಮನವಿ ಪತ್ರವನ್ನು ತಹಶಿಲ್ದಾರ್ ಕುಮಾರ್‌ಗೆ ಮನವಿ ಸಲ್ಲಿಸಿದರು. ಕರ್ನಾಟಕ ನಿವೃತ್ತ ನೌಕರರ ಸಂಘ ತಾಲ್ಲೂಕು ಘಟಕ ಅಧ್ಯಕ್ಷ ಶೇಖರ್, ಕಾರ್ಯ ದರ್ಶಿ ಶಿವಸ್ವಾಮಿ, ಗೌರವಧ್ಯಕ್ಷ ಚನ್ನಮಾದೇಗೌಡ, ಮಾಜಿ ಅಧ್ಯಕ್ಷ ಕೆಂಚೇಗೌಡ, ಮಾಜಿ ಖಜಾಂಚಿ ಅಣ್ಣಾದ್ರಯ್ಯ, ಎಂ. ಬಸವರಾಜು, ಗೌಡಪ್ಪ, ಇಂದ್ರಕುಮಾರ್, ಸಿದ್ದಯ್ಯ, ಶ್ರೀನಿವಾಸ್, ಕೆ.ಸಿ.ವೀರಪ್ಪ, ಇದ್ದರು.

# ರಸ್ತೆಯಲ್ಲಿ ಹಂಪ್ ಹಾಕಲು ಒತ್ತಾಯ

ಗುಂಡ್ಲುಪೇಟೆ:- ಕರ್ನಾಟಕ ಕಾವಲು ಪಡೆ ವತಿಯಿಂದ ಚಾಮರಾಜ ನಗರ ಮುಖ್ಯ ರಸ್ತೆಯಲ್ಲಿರುವ ಯಂಗ್ಸ್ ಸ್ಕಾಲರ್ ಶಾಲೆಯ ಮುಂಭಾಗ ವಾಹನಗಳು ಅತೀ ವೇಗವಾಗಿ ಸಂಚರಿಸುವ ಕಾರಣ ಅಪಘಾತಗಳು ಸಂಭವಿಸುತ್ತಿವೆ ಆದ್ದರಿಂದ ಕೂಡಲೇ ರಸ್ತೆಯಲ್ಲಿ ಹಂಪ್ಸ್ ಹಾಕಬೇಕೆಂದು ಲೋಕ ಉಪಯೋಗಿ ಇಲಾಖೆಯ

ಸಹಾಯಕ ಕಾರ್ಯಪಾಲಕ ಅಭಿಯಂತರವರ ಕಚೇರಿಗೆ ತೆರಳಿ ಜೆ.ಇ.ಬಸವರಾಜುರವರಿಗೆ ಮನವಿ ಸಲ್ಲಿಸಿ ಮಾತನಾಡಿದ ಕಾವಲು ಪಡೆಯ ತಾಲ್ಲೂಕು ಅಧ್ಯಕ್ಷ ಎ.ಅಬ್ದುಲ್ ಮಾಲಿಕ್ ರಸ್ತೆಗಳಲ್ಲಿ ಹಂಪ್ಸ್ ಇದ್ದರೂ ಇಲ್ಲದಂತಿದೆ ಕೂಡಲೇ ಶಾಲೆಯ ಮುಂಭಾಗ ಹಂಪ್ಸ್ ಹಾಕಬೇಕು ತಾತ್ಕಾಲಿಕವಾಗಿ ಬ್ಯಾರಿಕೇಡ್ ಗಳನ್ನು ಅಳವಡಿಸಬೇಕು ಎಂದು ಒತ್ತಾಯಿಸಿದರು. ಈ ವೇಳೆ ಟೌನ್ ಉಪಾಧ್ಯಕ್ಷ ಸಾದಿಕ್ ಪಾಷ.ಕನ್ನಡಪರ ಹಿರಿಯ ಹೋರಾಟಗಾರಾದ ಬ್ರಹ್ಮಾನಂದ್. ರಾಮೇಗೌಡ.ಟೌನ್ ಸಂಚಾಲಕ ಮಿಮಿಕ್ರಿರಾಜು.ಹಾಜರಿದ್ದರು.



## ಜಿಲ್ಲಾ ಮಟ್ಟದ ಕ್ರೀಡಾ ಕೂಟ

# ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿದ್ಯಾರ್ಥಿಗಳ ಸಾಧನೆ

ಚಾಮರಾಜನಗರ, ಇತ್ತೀಚೆಗೆ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆವರಣದಲ್ಲಿ ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯ ಮೈ ಭಾರತ್ ಕೇಂದ್ರದ ವತಿಯಿಂದ ನಡೆದ ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ತಾಲೂಕಿನ ಭೋಗಾಪುರ ವಸತಿಯುಕ್ತ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿದ್ಯಾರ್ಥಿಗಳು ಭಾಗವಹಿಸಿ ಗೆಲುವು ಸಾಧಿಸಿ ಪ್ರಶಸ್ತಿ ಪಡೆದುಕೊಂಡಿದ್ದಾರೆ.

ಶಾಟ್ ಪುಟ್ ಸ್ಪರ್ಧೆಯಲ್ಲಿ ಸಿಂಧೂ, ಪ್ರಥಮ ಬಿಕಾಂ, ಪ್ರಥಮ ಸ್ಥಾನ ಹಾಗೂ ಹಗ್ಗ ಜಗ್ಗಾಟ ಸ್ಪರ್ಧೆಯಲ್ಲಿ ವಿದ್ಯಾರ್ಥಿನಿಯರು ದ್ವಿತೀಯ ಸ್ಥಾನ ಪಡೆದು ಪಾರಿತೋಷಕ ಮತ್ತು ಬಹುಮಾನವನ್ನು ಪಡೆದುಕೊಂಡಿರುತ್ತಾರೆ. ಕ್ರೀಡೆಯಲ್ಲಿ ವಿಜೇತರಾದ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರಾಂಶುಪಾಲರಾದ ಡಾ. ಪಿ. ದೇವರಾಜುರವರು ಅಭಿನಂದಿಸಿದರು ಮತ್ತು ವಸತಿಯುಕ್ತ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಭೋಗಾಪುರ ಇಲ್ಲಿ ಕ್ರೀಡಾ ಚಟುವಟಿಕೆಗಳ ಜೊತೆಗೆ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು



ತೊಡಗಿಸಿಕೊಳ್ಳಲು ಮುಕ್ತ ಅವಕಾಶವಿದ್ದು, ಮುಖೇನ ವಿದ್ಯಾರ್ಥಿಗಳು ಸಾಧನೆ ಮಾಡಲು ಸಾಧ್ಯವಾಗುತ್ತಿದೆ. ಇದು ಜಿಲ್ಲೆಯ ಹೆಮ್ಮೆಯ ಬೆಳವಣಿಗೆಯಾಗಿದ್ದು, ಚಾಮರಾಜನಗರ ಜಿಲ್ಲೆಯ ಎಲ್ಲಾ ಪದವಿಪೂರ್ವ ವಿದ್ಯಾರ್ಥಿ/ ವಿದ್ಯಾರ್ಥಿನಿಯರು ಈ ಕಾಲೇಜಿನಲ್ಲಿ ಲಭ್ಯವಿರುವ ಬಿಎ, ಬಿಎಸ್ಸಿ, ಬಿಕಾಂ ಪದವಿ ಪ್ರವೇಶಾತಿ ಪಡೆಯುವುದರ ಜೊತೆಗೆ ನಾಯಕತ್ವದ ಗುಣ ಮತ್ತು ಕ್ರೀಡಾ ಚಟುವಟಿಕೆಗಳಲ್ಲೂ ತೊಡಗಿಸಿಕೊಳ್ಳಲು ಪ್ರಾಂಶುಪಾಲರು ಕರೆ ನೀಡಿದರು.

ನೆನ್ನೆ ನಡೆದ ಕ್ರೀಡಾ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳ ಸಾಧನೆಯನ್ನು ಕಂಡು ಅವರನ್ನು ಪ್ರೋತ್ಸಾಹಿಸಲು ಚಾಮರಾಜನಗರ ಪಟ್ಟಣದ ಗಾಳಿಪುರ ನಗರಸಭಾ ಮಾಜಿ ಸದಸ್ಯ ಮಹೇಶ್ ಮತ್ತು ಸ್ನೇಹಿತರಾದ ಬಾಲು, ಮೂರ್ತಿ, ಮಹೇಶ್ ನವೀನ್, ಶಿವು ಮತ್ತು ಮಹೇಶ್ ಇತರ ಸ್ನೇಹಿತರು ವಿದ್ಯಾರ್ಥಿಗಳಿಗೆ ಕ್ರೀಡೋಪಕರಣಗಳನ್ನು ಉಚಿತವಾಗಿ ನೀಡಿರುತ್ತಾರೆ. ಇವರಿಗೆ ವಿದ್ಯಾರ್ಥಿಗಳು ಮತ್ತು ಕಾಲೇಜಿನ ಪರವಾಗಿ ಅಭಿನಂದನೆ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಮನೋಜ್ ಕುಮಾರ್.ಎಂ, ಅಧ್ಯಾಪಕರಾದ ನಂಜುಂಡಯ್ಯ ಎಂ. ಡಾ. ರಮೇಶಬಾಬು ವಿ.ಆರ್, ಗಿರೀಶ್ ಟಿ.ಆರ್, ರಂಗಸ್ವಾಮಿ ಆರ್. ಧರ್ಮೇಂದ್ರ ಎನ್. ಡಾ. ವಿಶ್ವನಾಥ ಎಂ. ಯಶೋಧದೇವಿ ಸಿ.ಎಸ್, ನೇತ್ರಾವತಿ ಎಂ.ಬಿ, ಭಾಗ್ಯ ಆರ್, ಮಧು ಹೆಚ್.ಎಂ. ಪೂರ್ಣಿಮ ವಿ. ಎಸ್, ಕುಸುಮ ಎಚ್,. ಕುಮಾರ ಬಿ ,ಅಧ್ಯಾಪಕೇತರಾದ ಸ್ವಾಮಿ ಆರ್,ವಿಶ್ವನಾಥ ಕೆ, ಪ್ರಭುಸ್ವಾಮಿ ಸಿ, ಭಾಗವಹಿಸಿದ್ದರು..

# ಪರಿಹಾರ ನೀಡುವಂತೆ ಒತ್ತಾಯಿಸಿ ರೈತರ ಪ್ರತಿಭಟನೆ




ಚಾಮರಾಜನಗರ: ಕರ್ನಾಟಕ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ರಾಜ್ಯಾಧ್ಯಕ್ಷ ಹಳ್ಳಿಕೆರೆ ಹುಂಡಿ ಭಾಗ್ಯರಾಜ್ ಅಗ್ರಹ ಚಾಮರಾಜನಗರ, ಅಕಾಲಿಕ ಮಳೆಗೆ ತುತ್ತಾಗಿ ಬೆಳೆ ನಷ್ಟದಿಂದ ಆತಂಕಗೊಂಡಿರುವ ರೈತರಿಗೆ ವೈಜ್ಞಾನಿಕವಾಗಿ ಬೆಳೆಪರಿಹಾರ ನೀಡುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ಆಶ್ರಯದಲ್ಲಿ ನಗರದ ಭುವನೇಶ್ವರಿ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ಬಳಿಕ ಬಿ.ರಾಚಯ್ಯ ಜೋಡಿ ರಸ್ತೆಯ ಮೂಲಕ ಪ್ರತಿಭಟನೆಯಲ್ಲಿ ತೆರಳಿದ ರೈತರು ಜಿಲ್ಲಾಢಳಿತದ ಮುಂಭಾಗ ಕೆಲ ಕಾಲ ಪ್ರತಿಭಟನೆ ನಡೆಸಿ, ರಾಜ್ಯ ಹಾಗೂ ಕೇಂದ್ರ ಸರಕಾರಗಳ ವಿರುದ್ದ ಘೋಷಣೆಗಳನ್ನು ಕೂಗಿ ಆಕ್ರೋಶ ಹೊರ ಹಾಕಿದರು. ಈ ವೇಳೆ ರಾಜ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಮಾತನಾಡಿ ಕಳೆದ 17 ಮತ್ತು 18 ದಿನಾಂಕ ರಂದು ರಾಜ್ಯದ್ಯಂತ ಹಾಗೂ ಚಾಮರಾಜನಗರ ಜಿಲ್ಲೆ ವ್ಯಾಪ್ತಿಯಲ್ಲಿ ಆಕಾಲಿಕ ಆಲಿಕಲ್ಲು ಮಳೆ ಸುರಿದ ಪರಿಣಾಮ ತೋಟಗಾರಿಕೆ ಬೆಳೆಗಳಾದ ಬಾಳೆ. ಈರುಳ್ಳಿ. ಕಲ್ಲಂಗಡಿ. ಪಪ್ಪಾಯಿ. ಅರಿಶಿಣ ಒಣಗಿಸಲು ಹಾಕಿದ್ದ ಮೆಣಸಿನಕಾಯಿ. ಸೌತೆಕಾಯಿ ನಾಶವಾಗಿದೆ. ರಾಜ್ಯದ ಇನ್ನಿತರ ಭಾಗದಲ್ಲಿ ದ್ರಾಕ್ಷಿ ಸಹ ಹಾನಿಯಾಗಿದೆ ಈ ಬೆಳೆಗಳಿಗೆ ವೈಜ್ಞಾನಿಕವಾಗಿ ಆಕಾಲಿಕ ಮಳೆಗೆ ಬೆಳೆ ನಷ್ಟವನ್ನು ಸರ್ಕಾರ ಘೋಷಣೆ ಮಾಡಬೇಕು ಚಾಮರಾಜನಗರ ಜಿಲ್ಲೆಯಲ್ಲಿ ಸಾವಿರಾರು ಹೆಕ್ಟರ್ ಪ್ರದೇಶದಲ್ಲಿ ಬೆಳೆಗಳು ನಷ್ಟವಾಗಿದೆ ಈ ನಷ್ಟವನ್ನು ತೋಟಗಾರಿಕೆ ಮತ್ತು ಕಂದಾಯ ಇಲಾಖೆಯ ಜಂಟಿ ಸರ್ವೆ ನಡೆಸಿ ಕೇಂದ್ರ ಮತ್ತು ರಾಜ್ಯ ಸರ್ಕಾರ ಬೆಳೆ ನಷ್ಟವನ್ನು ನೀಡಬೇಕು ಎಂದು ಒತ್ತಾಯಿಸಿದರು. ಬೆಳೆ ನಷ್ಟ ಆಗಿದ್ದರೂ ಕೂಡ ಸಂಬಂಧಪಟ್ಟ ಇಲಾಖೆ ಸಚಿವರು ಮತ್ತು ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ವಿರೋಧ ಪಕ್ಷದ ನಾಯಕರಾಗಲಿ ಸ್ಥಳಕ್ಕೆ ಭೇಟಿ ಮಾಡಿ ಪರಿಶೀಲನೆ ಮಾಡದೆ ಉಪಚುನಾವಣೆಯ ಗುಂಗಿನಲ್ಲಿ ನಿರತರಾಗಿದ್ದಾರೆ ಎಂದು ದೂರಿದರು. ತಕ್ಷಣ ಸಂಬಂಧಪಟ್ಟಂತಹ ಜಿಲ್ಲಾಡಳಿತ ಕಂದಾಯ ಮತ್ತು ತೋಟಗಾರಿಕೆ ಇಲಾಖೆಯ ಜಂಟಿ ಸರ್ವೆಯ ಮೂಲಕ ವಿಸ್ತೃತ ವರದಿಯನ್ನು ತಯಾರಿಸಿ ಬೆಳೆ ನಷ್ಟವಾಗಿರುವ ಪ್ರತಿ ಯೊಬ್ಬ ರೈತನಿಗೂ ಪರಿಹಾರ ಸಿಗುವಂತೆ ಕ್ರಮ ವಹಿಸಬೇಕು ಯಾವ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದರೆ ಅವರ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಈ ಬಗ್ಗೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಹೋರಾಟ ತೀವ್ರ ಗೊಳಿಸುವುದಾಗಿ ಎಚ್ಚರಿಸಿದರು. ಕೆರೆಹುಂಡಿ ರಾಜಣ್ಣ ಹಾಲಿನ ನಾಗರಾಜ್ ಅಡ್ಡುವಿನಹಳ್ಳಿ ಎಚ್ಎಸ್ ರಾಜು ಒಳಗೆರೆ ಗಣೇಶ್ ಮಲಿಯೂರು ಮಹೇಂದ್ರ ಸತೀಶ್ ನರಸುಮಂಗಲ ನಾಗು ಪ್ರಕಾಶ್ ಗಾಂಧಿ. ಚಿದಂಬರ್ ಊರದಹಳ್ಳಿ ರಾಮಣ್ಣ ಸ್ಯಾಂಡ್ ಹಳ್ಳಿ ಬಸವರಾಜು ನಾಗರಾಜಪ್ಪ. ಮುಕಡಹಳ್ಳಿ ರಾಜು ಪುಟ್ಟ ಮಲ್ಲೇಗೌಡ ಇತರರು ಭಾಗವಹಿಸಿದ್ದರು.

# ವಸ್ತುಗಳ ಗುಣಮಟ್ಟ ಪರೀಕ್ಷಿಸಿ, ಖರೀದಿಸಿ

ಗುಂಡ್ಲುಪೇಟೆ :–ಪ್ರತಿಯೊಬ್ಬರೂ ಒಂದಲ್ಲಾ ಒಂದು ರೀತಿಯಲ್ಲಿ ಗ್ರಾಹಕರಾಗಿರುತ್ತಾರೆ ದೈನಂದಿನ ವಸ್ತುಗಳು ಸೇರಿದಂತೆ ಮತ್ತಿತರ ಸೇವೆಯನ್ನು ಪಡೆಯುವಾಗ ವಸ್ತುಗಳ ಗುಣಮಟ್ಟ ಪರೀಕ್ಷಿಸಿ. ಎಚ್ಚರಿಕೆಯಿಂದ ಖರೀದಿಸಬೇಕು ಎಂದು ನ್ಯಾಯಧೀಶರಾದ ಎಂ ಟಿ ದೀಪು ಸಲಹೆ ನೀಡಿದರು

ಪಟ್ಟಣದ ತಾಲೂಕು ಕಚೇರಿ ಸಭಾಂಗಣದಲ್ಲಿ ತಾಲೂಕು ಅಡಳಿತ. ತಾಲೂಕು ಕಾನೂನು ಸೇವಗಳ ಸಮಿತಿ.ವಕೀಲರ ಸಂಘ. ಪೋಲಿಸ್ ಇಲಾಖೆ.ಅಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರ ಇಲಾಖೆಯ ಸಹಯೋಗದಲ್ಲಿ ವಿಶ್ವ ಗ್ರಾಹಕರ ದಿನದ ಅಂಗವಾಗಿ ನಡೆದ ಕಾನೂನು ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು ನಾವೆಲ್ಲ ಒಂದಲ್ಲ ಒಂದು ವಸ್ತುವನ್ನು ಖರೀದಿಸುವ ಮೂಲಕ ಗ್ರಾಹಕರಾಗಿದ್ದೇವೆ ಗ್ರಾಹಕರು ಯಾವುದೇ ವಸ್ತು, ಸರಕುಗಳನ್ನು ಖರೀದಿಸುವ ಸಂದರ್ಭದಲ್ಲಿ ಆ ವಸ್ತುವಿನ ಗುಣಮಟ್ಟ, ಅವಧಿ ಮುಂತಾಗಿ ಪರಿಶೀಲಿಸಿ ಕಡ್ಡಾಯವಾಗಿ ರಸೀದಿ ಪಡೆದುಕೊಳ್ಳಬೇಕು ಖರೀದಿಸಿದ ವಸ್ತುವಿನ ಗುಣಮಟ್ಟ ಕಳಪೆ ಮತ್ತು ದೋಷಪೂರಿತವಾಗಿದ್ದಲ್ಲಿ ಗ್ರಾಹಕರು ರಶೀದಿಯೊಂದಿಗೆ ಗ್ರಾಹಕರ ಆಯೋಗಕ್ಕೆ ದೂರು ಸಲ್ಲಿಸಿದರೆ ಗ್ರಾಹಕರಿಗೆ ಕಾನೂನಿ



ನಡಿ ಸೂಕ್ತ ಪರಿಹಾರ ಒದಗಿಸಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಮಾರುಕಟ್ಟೆಯಲ್ಲಿನ ಶೋಷಣೆ ದೋಷಪೂರಿತ ಸರಕಗಳು ಮತ್ತು ಅನೈತಿಕ ವ್ಯಾಪಾರ ಪದ್ದತಿಗಳಿಂದ ಗ್ರಾಹಕರ ಹಿತಾಸಕ್ತಿಗಳನ್ನು ಕಾಯುವ ಪ್ರಕ್ರಿಯೆಯಾಗಿದೆ ಭಾರತದಲ್ಲಿ 1986ರ ಹಕ್ಕು ರಕ್ಷಣಾ ಕಾಯಿದೆ ಗ್ರಾಹಕರಿಗೆ ಹಕ್ಕು ಗಳನ್ನು ಒದಗಿಸಿ ಜಿಲ್ಲಾ ಮತ್ತು ರಾಜ್ಯ ರಾಷ್ಟ್ರ ಮಟ್ಟದಲ್ಲಿ ದೂರು ಪರಿಹಾರ ವೇದಿಕೆಗಳ ಮೂಲಕ ಶೀಘ್ರ ನ್ಯಾಯ ಒದಗಿಸುತ್ತದೆ ಎಂದರು ಈ ಸಂದರ್ಭದಲ್ಲಿ ತಹಸೀಲ್ದಾರ್ ಎಂ ಎಸ್ ತನ್ಮಯ್ ತಾ. ಪಂ ಇಓ ಷಣ್ಮುಗಂ ತಾಲೂಕಿನ ವಕೀಲರ ಸಂಘದ ಅಧ್ಯಕ್ಷ ಟಿ ಎಸ್ ವೆಂಕಟೇಶ್.ಕಾರ್ಯದರ್ಶಿ ಜವರಾಜ್. ವಕೀಲ ಮಧುಸೂದನ್.ಆರವಿಂದ್ ಸೇರಿದಂತೆ ಇತರರರಿದ್ದರು

## ಮಹಿಳೆಯರು ಸಂಘಟಿತರಾದಾಗ ಮುಖ್ಯವಾಹಿನಿಗೆ ಬರಲು ಸಾಧ್ಯ




ಚಾಮರಾಜನಗರ: ಮಹಿಳೆಯರು ಸಂಘಟಿತರಾಗಿ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಂಡು ಮುಖ್ಯವಾಹಿನಿ ಬನ್ನಿ, ತಮ್ಮಲ್ಲಿರುವ ಕೀಳಿಮೆಯನ್ನು ಬಿಟ್ಟರೆ ಸಾಧನೆ ಮಾಡಲು ಸಾಧ್ಯವಾಗುತ್ತದೆ ಎಂದು ಎಂದು ಜೆಎಸ್ಎಸ್ ಅಸ್ಪತ್ರೆಯ ಪ್ರಸೂತಿ ತಜ್ಞೆ ಡಾ. ಚಂದ್ರಿಕಾ ತಿಳಿಸಿದರು.

ನಗರದ ಮಹಾಮನೆಯಲ್ಲಿ ಕದಳಿ ಮಹಿಳಾ ವೇದಿಕೆಯ ಹಾಗೂ ಜಿಲ್ಲಾ ಶರಣ ಸಾಹಿತ್ಯಪರಿಷತ್ ಸಹಯೋಗದಲ್ಲಿ ನಡೆದ ವಿಶ್ವ ಮಹಿಳಾ ದಿನಾಚರಣೆ ದತ್ತಿ ಉಪನ್ಯಾಸ ಕಾರ್ಯಕ್ರಮ ಹಾಗೂ ಶರಣರ ವಿವಿಧ ವೇಷಭೂಷಣ ಪ್ರರ್ದಶನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಮಹಿಳೆಯರು ಇಂದು ಎಲ್ಲಾ ರಂಗದಲ್ಲಿಯೂ ಸಹ ತಮ್ಮದೇ ಅಧ ಛಾಪು ಮೂಡಿಸಿಕೊಂಡು ಮುನ್ನಡೆಯುತ್ತಿದ್ದಾರೆ. ವಿಶ್ವ ಮಹಿಳೆ ದಿನಾಚರಣೆಯು ಮಾ. 8 ಆಗಿದ್ದು, ಈ ದಿನವನ್ನು ಮಹಿಳೆಯರು ವಿಶೇಷವಾಗಿ ಆಚರಣೆ ಮಾಡುವ ಜೊತೆಗೆ ಪ್ರಗತಿಯತ್ತ ಸಾಗಬೇಕು. ಯಾವುದೇ ಕ್ಷೇತ್ರವಾದರು ಅಲ್ಲಿ ಶ್ರದ್ದೆಯಿಂದ ಕೆಲಸ ಮಾಡಿದರೆ, ಯಶಸ್ಸು ನಮ್ಮದಾಗುತ್ತದೆ. ನಮ್ಮ ತಂದೆ ನನ್ನನ್ನು ವೈದ್ಯಕೀಯ ಶಿಕ್ಷಣ ಕೊಡಿಸಿ, ವ್ಯಾಸಂಗ ಮಾಡಿಸಿದ ಫಲವಾಗಿ ನಾನು ಇಂದು ಸ್ತ್ರೀರೋಗ ತಜ್ಞೆಯಾಗಿದ್ದೇನೆ. ನಮ್ಮ ಯಶಸ್ಸಿನಿಂದ ತಂದೆ,ತಾಯಿ ಇರುತ್ತಾರೆ. ಅವರ ನಿರಂತರ ಪರಿಶ್ರಮ ಮತ್ತು ಪ್ರೋತ್ಸಾಹ ನಮ್ಮೆಲ್ಲರಿಗೂ ದಾರಿದೀಪವಾಗಿದೆ.ಬಸವವಾದಿ ಶರಣರು 12ನೇ ಶತಮಾನದಲ್ಲೇ ಸಮಾನತೆಯನ್ನು ಸಾರಿದರು. ಅವರ ನೀಡಿದ ಪ್ರೋತ್ಸಾಹ ಇಂದು ನಾವೆಲ್ಲರು ಒಂದೆಡೆ ಸೇರಲು ಸಾಧ್ಯವಾಗಿದೆ. ಅಂಥ ಶರಣರ ಪರಂಪರೆಯನ್ನು ಎಲ್ಲರು ಉಳಿಸಿಬೆಳೆಸೋಣ ಎಂದರು.

ಮತ್ತೋರ್ವ ಬಸವರಾಜೇಂದ್ರ ಅಸ್ಪತ್ರೆಯ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆಯಾದ ಡಾ. ಶ್ವೇತಾ ಶಶಿಧರ್ ಅವರು ಉಪನ್ಯಾಸ ನೀಡಿ, ಮಹಿಳೆಯರು ಮೊದಲು ನಮ್ಮಲ್ಲಿರುವ ಕೀಳರಿಮೆಯನ್ನು ಬಿಟ್ಟು, ಸಮಾಜದ ಮುಖ್ಯವಾಹಿನಿ ಬರಬೇಕು. ಹೆಣ್ಣು ಹುಟ್ಟಿತ್ತಲ್ಲ ಎಂದು ತಾತ್ಸಾರ ಮಾಡುವವಳು ಸಹ ಹೆಣ್ಣೆ. ಇಂಥ ಮನಸ್ಥಿತಿಯನ್ನು ತಾಯಿ, ಅತ್ತೆ ಯಾದರು ಬಿಡಬೇಕು. ಹೆಣ್ಣೊಂದು ಕಲಿತರೇ ಶಾಲೆಯೊಂದು ತೆರೆದಂತೆ ಹೀಗಾಗಿ ಮಹಿಳೆಯರು ಇಂದು ಆಕಾಶಯಾನ ಮಾಡಿ ಬಂದಿದ್ದಾರೆ. ವಿಶ್ವ ಮಟ್ಟದಲ್ಲಿ ಸಾಧನೆ ಮಾಡಿದ್ದಾರೆ. ಹೀಗಾಗಿ ಮಹಿಳೆಯರು ಪ್ರಗತಿಯಲ್ಲಿ ಮಹಿಳೆಯರು ಸಹ ಸಹಕಾರ ನೀಡಬೇಕು. ಹೆಣ್ಣು ಭ್ರೂಣ ಹತ್ಯೆಗೆ ನಿಲ್ಲಬೇಕು. ಪುರುಷರನ್ನು ದ್ವೇಷ ಮಾಡುವುದಲ್ಲ. ಅವರಿಗೆ ಅಂಥ ಮನಸ್ಥಿತಿಯನ್ನು ತುಂಬುವವರ ಯಾರು. ಹೀಗಾಗಿ ಪ್ರತಿಯೊಬ್ಬರು ಹೆಣ ?ಣನ ಬಗ್ಗೆ ಸಹನೆ ತೋರುವುದು ಬೇಡ. ಅವಳಿಗೆ ಅವಕಾಶ ನೀಡಿ, ಗೆದ್ದು ಬರುವ ಶಕ್ತಿ ಸಾಮರ್ಥ ಇದೆ ಎಂದರು.

ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ.ಕೆ. ರವಿಕುಮಾರ್ ಮಾತನಾಡಿ, ವಿಶ್ವ ಮಹಿಳಾ ದಿನಾಚರಣೆಯನ್ನು ಕದಳಿ ಮಹಿಳಾ ವೇದಿಕೆಯವರು ಬಹಳ ಅರ್ಥಪೂರ್ಣವಾಗಿ ಆಚರಣೆ ಮಾಡಿದ್ದಾರೆ. ಶರಣ ಸಾಹಿತ್ಯ ಪರಿಷತ್ ದತ್ತಿ ಕಾರ್ಯಕ್ರಮಗಳನ್ನು ಆಯೋಜನೆ ಮಾಡಿ, ಶರಣರ ವಿಚಾರಧಾರೆಗಳನ್ನು ತಿಳಿಸುವ ಪ್ರಯತ್ನ ಮಾಡುತ್ತಿದೆ. ಕುಮಾರಸ್ವಾಮಿ ಅವರು ತಮ್ಮ ತಂದೆ ಗುರುಮಲ್ಲಪ್ಪ ಅವರ ಹೆಸರಿನಲ್ಲಿ ದತ್ತಿ, ಹಾಗೂ ರತ್ನಮ್ಮ ಬಸವರಾಜು ಅವರು ಮಹದೇವಮ್ಮ ರುದ್ರಪ್ಪ ಅವರ ಹೆಸರಿನಲ್ಲಿ ದತ್ತಿ ಸ್ಥಾಪಿಸಿದ ಕಾರ್ಯಕ್ರಮ ಇದಾಗಿದ್ದು, ಶರಣರ ವಿಚಾರವನ್ನು ತಿಳಿದುಕೊಳ್ಳುವ ಜೊತೆಗೆ ಅನುಭವ ಮಂಟಪದಲ್ಲಿ ಎಲ್ಲ ವರ್ಗದವರು ಹಾಗು ಮಹಿಳೆಯರಿಗೆ ವಿಶೇಷ ಸ್ಥಾನವನ್ನು ನಮ್ಮ ಶರಣರು ನೀಡಿದ್ದರು. ಇಂಥ ಸಂಸ್ಕೃತಿ ಪರಂಪರೆಯನ್ನು ಎಲ್ಲರು ಮುಂದುವರಿಸಿಕೊಂಡು ಹೋಗೋಣ ಎಂದರು.

ಕಾರ್ಯಕ್ರಮದಲ್ಲಿ ಅಧ್ಯಕ್ಷತೆಯನ್ನು ಕದಳಿ ಮಹಿಳಾ ವೇದಿಕೆಯ ಅಧ್ಯಕ್ಷೆ ವಸಂತಮ್ಮ ವಹಿಸಿದ್ದರು. ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ದಿ ಸಂಘದ ಅಧ್ಯಕ್ಷ ಸಿದ್ದಮಲ್ಲಪ್ಪ, ದತ್ತಿ ದಾನಿಗಳಾದ ರತ್ನಮ್ಮ ಬಸವರಾಜು, ವಿಜಯಾಂಬ ಕುಮಾರಸ್ವಾಮಿ, ಪಾರ್ವತಿ ಬಳಗದ ಅಧ್ಯಕ್ಷೆ ಆಶಾ, ಕದಳಿ ಮಹಿಳಾ ವೇದಿಕೆಯ ಕಾರ್ಯದರ್ಶಿ ಅನ್ನಪೂರ್ಣ ಪದಾಧಿಕಾರಿಗಳು, ಸದಸ್ಯರು ಮೊದಲಾದವರು ಇದ್ದರು. ಅನುಭವ ಮಂಪಟದಲ್ಲಿರುವ ಶರಣರ ವೇಷಭೂಷಣಗಳನ್ನು ಧರಿಸಿ, ಅವರ ವಚನಗಳನ್ನು ಹೇಳುವ ಮೂಲಕ ಕದಳಿ ಮಹಿಳಾ ವೇದಿಕೆಯ ಪದಾಧಿಕಾರಿಗಳು ಶರಣರ ವೇಷಗಳನ್ನು ಧರಿಸಿ ಗಮನ ಸೆಳೆದರು. ಮಹಿಳಾ ದಿನಾಚರಣೆ ಅಂಗವಾಗಿ ನಡೆದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಪ್ರಶಸ್ತಿಯನ್ನು ವಿತರಣೆ ಮಾಡಲಾಯಿತು.

# ತುಟ್ಟಿಭತ್ಯೆ ನಿಲ್ಲಿಸುವುದನ್ನು ಖಂಡಿಸಿ ಮೌನ ಪ್ರತಿಭಟನೆ

## ಎಡಿಸಿ ಮುಖಾಂತರ ಪಿಎಂಗೆ ಮನವಿ ಸಲ್ಲಿಕೆ

ಚಾಮರಾಜನಗರ: ಕೇಂದ್ರ ಸರ್ಕಾರದ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು

ನಿವೃತ್ತ ನೌಕರರಿಗೆ ಹಾಗೂ ಕುಟುಂಬ ಪಿಂಚಣಿದಾರರಿಗೆ ಸಂಬಂಧಪಟ್ಟಂತೆ, ಮುಂದಿನ ದಿನಗಳಲ್ಲಿ ನಿವೃತ್ತಿ ವೇತನ ಮತ್ತು ಕುಟುಂಬ ಪಿಂಚಣಿಯನ್ನು ಪರಿಷ್ಕರಣೆ ಮಾಡಲು ಹಾಗೂ ವಾರ್ಷಿಕವಾಗಿ ನೀಡುತ್ತಿದ್ದ ತುಟ್ಟಿ ಭತ್ಯೆಯನ್ನು ನೀಡಲು ಸಾಧ್ಯವಾಗುವುದಿಲ್ಲ ಎಂದು ನೀಡಿರುವ ಹೇಳಿಕೆಯನ್ನು ಖಂಡಿಸಿ ಕರ್ನಾಟಕ ರಾಜ್ಯ ನಿವೃತ್ತ ಸರ್ಕಾರಿ ನೌಕರರ ಸಂಘದ ಜಿಲ್ಲಾ ಶಾಖೆಯ ಪದಾಧಿಕಾರಿಗಳು, ಸದಸ್ಯರು ಕಪ್ಪು ಪಟ್ಟಿ ಧರಿಸಿ ಮೌನ ಪ್ರತಿಭಟನೆ ನಡೆಸಿದರು.

ನಗರದ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿ ಸಂಘದ ಜಿಲ್ಲಾಧ್ಯಕ್ಷ ಎನ್.ನಾಗೇಶ್ ಅವರ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾನಿರತರು ತೋಳಿಗೆ ಕಪ್ಪು ಪಟ್ಟಿಧರಿಸಿ ಮೌನಪ್ರತಿಭಟನೆ ನಡೆಸಿದರು. ಪ್ರತಿಭಟನೆಯಲ್ಲಿ ಜಿಲ್ಲಾ ಉಪಾಧ್ಯಕ್ಷರಾದ ಹೊನ್ನೂರಯ್ಯ, ಎಲ್.ದೇವಣ್ಣ, ಜಂಟಿ ಕಾರ್ಯದರ್ಶಿ ಜಿ.ರಾಘವೇಂದ್ರ, ಸಂಘಟನಾ ಕಾರ್ಯದರ್ಶಿ ಎ.ಸಿದ್ದಯ್ಯ, ಲೆಕ್ಕ ಪರಿಶೋಧಕ ಬಿ.ರಾಮು, ನಿರ್ದೇಶಕರರಾದ ಹೆಚ್.ಬಿ.ಕೃಷ್ಣ ನಾಯಕ, ಶ್ರೀಕಂಠಸ್ವಾಮಿ, ರಾಜ್ ಗೋಪಾಲ್, ಎಂ.ಬಿ.ಕೃಷ್ಣಮೂರ್ತಿ, ಕೆ.ಸಿ.ಮರಿಸ್ವಾಮಿ, ಕೆ.ಸೋಮಣ್ಣ, ಎನ್. ಸುಬ್ರಹ್ಮಣ್ಯ, ನಟರಾಜು, ಎ.ಸುಂದರ್, ಎ.ಪಿ.ಚಂದ್ರಶೇಖರ್, ಎ.ಎನ್.ಪದ್ಮಾಕ್ಷಿ, ಭಾಗ್ಯಲಕ್ಷ್ಮೀ, ಟಿ.ಬಸವರಾಜು, ರಾಘವೇಂದ್ರ, ಶಿವಣ್ಣ, ಸಿ.ಎನ್.ಕೃಷ್ಣಮೂರ್ತಿ, ಅರ್.ಎನ್.ಸುಂದರ್, ಶ್ರೀನಿವಾಸ, ಎಸ್.ಐ ಸಿದ್ದರಾಜು, ಪಿ.ಪುಟ್ಟಸ್ವಾಮಿ ಭಾಗವಹಿಸಿದ್ದರು.



### ಕಪ್ಪುಬಟ್ಟೆ ಧರಿಸಿ ಸಂಕೇತಿಕವಾಗಿ ಪ್ರತಿಭಟನೆ

ಪ್ರತಿಭಟನೆ ನೇತೃತ್ವ ವಹಿಸಿದ್ದ ಸಂಘದ ಜಿಲ್ಲಾಧ್ಯಕ್ಷ ಎನ್.ನಾಗೇಶ್ ಮಾತನಾಡಿ, ಕೇಂದ್ರ ಸರ್ಕಾರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ನಿವೃತ್ತ ನೌಕರರಿಗೆ ಹಾಗೂ ಕುಟುಂಬ ಪಿಂಚಣಿದಾರರಿಗೆ ಸಂಬಂಧಪಟ್ಟಂತೆ, ಮುಂದಿನ ದಿನಗಳಲ್ಲಿ ನಿವೃತ್ತಿ ವೇತನ ಮತ್ತು ಕುಟುಂಬ ಪಿಂಚಣಿಯನ್ನು ಪರಿಷ್ಕರಣೆ ಮಾಡಲು ಹಾಗೂ ವಾರ್ಷಿಕವಾಗಿ ನೀಡುತ್ತಿದ್ದ ತುಟ್ಟಿ ಭತ್ಯೆಯನ್ನು ನೀಡಲು ಸಾಧ್ಯವಾಗುವುದಿಲ್ಲ ಎಂದು ನೀಡಿರುವ ಹೇಳಿಕೆ ಖಂಡಿಸಿ ನಮ್ಮ ಸಂಘದ ಪದಾಧಿಕಾರಿಗಳು, ಸದಸ್ಯರು ಕಪ್ಪು ಬಟ್ಟೆ"ಯನ್ನು ಧರಿಸಿ ಸಂಕೇತಿಕವಾಗಿ ಪ್ರತಿಭಟನೆ ನಡೆಸಿ, ನರೇಂದ್ರ ಮೋದಿಯವರಿಗೆ ಜಿಲ್ಲಾಧಿಕಾರಿಗಳ ಮುಖಾಂತರ ಮನವಿ ಸಲ್ಲಿಸಲಾಗುತ್ತದೆ ಎಂದರು.
ಕೇಂದ್ರ ಸರ್ಕಾರ ನಿವೃತ್ತ ನೌಕರಿಗೆ ಜನವರಿ, ಜುಲೈ ತಿಂಗಳಲ್ಲಿ ಆರು ತಿಂಗಳಿಗೊಮ್ಮೆ ವರ್ಷಕ್ಕೆ 2 ಬಾರಿ ತುಟ್ಟಿಭತ್ಯೆ ನೀಡುತ್ತಿದ್ದು ಈಗ ಕೊಡಲು ಸಾಧ್ಯವಾಗುತ್ತಿಲ್ಲ ಎಂದು ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿಕೆ ನೀಡುವುದು ಸರಿಯಲ್ಲ ನಿವೃತ್ತ ನೌಕರರ ಇಳಿ ವಯಸ್ಸಿನಲ್ಲಿ ತುಟ್ಟಿ ಭತ್ಯೆಗಳ ಅವಶ್ಯಕತೆ ಇರುತ್ತದೆ.ಆಗಾಗಿ ಕೇಂದ್ರ ಸರ್ಕಾರ ಯಾವುದೇ ಕಾರಣಕ್ಕೂ ತುಟ್ಟಿಭತ್ಯ ನಿಲ್ಲಿಸದೇ ಮುಂದುವರಿಸಿ, ನಿವೃತ್ತ ನೌಕರರ ಹಿತ ಕಾಯಬೇಕು ಎಂದು ಒತ್ತಾಯಿಸಿದರು.

## ಹೊಸಕೋಟೆ ಗ್ರಾಮದಲ್ಲಿ ಸ್ಮಶಾನಕ್ಕಾಗಿ ಮನವಿ

ಮೈಸೂರು: ತಾಲೂಕಿನ ಇಲವಾಲ ಹೋಬಳಿಯ ಗುಂಗ್ರಾಲ್ ಛತ್ರ ಗ್ರಾಪಂ ವ್ಯಾಪ್ತಿಯಲ್ಲಿರುವ ಹೊಸಕೋಟೆ ಗ್ರಾಮಸ್ಥರಿಗೆ, ಸ್ಮಶಾನದ ಸಮಸ್ಯೆ ಇರುವುದರಿಂದ ತಹಶೀಲ್ದಾರ್ ಕಾರ್ಯಾಲಯ ಹಾಗೂ ಇಲವಾಲ ನಾಡಕಚೇರಿಯಲ್ಲಿ ಅಂತ್ಯ ಸಂಸ್ಕಾರ ಮಾಡಲು ಅನುಕೂಲ ಮಾಡಿಕೊಡಬೇಕು ಎಂದು ಸಾಮಾಜಿಕ ಹೋರಾಟಗಾರ ರವಿಕುಮಾರ್ ಶಾಸಕ ಜಿ.ಟಿ.ದೇವೇಗೌಡ, ಡಿಸಿ, ತಹಶೀಲ್ದಾರ್‌ರಿಗೆ ಮನವಿ ಮಾಡಿದರು.

26 ವರ್ಷಗಳ ಹಿಂದೆ ಕಲ್ಲೂರು ನಾಗನಹಳ್ಳಿ ಗ್ರಾಮದಲ್ಲಿ 2 ಎಕರೆ ಸರಕಾರಿ ಜಮೀನಿನನ್ನು ಸ್ಮಶಾನಕ್ಕೆ ಸರಕಾರದಿಂದ ಮಂಜೂರು ಮಾಡಿರುವ ಬಗ್ಗೆ ಆರ್‌ಟಿಸಿಯಲ್ಲಿ ದಾಖಲಾಗಿದೆ. ಆದರೆ, ಈ ಸ್ಮಶಾನದ ಜಮೀನಿಗೆಎ ಸರಿಯಾಗಿ ಗುರುತು ಇಲ್ಲದೆ ಗ್ರಾಮಸ್ಥರು, ಶವಸಂಸ್ಕಾರಗಳನ್ನು ಮಾಡಲು ಗ್ರಾಮದಲ್ಲಿ ತೊಂದರೆಯಾಗುತ್ತಿದೆ. ಜಮೀನಿನ್ನು ಗುರುತಿಸಿ ಹದ್ದುಬಸ್ತು ಮಾಡಿಕೊಡಲು,ತಾವು ಹಾಗೂ ಗ್ರಾಮಸ್ಥರು ಜಿಲ್ಲಾಧಿಕಾರಿ ಹಾಗೂ ತಹಶೀಲ್ದಾರ್‌ರಿಗೆ ಪತ್ರದ ಮೂಲಕ ಮನವಿ ಮಾಡಿದರೂ,ಯಾವುದೇ ಪ್ರಯೋಜನವಾಗಿಲ್ಲವೆಂದು ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು. ಹೊಸಕೋಟೆ ಗ್ರಾಮಸ್ಥರು ,ಶಾಸಕ ಜಿ.ಟಿ.ದೇವೇಗೌಡ ,ಮೈಸೂರು ತಹಶೀಲ್ದಾರ್, ಜಿಲ್ಲಾಧಿಕಾರಿಗಳಿಗೆ ಅರ್ಜಿ ನೀಡಿ 1 ವರ್ಷ, 6 ತಿಂಗಳು ಕಳೆದಿದ್ದರೂ, ಸ್ಮಶಾನದ ಜಮೀನಿನನ್ನು ಗುರುತಿಸಿ, ಹದ್ದುಬಸ್ತು ಮಾಡಿಸಿ ಗ್ರಾಮಸ್ಥರ ಉಪಯೋಗಕ್ಕೆ ಅನುಕೂಲ ಮಾಡಿಕೊಟ್ಟಿಲ್ಲವೆಂದು ದೂರಿದರು. ಗ್ರಾಮಸ್ಥರಿಗೆ ಅನುಕೂಲ ಮಾಡಿಕೊಡಲು ವಿಳಂಬವಾಗುತ್ತಿರುವುದರಿಂದ, ಗ್ರಾಮದಲ್ಲಿ ಯಾರಾದರೂ ಮರಣ ಹೊಂದಿದರೆ, ಮೈಸೂರು ತಹಶೀಲ್ದಾರ್ ಕಾರ್ಯಾಲಯ, ಇಲವಾಲ ನಾಡಕಚೇರಿಯ ಆವರಣದಲ್ಲಿ ಶವಸಂಸ್ಕಾರ ಮಾಡಲು ಅನುಮತಿ ನೀಡಬೇಕು ಎಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಗ್ರಾಪಂ ಮಾಜಿ ಉಪಾಧ್ಯಕ್ಷ ಮಾದೇಗೌಡ, ಗ್ರಾಮಸ್ಥರಾದ ರಾಜಣ್ಣಘಿ, ಕೃಷ್ಣೇಗೌಡ ಇದ್ದರು.




## ಮಹಿಳೆಯರು ಸ್ವಾವಲಂಬಿ ಆಗಲಿ

**ಗೋಣಿಕೊಪ್ಪ:** ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗಡೆ ಹಾಗೂ ಹೇಮಾವತಿ ವೀರೇಂದ್ರ ಹೆಗಡೆ ಅವರ ಮಾರ್ಗದರ್ಶನದಲ್ಲಿ ಜ್ಞಾನವಿಕಾಸ ಕಾರ್ಯಕ್ರಮದ ಸೃಜನಶೀಲ ಕಾರ್ಯಕ್ರಮದಡಿಯಲ್ಲಿ ಗೋಣಿಕೊಪ್ಪ ಗ್ರಾಮ ಪಂಚಾಯಿತಿ ಸಭಾಂಗಣದಲ್ಲಿ ಒಂದು ತಿಂಗಳಿನಿಂದ ನಡೆದ ತರಬೇತಿ ಕಾರ್ಯಕ್ರಮದ ಸಮಾರೋಪ ನಡೆಯಿತು.

ಒಂದು ತಿಂಗಳಿನಿಂದ ಮಹಿಳೆಯರಿಗೆ ಸೀರೆ ಕುಚ್ಚು ಕಟ್ಟುವ, ಸೀರೆ ಫೋಲ್ಡಿಂಗ್ ಹಾಗೂ ಮಧುಮಗಳಿಗೆ ಸಿಂಗಾರ ಮಾಡುವುದು ಸೇರಿದಂತೆ ವಿವಿಧ ವಿಶೇಷ ತರಬೇತಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಗ್ರಾಮ ಪಂಚಾಯಿತಿ ಉಪಾಧ್ಯಕ್ಷೆ ಮಂಜುಳಾ ಮಾತನಾಡಿದರು. ಗೋಣಿಕೊಪ್ಪ ಗ್ರಾಮ ಪಂಚಾಯಿತಿ ಅಧ್ಯಕ್ಷ ಪ್ರಮೋದ್ ಗಣಪತಿ ಮಾತನಾಡಿದರು. ಲೀಲಾವತಿ, ಮುಖ್ಯ ತರಬೇತಿದಾರೆ ರಶ್ಮಿ, ಮಂಜುಳಾ, ಕ್ಷೇತ್ರದ ಸಮನ್ವಯ ಅಧಿಕಾರಿ ಉಷಾರಾಣಿ ಹಾಗೂ ಯೋಜನೆಯ ಲೆಕ್ಕಪರಿಶೋಧಕ ಸಂತೋಷ್ ನಾಯಕ್, ಸೇವಾ ಪ್ರತಿನಿಧಿ ವಿಮಲ, ಹಾಜರಿದ್ದರು.



# ನೀರು ಸದ್ಬಳಕೆ ಬಗ್ಗೆ ಜಾಗೃತಿ ಮೂಡಿಸಬೇಕು

ಚಾಮರಾಜನಗರ, 1993 ರಿಂದ ವಿಶ್ವ ಸಂಸ್ಥೆ ಪ್ರಪಂಚದ ಎಲ್ಲಾ ದೇಶಗಳಲ್ಲೂ ನೀರಿನ ಜಾಗೃತಿ, ಶುದ್ಧ ನೀರು ನೈರ್ಮಲ್ಯ ಹಾಗೂ ಸುಸ್ಥಿರ ಅಭಿವೃದ್ಧಿಗಾಗಿ ಪ್ರತಿ ವರ್ಷ ಒದೊಂದು ಪರಿಕಲ್ಪನೆಯ ಮಾಲಕ ಜನರಲ್ಲಿ ಜಾಗೃತಗೊಳಿಸುವ ಕಾರ್ಯ ನಡೆಯುತ್ತಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಅಧ್ಯಕ್ಷ ಸುರೇಶ್ ಎನ್.ಋಗ್ವೇದಿ ತಿಳಿಸಿದರು.

ಅವರು ಜೈಹಿಂದ್ ಪ್ರತಿಷ್ಠಾನ.ಹಾಗೂ ಋಗ್ವೇದಿ ಯೂತ್ ಕ್ಲಬ್ ಹರದನಹಳ್ಳಿ ಕಲ್ಯಾಣಿಯಲ್ಲಿ ಹಮ್ಮಿಕೊಂಡಿದ್ದ ವಿಶ್ವ ಜಲ ದಿನ ಕಾರ್ಯಕ್ರಮದಲ್ಲಿ ಮಾತನಾಡಿ ಭಾರತೀಯ ಸಂಸ್ಕೃತಿ ಪುರಾಣಗಳಲ್ಲಿ ಅಪಾರವಾದ ಮಹತ್ವವನ್ನು ನೀರಿಗೆ ನೀಡಲಾಗಿದೆ .ನೀರನ್ನು ಜೀವಧಾರೆ ತಾಯಿ ಎಂದು ಕರೆಯಲಾಗಿದೆ .ಶಿವ ಪುರಾಣ,ಮತ್ಸ್ಯ ಪುರಾಣ ರಾಮಾಯಣ ಮಾಭಾರತ ಹಾಗೂ ವೇದವ್ಯಾಸರು ನೀರನ್ನು ತ್ಯಾಗದ ಸಂಕೇತ ಎಂದಿದ್ದಾರೆ ಎಂದರು.

ಪ್ರತಿ ಕಾರ್ಯದ ಮೊದಲು ಶುದ್ಧೀಕರಣದ ಮೂಲಕ ಕಳಶ ಪೂಜೆಯನ್ನು ಮಾಡಿ ಪ್ರತಿ ಮನೆಯಲ್ಲಿ ಕಳಶ ಪ್ರತಿಷ್ಠಾಪನೆಯ ಮೂಲಕ ಗಂಗೆಯನ್ನು ಸಂರಕ್ಷಿಸುವ , ಮಹತ್ವ ಸಾರುವ ಜವಾಬ್ದಾರಿ ರೂಢಿಗೆ ಬಂದಿದೆ. ಭಾರತೀಯ ಎಲ್ಲಾ ನದಿಗಳ ಹೆಸರುಗಳು ತಾಯಿ ಸ್ವರೂಪದಲ್ಲಿದ್ದು ಎಲ್ಲ ನದಿಗಳ ಸಂರಕ್ಷಣೆ, ಕೊಳ, ಕಲ್ಯಾಣಿಗಳ ಅಭಿವೃದ್ಧಿ ಮಾಡಬೇಕಾಗಿದೆ ಎಂದರು.



ಗ್ರಾಮ ವಿಕಾಸ ಸಂಸ್ಥೆಯ ಸಂಯೋಜಕರಾದ ಚಂದ್ರ ಮೋಹನ್ ಕಟ್ಟೆಪುರ ಮಾತ ನಾಡಿ. ಹರದನಹಳ್ಳಿ ಐತಿಹಾಸಿಕ ಗ್ರಾಮ. ಇಲ್ಲಿನ ಕಲ್ಯಾಣಿ 2017ರಲ್ಲಿ ಬಹಳ ಶಿಥಿಲ ಗೊಂಡು ಬಳಸಲು ಯೋಗ್ಯವಾಗಿ ಇರಲಿಲ್ಲ. ಗ್ರಾಮಸ್ತರು, ಯುವಕರು, ಸರ್ಕಾರ ಗ್ರಾಮ ಪಂಚಾಯಿತಿ ಇಂದು ಪುನರ್ನಿರ್ಮಾಣ ಮಾಡಿ ರಾಜ್ಯಕ್ಕೆ ಆದರ್ಶವಾಗಿದೆ. ಕಲ್ಯಾಣಿ ಸಂಗ್ರಹಣೆಯಿಂದ ವಾತಾವರಣ ಬಹಳ ಅತ್ಯುತ್ತಮವಾಗಿದೆ ಎಂದರು.

ಹರದನಹಳ್ಳಿಯ ಸಮಾಜ ಗಿರೀಶ್ ಮಾತನಾಡಿ ಹರದನಹಳ್ಳಿಯ ಕಲ್ಯಾಣ ನಿರ್ಮಾಣದ ಹಿಂದೆ ಬಹಳಷ್ಟು ಜನರ ಸೇವೆ ಇದೆ. ಕಲ್ಯಾಣಿಯಲ್ಲಿ ದೇವರ ಕಾರ್ಯ, ತೆಪ್ಪೋತ್ಸವ ನಡೆಯುತ್ತಿದ್ದು ಜನರಿಗೆ ಆನಂದವನ್ನು ತಂದಿದೆ. ಕಲ್ಯಾಣಿಯಲ್ಲಿ ಯಡಿಯೂರು ಸಿದ್ದಲಿಂಗೇಶ್ವರರು ದೇವತಾ ಕಾರ್ಯಕ್ಕೆ ಜಲವನ್ನು ಬಳಸುತ್ತಿದ್ದರು ಎಂದು ನಂಬಿಕೆ ಇದೆ ಎಂದರು. ಹಸಿರುಪಡೆಯ ಡಾ.ಅಕ್ಷತಾ ಜೈನ್, ಸತೀಶ ಕುಮಾರ್, ಗ್ರಾಮ ವಿಕಾಸ ಸಂಸ್ಥೆಯ ಮಂಜುನಾಥ್, ವಿದ್ಯಾರ್ಥಿಗಳು ಭಾಗವಹಿಸಿದ್ದರು.

### ಬಾಬೂಜಿ ಪುತ್ಥಳಿ ನಿರ್ಮಾಣಕ್ಕೆ ಮುಖಂಡರ ಆಗ್ರಹ

# ಏ.5ರಂದು ಬಾಬೂಜಿ, ಏ.14ರಂದು ಅಂಬೇಡ್ಕರ್ ಜಯಂತಿ

ಚಾಮರಾಜನಗರ: ಏ.5 ರಂದು ಡಾ.ಬಾಬು ಜಗಜೀವನ್ ರಾಂ ಹಾಗೂ ಏ.14 ರಂದು ಡಾ.ಬಿ. ಆರ್.ಅಂಬೇಡ್ಕರ್ ಜಯಂತಿಯನ್ನು ಅದ್ದೂರಿಯಾಗಿ ಆಚರಣೆ ಮಾಡಲು ನಿರ್ಧರಿಸಲಾಯಿತು.

ನಗರದ ಜಿಲ್ಲಾಡಳಿತ ಭವನದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಡಾ.ಬಾಬು ಜಗಜೀವನ್‌ರಾಂ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಆಚರಣೆ ಸಂಬಂಧ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ನಿರ್ಧಾರ ಮಾಡಲಾಯಿತು. ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಮುನಿರಾಜು ಮಾತನಾಡಿ, ಇಬ್ಬರು ಮಹನೀಯರ ಜಯಂತಿ ಹಿನ್ನೆಲೆಯಲ್ಲಿ ವಿವಿಧ ಸಮಿತಿಗಳನ್ನು ರಚನೆ ಮಾಡಲಾಗಿದೆ. ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಿಂದ ಮಹನೀಯರ ಭಾವಚಿತ್ರವುಳ್ಳ ಮೆರವಣಿಗೆ ಪ್ರಾರಂಭಗೊಂಡು ದೊಡ್ಡಂಗಡಿ, ಚಿಕ್ಕಂಗಡಿ ಬೀದಿ, ಸಂತೇಮರಹಳ್ಳಿ ವೃತ್ತ, ಪಚ್ಚಪ್ಪ ವೃತ್ತದ ಮೂಲಕ ವೇದಿಕೆ ಕಾರ್ಯಕ್ರಮ ನಡೆಯುವ ಪೇಟೆ ಪ್ರೈಮರಿ ಶಾಲಾ ಆವರಣದಲ್ಲಿ ಮುಕ್ತಾಯಗೊಳ್ಳಲಿದೆ.



ಅಲ್ಲದೇ ಏ.13 ರಂದು ವಿಚಾರ ಸಂಕಿರಣ ಆಯೋಜಿಸಲಾಗುವುದು ಎಂದರು.

ಸಮಿತಿಗಳಲ್ಲಿ ಸಂಘ ಸಂಸ್ಥೆಗಳ ಮುಖಂಡರ ಹೆಸರುಗಳನ್ನು ಸೇರಿಸಿಕೊಳ್ಳಬೇಕು ಎಂದು ದಲಿತ ಮುಖಂಡರು ಆಗ್ರಹಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಶ್ರೀರೂಪ, ಈಗಾಗಲೇ 12 ಸಮಿತಿಗಳಿದ್ದು 12 ಜನರ ಹೆಸರುಗಳನ್ನು ಕೊಟ್ಟರೆ ಸಮಿತಿಗಳಿಗೆ ಸೇರಿಸಲು ಕ್ರಮವಹಿಸಲಾಗುವುದು ಎಂದರು.

ಮುಖಂಡ ಸಿ.ಎಂ.ಕೃಷ್ಣಮೂರ್ತಿ ಮಾತನಾಡಿ, ಜಯಂತಿಯಂದು ನಡೆಯುವ ಮೆರವಣಿಗೆ ಬೇಗ ಹೋಗಲು ಸಹಕರಿಸಬೇಕು. ಇದರಿಂದ ವೇದಿಕೆ ಕಾರ್ಯಕ್ರಮ ಬೇಗ ಶುರುವಾಗಿ ಜನರು ಮಹನೀಯರ ವಿಚಾರಧಾರೆಗಳನ್ನು ಕೇಳಲು ಅನುಕೂಲವಾಗುತ್ತದೆ ಎಂದು ಹೇಳಿದರು. ಜಿಲ್ಲಾಡಳಿತ ಭವನದ ಮುಂಭಾಗ ಬಾಬು ಜಗಜೀವನ್ ರಾಂ ಪ್ರತಿಮೆ ನಿರ್ಮಾಣ ಮಾಡಬೇಕು ಎಂದು ಮುಖಂಡರಾದ ಎಂ. ಶಿವಮೂರ್ತಿ, ಬಸವನಪುರ ರಾಜಶೇಖರ್, ಶಿವಕುಮಾರ್ ಆಗ್ರಹಿಸಿದರು. ಬಹುದಿನಗಳ ಬೇಡಿಕೆಯಾದ ಬಾಬೂಜಿ ಪ್ರತಿಮೆ ನಿರ್ಮಾಣ ಮಾಡಿಲ್ಲ. ಏ.5 ರೊಳಗೆ ಪ್ರತಿಮೆ ನಿರ್ಮಾಣಕ್ಕೆ ಜಿಲ್ಲಾಡಳಿತ ಭೂಮಿಪೂಜೆ ಮಾಡಲು ಕ್ರಮವಹಿಸಬೇಕು. ಇಲ್ಲದಿದ್ದರೆ ಜನಾಂಗದವರೇ ಚಂದಾ ವಸೂಲಿ ಮಾಡಿ ಭೂಮಿಪೂಜೆ ಮಾಡುತ್ತೇವೆ. ಜೊತೆಗೆ ಬಾಬೂಜಿ ಭವನ ಕೂಡ ನಿರ್ಮಾಣವಾಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಜಿಲ್ಲಾಧಿಕಾರಿ ಶ್ರೀರೂಪ ಪ್ರತಿಕ್ರಿಯಿಸಿ, ಪ್ರತಿಮೆ ನಿರ್ಮಾಣ ಸಂಬಂಧ ಜಾಗ ಗುರ್ತಿಸಿ ನಂತರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದರು. ಈಗಾಗಲೇ ಬಾಬೂಜಿ ಭವನ ನಿರ್ಮಾಣಕ್ಕೆ ಪಿಡಬ್ಲ್ಯೂಡಿಗೆ 3 ಕೋಟಿ ಜಮಾ ಮಾಡಲಾಗಿದ್ದು ಏ.5ರೊಳಗೆ ಕಾಮಗಾರಿ ಪ್ರಾರಂಭಿಸಲಾಗುವುದು ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಮುನಿರಾಜು ಹೇಳಿದರು.

ಸಭೆಯಲ್ಲಿ ಜಿಪಂ ಸಿಇಒ ಮೋನಾರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮುತ್ತುರಾಜು, ಜಿಪಂ ಉಪಕಾರ್ಯದರ್ಶಿ ಶೃತಿ, ಡಿವೈಎಸ್ಪಿ ಸ್ನೇಹರಾಜ್ ಸೇರಿದಂತೆ ದಲಿತ ಮುಖಂಡರು, ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಜರಿದ್ದರು.

## ಮಾ.28ಕ್ಕೆ ರಸಮಂಜರಿ ಕಾರ್ಯಕ್ರಮ

ಮೈಸೂರು: ಭಗವತಿ ಚಿತ್ಪಾವನ ಮಹಿಳಾ ಟ್ರಸ್ಟ್ ವತಿಯಿಂದ ಮಾ.28 ರ ಸಂಜೆ5 ರಿಂದ ರಾತ್ರಿ 8ರವರೆಗೆ ಕೃಷ್ಣಮೂರ್ತಿಪುರಂ ಬಿಎಸ್‌ಎಸ್ ವಿದ್ಯೋದಯ ಕಾಲೇಜಿನಲ್ಲಿ ರಸಮಂಜರಿ ಪ್ರಜ್ಞಾ ಮರಾಠೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಅಧ್ಯಕ್ಷರಾದ ವೀಣಾ ಘೋಂಗ್ರೆಸ್ ತಿಳಿಸಿದರು. ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಇದೊಂದು ವಿಶಿಷ್ಟ ಕಾರ್ಯಕ್ರಮವಾಗಿದ್ದು, ಇದಕ್ಕೂ ಮೊದಲು ಸಂಜೆ 5 ರಿಂದ 6 ರವರೆಗೆ ಸಭಾ ಕಾರ್ಯಕ್ರಮ ಇರಲಿದೆ. ಸಾರೆಗಾಮ ಪಾ ರಿಯಾಲಿಟಿ ಶೋನಲ್ಲಿ ಸಾಧನೆ ಮಾಡಿರುವವರು ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ಡಾ. ಸುಧಾ ಫಣೀಶ್, ಎಸ್.ಎ. ವೀಣಾ ಮುಖ್ಯ ಅತಿಥಿಗಳಾಗಿರುವವರೆಂದರು. ಮಧುರ ತಾಮನ್‌ಕರ್, ಸುಜಲಾ ಘೋರೆ, ದೀಪಾ ಹೆಬ್ಬಾಳು ಹಾಜರಿದ್ದರು.



# ರಾಜ್ಯಮಟ್ಟದ ಅಂತರ ವಿದ್ಯುತ್ ಕಂಪನಿಗಳ ಕ್ರೀಡಾಕೂಟಕ್ಕೆ ಚಾಲನೆ
# ಒತ್ತಡ ಶಮನಗೊಳಿಸಲು ಕ್ರೀಡೆ ಸಹಕಾರಿ

**ಮಂಡ್ಯ:** ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಕ್ರೀಡಾ ಸಂಸ್ಥೆ ಹಾಗೂ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಸೆಸ್ಕ್) ಮೈಸೂರು ವತಿಯಿಂದ 2025–26ನೇ ಸಾಲಿನ ರಾಜ್ಯಮಟ್ಟದ ಅಂತರ ವಿದ್ಯುತ್ ಕಂಪನಿಗಳ ಕ್ರೀಡಾಕೂಟಕ್ಕೆ ಬುಧವಾರ ಚಾಲನೆ ದೊರೆಯಿತು.




ಮಂಡ್ಯದ ಪಿಇಟಿ ಇಂಜಿನಿಯರಿಂಗ್ ಕಾಲೇಜು ಕ್ರೀಡಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಶಾಸಕರು ಹಾಗೂ ಸೆಸ್ಕ್ ಅಧ್ಯಕ್ಷರಾದ ಎ.ಬಿ. ರಮೇಶ್ ಬಂಡಿಸಿದ್ದೇಗೌಡ ಅವರು ಕ್ರೀಡಾಕೂಟವನ್ನು ಉದ್ಘಾಟಿಸಿದರು. ನಂತರ ಮಾತನಾಡಿದ ಅವರು, ಶಾಸಕರು ಹಾಗೂ ಸೆಸ್ಕ್ ಅಧ್ಯಕ್ಷರಾದ ಎ.ಬಿ.ರಮೇಶ್ ಮಾತನಾಡಿ, ವಿದ್ಯುತ್ ಕಂಪನಿಗಳಲ್ಲಿ ಕೆಲಸ ಮಾಡುವ ಸಿಬ್ಬಂದಿ ದಿನದ 24 ಗಂಟೆಗಳು ಬಿಡುವಿಲ್ಲದ ರೀತಿಯಲ್ಲಿ ಕೆಲಸ ಮಾಡುತ್ತಾರೆ. ಈ ನಿಟ್ಟಿನಲ್ಲಿ ಸಿಬ್ಬಂದಿಗೆ ಈ ರೀತಿಯ ಕ್ರೀಡಾಕೂಟಗಳನ್ನು ಆಯೋಜಿಸುವುದರಿಂದ ಅವರಲ್ಲಿನ ಒತ್ತಡ ಕಡಿಮೆಯಾಗಿ, ಸ್ವಲ್ಪಮಟ್ಟಿನ ಮನರಂಜನೆ ಸಿಗಲಿದೆ. ಆದ್ದರಿಂದ ಕ್ರೀಡಾಕೂಟದಲ್ಲಿ ಭಾಗವಹಿಸಿರುವ ಎಲ್ಲ ಆಟಗಾರರು ಅತ್ಯುತ್ಸಾಹದಿಂದ ಭಾಗವಹಿಸಿ ಎಂದು ಶುಭಹಾರೈಸಿದರು.

ಎರಡು ದಿನಗಳ ಕ್ರೀಡಾಕೂಟದಲ್ಲಿ ಸೆಸ್ಕ್, ಬೆಸ್ಕಾಂ, ಮೆಸ್ಕಾಂ, ಹೆಸ್ಕಾಂ ಹಾಗೂ ಜೆಸ್ಕಾಂ ಕಂಪನಿಗಳ ನೂರಕ್ಕೂ ಹೆಚ್ಚು ಕ್ರೀಡಾಪಟುಗಳು ಭಾಗವಹಿಸಿದ್ದಾರೆ. ಕ್ರೀಡಾಕೂಟದಲ್ಲಿ ಕಬಡ್ಡಿ, ವಾಲಿಬಾಲ್, ಬ್ಯಾಸ್ಕೆಟ್ ಬಾಲ್, ಬಾಲ್ ಬ್ಯಾಡ್ಮಿಂಟನ್ ಮತ್ತು ಟೇಬಲ್ ಟೆನ್ನಿಸ್ ಸೇರಿದಂತೆ ವಿವಿಧ ಕ್ರೀಡೆಗಳು ನಡೆಯಲಿವೆ.

> **ಎರಡು ದಿನಗಳ ಕ್ರೀಡಾಕೂಟವನ್ನು ಉತ್ತಮ ರೀತಿಯಲ್ಲಿ ಆಯೋಜನೆ ಮಾಡಲಾಗಿದೆ. ಕ್ರೀಡಾಪಟುಗಳು ಅತ್ಯಂತ ಸಂತೋಷದಿಂದ ಹಾಗೂ ಕ್ರೀಡಾ ಸ್ಫೂರ್ತಿಯೊಂದಿಗೆ ಭಾಗವಹಿಸುವ ಮೂಲಕ ವಿದ್ಯುತ್ ಕಂಪನಿಗಳ ಕ್ರೀರ್ತಿಯನ್ನು ಹೆಚ್ಚಿಸಬೇಕಿದೆ ಎಂದು ಸೆಸ್ಕ್. ವ್ಯವಸ್ಥಾಪಕ ನಿರ್ದೇಶಕರು ಕೆ.ಎಂ. ಮುನಿಗೋಪಾಲ್ ರಾಜು ತಿಳಿಸಿದ್ದಾರೆ.**

ಇದೇ ವೇಳೆ ರಾಷ್ಟ್ರಮಟ್ಟದ ಕ್ರೀಡಾಕೂಟಗಳಲ್ಲಿ ಸಾಧನೆ ಮಾಡಿದ ನಿಶಿತಾ (ಷಟಲ್ ಬ್ಯಾಡ್ಮಿಂಟನ್), ನಂದೀಶ್ (ಷಟಲ್ ಬ್ಯಾಡ್ಮಿಂಟನ್) ಹಾಗೂ ಕಾರ್ತಿಕ್ (ಕಬಡ್ಡಿ) ಅವರನ್ನು ಸನ್ಮಾನಿಸಲಾಯಿತು. ನಂತರ ಇದೇ ಸಂದರ್ಭದಲ್ಲಿ ರಾಷ್ಟ್ರಮಟ್ಟದ ಷಟಲ್ ಬ್ಯಾಡ್ಮಿಂಟನ್ ಆಟಗಾರ್ತಿ ನಿಶಿತಾ ಅವರು ಕ್ರೀಡಾಪಟುಗಳಿಗೆ ಕ್ರೀಡಾ ಪ್ರಮಾಣವಚನ ಬೋಧಿಸಿದರು.

ಸಮಾರಂಭದಲ್ಲಿ ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕರಾದ ಕೆ.ಎಂ. ಮುನಿಗೋಪಾಲ್ ರಾಜು, ಮುಖ್ಯ ಇಂಜಿನಿಯರ್ ಹಾಗೂ ಸೆಸ್ಕ್ ಕ್ರೀಡಾ ಸಮಿತಿ ಅಧ್ಯಕ್ಷ ಎ.ಎ. ಸುನೀಲ್ ಕುಮಾರ್, ಮುಖ್ಯ ಆರ್ಥಿಕ ಅಧಿಕಾರಿ ಜಿ. ರೇಣುಕಾ, ಮುಖ್ಯ ಪ್ರಧಾನ ವ್ಯವಸ್ಥಾಪಕಿ ಲಿಂಗರಾಜಮ್ಮ, ಪ್ರಧಾನ ವ್ಯವಸ್ಥಾಪಕಿ ಬಿ.ಆರ್. ರೂಪ, ಕವಿಪ್ರನಿನಿ ನೌಕರರ ಸಂಘದ ಅಧ್ಯಕ್ಷ ಕೆ. ಬಲರಾಂ, ಕವಿಮಂ ಲೆಕ್ಕಾಧಿಕಾರಿಗಳ ಸಂಘದ ಅಧ್ಯಕ್ಷ ಎಸ್. ಗಿರೀಶ್, ಕವಿಪ್ರನಿನಿ ಕ್ರೀಡಾ ಸಂಸ್ಥೆ ಪ್ರಧಾನ ಕಾರ್ಯದರ್ಶಿ ಮೈಕೆಲ್ ವಾಷಿಂಗ್ಟನ್ ಹಾಗೂ ಅಧೀಕ್ಷಕ ಇಂಜಿನಿಯರುಗಳಾದ ಜೆ.ಎಸ್. ಲೋಕೇಶ್, ಬಿ. ಸೋಮಶೇಖರ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಜನರ ಸಹಕಾರವಿದ್ದರೆ ಮಾತ್ರ ಅಭಿವೃದ್ಧಿ ಕೆಲಸ ಮಾಡಲು ಸಾಧ್ಯ: ಶಾಸಕ

**ಕೆ.ಎಂ.ದೊಡ್ಡಿ:** ಜನರ ಸಹಕಾರವಿದ್ದರೆ ಮಾತ್ರ ಅಭಿವೃದ್ಧಿ ಕೆಲಸಗಳನ್ನು ಮಾಡಬಹುದು ನನ್ನ ಬಗ್ಗೆ ಯಾರು ಏನು ಮಾತನಾಡಿದರು ನಾನು ಅದ್ಕೆ ಕಿವಿ ಗೊಡದೇ ಕ್ಷೇತ್ರದ ಅಭಿವೃದ್ಧಿಯತ್ತ ನನ್ನ ಚಿತ್ತ ಎಂದು ಶಾಸಕ ಕದಲೂರು ಉದಯ್ ತಿಳಿಸಿದರು.



ಸಮೀಪದ ಯಡಗನಹಳ್ಳಿಯಲ್ಲಿ 5 ಕೋಟಿ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ನನ್ನ ವಿರುದ್ಧ ಟೀಕೆಗಳಿಗೆ ನಾನು ಮಾಡಿರುವ ಅಭಿವೃದ್ಧಿ ಕಾರ್ಯಗಳೇ ಉತ್ತರ ನೀಡಲಿವೆ ಎಂದರು.

ಕಳೆದ 20 ವರ್ಷಗಳಿಂದ ರಸ್ತೆ ಅಧ್ವಾನಗೊಂಡು ಸಾರ್ವಜನಿಕರು ಓಡಾಡಲು ಪ್ರಯಾಸ ಪಡುತಿದ್ದರು. ಈ ರಸ್ತೆಯನ್ನು ಸುಮಾರು 5ಕಿ.ಮೀ.ವರೆಗೂ ದ್ವಿಪಥ ರಸ್ತೆಯಾಗಿ ಮಾಡಿ ಸಾರ್ವಜನಿಕರು ಸುಗಮವಾಗಿ ಸಂಚರಿಸಲು ಅನೂಕುಲ ಮಾಡಿಕೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಈಗಾಗಲೇ ಭಾಗಶಃ ಎಲ್ಲಾ ಹಳ್ಳಿಗಳ ರಸ್ತೆಗಳನ್ನು ಅಭಿವೃದ್ದಿಗೊಳಿಸುತ್ತಿದ್ದು ನಿರಂತರವಾಗಿ ಕ್ಷೇತ್ರದ ಒಳಿತಿಗಾಗಿ ಹಗಲಿರಳು ಶ್ರಮಿಸುತ್ತಿದ್ದು ಮದ್ದೂರು ಕ್ಷೇತ್ರವನ್ನು ಮಾದರಿ ಮಾಡಲು ಪಣ ತೋಟ್ಟಿದ್ದು ಇದಕ್ಕೆ ಕ್ಷೇತ್ರದ ಕ್ಷೇತ್ರದ ಜನರ ಸಹಕಾರ ಅತ್ಯಗತ್ಯ ಎಂದರು.

ಚುನಾವಣೆಯ ಸಂದರ್ಭಗಳಲ್ಲಿ ರಾಜಕೀಯ ಮಾಡಬೇಕೆ ಹೊರತು ಅಭಿವೃದ್ಧಿ ವಿಚಾರ ಬಂದಾಗ ಸಾರ್ವಜನಿಕರು ಒಗ್ಗಟ್ಟು ಪ್ರದರ್ಶಿಸಬೇಕೆ ಹೊರತು ಅಭಿವೃದ್ಧಿಗೆ ಅಡ್ಡಿ ಮಾಡಬಾರದು. ಯಾವುದೇ ಸಮಸ್ಯೆಗಳಿಗೂ ಪರಿಹಾರ ಇರುತ್ತದೆ ಅದನ್ನು ಪರಸ್ಪರ ಚರ್ಚೆ ಮಾಡಿ ಬಗೆ ಹರಿಸಿ ಕೊಳ್ಳೋಣ ಎಂದು ತಿಳಿಸಿದರು.

ಮದ್ದೂರು ಕ್ಷೇತ್ರದ ಅಭಿವೃದ್ಧಿಗೆ ಇಂದೆಂದು ತಂದಿರದಂತಹ ಕಂಡು ಕೇಳರಿಯದಷ್ಟು ಅನುದಾನ ತಂದು ನೀರಾವರಿ, ರಸ್ತೆ, ಕೃಷಿ ಜಮೀನುಗಳ ರಸ್ತೆಗಳ ಅಭಿವೃದ್ಧಿ, ಶುದ್ಧ ಕುಡಿಯುವ ನೀರಿನ ಘಟಕ ಸೇರಿದಂತೆ ಕ್ಷೇತ್ರ ಮೂಲ ಸೌಕರ್ಯಗಳಿಗೆ ಹೆಚ್ಚಿನ ಆದ್ಯತೆ ನೀಡಿದ್ದು ಕ್ಷೇತ್ರ ಮತ್ತಷ್ಟು ಅಭಿವೃದ್ಧಿಯತ್ತ ಸಾಗುತ್ತಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮದ್ದೂರು ಕ್ಷೇತ್ರದ ಅಭಿವೃದ್ದಿಗಳಿಗೆ ನಿರಂತರವಾಗಿ ಸಂಬಂಧ ಪಟ್ಟ ಇಲಾಖೆ ಸಚಿವರ ಬೆನ್ನ ಹಿಂದೆ ಬಿದ್ದು ಅನುದಾನಗಳನ್ನು ತರುತಿದ್ದರು ಸಹ ಕ್ಷೇತ್ರಕ್ಕೆ ಮತ್ತಷ್ಟು ಅನುದಾನಗಳು ಅವಶ್ಯಕತೆ ಇದ್ದು ಈಗಾಗಲೇ ಮುಖ್ಯ ಮಂತ್ರಿ ಮತ್ತು ಉಪ ಮುಖ್ಯ ಮಂತ್ರಿಗಳಿಗೆ ಅನುದಾನ ನೀಡುವಂತೆ ಮನವಿ ಮಾಡಿದ್ದೆ ಸಕರಾತ್ಮವಾಗಿ ಭರವಸೆ ನೀಡಿದ್ದಾರೆ ಎಂದರು.

ಸಮಾಜ ಸೇವೆಗೆ ಬಂದ ನನ್ನನ್ನು ಜನರು ಅರಸಿ ಆಶೀರ್ವದಿಸಿ ವಿದಾನಸೌದಕ್ಕೆ ಕಳುಹಿಸಿದ್ದರಿ ನಿಮ್ಮ ನಂಬಿಕೆ ಹುಸಿಗೊಳಿಸದೇ ಅಭಿವೃದ್ದಿಯೊಂದೆ ಮಂತ್ರ ಎಂಬಂತೇ ನಿರಂತರವಾಗಿ ಸಾರ್ವಜನಿಕರ ಒಡನಾಟ ಇಟ್ಟುಕೊಂಡು ಅಭಿವೃದ್ದಿಗೆ ಶ್ರಮಿಸುತ್ತಿದ್ದೇನೆ ಎಂದು ಭಾವುಕರಾದರು.

ಈ ಹಿಂದಿನ ಅವಧಿಯಲ್ಲಿ ಕಳಪೆ ಕಾಮಗಾರಿಗಳೂ ನಡೆದಿರುವ ಬಗ್ಗೆ ಸಾರ್ವಜನಿಕರು ನನಗೆ ತಿಳಿಸಿದ್ದು ನನ್ನ ಅವಧಿಯಲ್ಲಿ ಅಂತಹ ಸಂಗತಿಗಳಿಗೆ ಆಸ್ಪದೆ ನೀಡದೇ ಸಂಬಂದ ಪಟ್ಟ ಯಾವುದೇ ಕಾಮಗಾರಿಗಳೂ ಕಳಪೆ ಕಂಡು ಬಂದರೆ ನನ್ನ ಗಮನಕ್ಕೆ ತರಬೇಕು ಸಾರ್ವಜನಿಕರು ತಾವೇ ಖುದ್ದಾಗಿ ನಿಂತು ಯಾವುದೇ ರಾಜಕೀಯ ಮಾಡದೇ ಕೆಲಸಗಳನ್ನು ಮಾಡಿಸಿಕೊಳ್ಳಬೇಕು ಎಂದು ಕಿವಿ ಮಾತು ಹೇಳಿದರು.

ನೀರಾವರಿ ಇಲಾಖೆಗೆ ಸಂಬಂದ ಪಟ್ಟ ಹಾಗೇ ನಾಲೆಗಳ ಕೆಲಸ ನಿರಂತರವಾಗಿ ನಡೆಯುತ್ತಿದ್ದು ಎಲ್ಲೂ ಕಳಪೆಯಾಗದಂತೆ ನಾನೇ ಖುದ್ದಾಗಿ ನಿಂತು ನಾಲೆಗಳ ಕೆಲಸಗಳನ್ನು ವಿಕ್ಷೀಸುತ್ತಿದ್ದು ಇನ್ನೂ ಕೆಲವೇ ತಿಂಗಳಲ್ಲಿ ಎಲ್ಲಾ ಜಮೀನುಗಳಿಗೆ ನೀರು ಸರಾಗವಾಗಿ ಸಮರ್ಪಕವಾಗಿ ಹರಿಯಲಿದ್ದು ಇನ್ನೂ 50 ವರ್ಷ ರೈತರು ಯಾವುದೇ ತೊಂದರೆ ಅನುಭವಿಸುವ ಅಗತ್ಯವಿಲ್ಲ ಎಂದರು.

ಈ ಸಂದರ್ಭದಲ್ಲಿ ಮದ್ದೂರು ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ಬಿ.ಬಸವರಾಜು, ಭಾರತೀನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎ.ಎಸ್. ರಾಜೀವ್, ಕಾವೇರಿ ನೀಎಆವರಿ ನಿಗಮದ ಇಂಜಿನಿಯರ್ ಗೋಪನಹಳ್ಳಿ ಕೆಂಪರಾಜು, ಗ್ರಾ.ಪಂ .ಮಾಜಿ ಅಧ್ಯಕ್ಷ ಕೆಂಚೇಗೌಡ, ಮುಖಂಡರಾದ ರೈಸ್ ಮಿಲ್ ಪುಟ್ಟೇಗೌಡ, ಚನ್ನಬಸವೇಗೌಡ, ರವಿ, ರಮೇಶ್, ವೈ.ಸಿ.ರಾಜು, ಶಂಕರ್, ಅರುಣ್, ಚಂದ್ರು, ಮಹೇಶ, ದೊರೆಸ್ವಾಮಿ ಸೇರಿದಂತೆ ಮತ್ತಿತರಿದ್ದರು.

# ವಿವಿ ಸಂಜೆ ಕಾಲೇಜು; ಉಚಿತವಾಗಿ ಹೆಲ್ಮೆಟ್ ವಿತರಣೆ ಇಂದು

**ಮೈಸೂರು:** ಕಡಕೊಳದ ಸಿರೇನ್ ಇಂಡಿಯಾ ಕಂಪೆನಿಯು ರಸ್ತೆ ಸುರಕ್ಷತಾ ಅಭಿಯಾನ ಅಂಗವಾಗಿ ಮಾಚ್9 26ರಂದು ಸಂಜೆ 6 ಗಂಟೆಗೆ ಮೈಸೂರು ವಿಶ್ವವಿದ್ಯಾನಿಲಯದ ಸಂಜೆ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಹೆಲ್ಮೆಟ್ ವಿತರಣೆ ಕಾರ್ಯಕ್ರಮ ಏರ್ಪಡಿಸಿದೆ.




ಕಾರ್ಯಕ್ರಮವನ್ನು ಸಂಚಾರ ವಿಭಾಗದ ಎಸಿಪಿ ಎಂ.ಶಿವಶಂಕರ್ ಉದ್ಘಾಟಿಸುವರು. ವಿಶ್ವವಿದ್ಯಾಲಯದ ಸಂಜೆ ಕಾಲೇಜಿನ ಪ್ರಾಂಶುಪಾಲರಾದ ಡಾ.ತಿಮ್ಮಯ್ಯ ಕೆ.ಅಧ್ಯಕ್ಷತೆ ವಹಿಸುವರು. ಸಿರೇನ್ ಇಂಡಿಯಾ ಕಂಪೆನಿಯ ನಿರ್ದೇಶಕ ಕೋರ್ಥೋ ಅಸಕುರ, ಎಜಿಎಂ ಸಂತೋಷ್ ನಾಯರ್, ಮಾನವ ಸಂಪನ್ಮೂಲ ವಿಭಾಗದ ಹಿರಿಯ ವ್ಯವಸ್ಥಾಪಕ ಪದ್ಮನಾಭ ಎನ್. ಭಾಗವಹಿಸುವರು.

ಕಾರ್ಯಕ್ರಮಕ್ಕೆ ಮೊದಲು ಜಾನಪದ ಕಲಾವಿದ ಮಹಾದೇವ ಸ್ವಾಮಿ ಅವರ ತಂಡದಿಂದ ಜಾನಪದ ಹಾಡು ಹಾಗೂ ನಾಟಕ ಪ್ರದರ್ಶನ ಇರುತ್ತದೆ.

# 28ರಂದು ಪ್ರಜ್ಞಾ ಮರಾತೆ ರಸಮಂಜರಿ ಕಾರ್ಯಕ್ರಮ




**ಮೈಸೂರು:** ಮಹಿಳಾ ದಿನಾಚರಣೆ ಅಂಗವಾಗಿ ಶ್ರೀ ಭಗವತಿ ಚಿತ್ಪಾವನ ಮಹಿಳಾ ಟ್ರಸ್ಟ್ ವತಿಯಿಂದ ನಗರದ ಕೃಷ್ಣಮೂರ್ತಿ ಪುರಂನ ಬಿಎಸ್‌ಎಸ್ ವಿದ್ಯೋದಯ ಶಾಲೆಯಲ್ಲಿ ಮಾಚ್9 28ರಂದು ಸಂಜೆ 5 ಗಂಟೆಗೆ ಗಾಯಕಿ ಪ್ರಜ್ಞಾ ಮರಾತೆ ಅವರ ರಸಮಂಜರಿ ಕಾರ್ಯಕ್ರಮವನ್ನು ಆಯೋಜಿಸಿದೆ.

ಬೆಂಗಳೂರಿನ ಪ್ರಜ್ಞಾ ಮರಾತೆ ಅವರು ಝಿ ಕನ್ನಡ ವಾಹಿನಿಯ ಸರಿಗಮಪ 20ನೇ ಸೀಜನ್ನಿನಲ್ಲಿ ಸೆಮಿ ಫೈನಲ್ ಸ್ಪರ್ಧಿಯಾಗಿದ್ದರು ಎಂದು ಶ್ರೀ ಭಗವತಿ ಚಿತ್ಪಾವನ ಮಹಿಳಾ ಟ್ರಸ್ಟ್ ಕಾರ್ಯದರ್ಶಿ ಸುಜಲಾ ಗೋರೆ ಅವರು ಬುಧವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

28ರಂದು ಸಂಜೆ 5 ಗಂಟೆಗೆ ನಡೆಯುವ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಸಮರ್ಪಣ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಡಾ.ಸುಧಾ ಫಣೀಶ್ ಹಾಗೂ ವಿಜಯ ವಿಠಲ ವಿದ್ಯಾಶಾಲಾ ಪ್ರಾಂಶುಪಾಲರಾದ ಎಸ್.ಎ.ವೀಣಾ ಭಾಗವಹಿಸುವರು. ನಂತರ ಪ್ರಜ್ಞಾ ಮರಾತೆ ಅವರು ಸುಗಮ ಸಂಗೀತ ಹಾಗೂ ಚಿತ್ರಗೀತೆಗಳನ್ನು ಹಾಡುವರು. ಅವರೊಂದಿಗೆ ಅನ್ವಿತ್ ರಾಜ್ ಕೂಡಾ ಭಾಗವಹಿಸುವರು ಎಂದು ವಿವರಿಸಿದರು.

ಮಹಿಳೆಯರಿಂದ ಮಹಿಳೆಯರಿಗಾಗಿ

ಭಗವದ್ಗೀತೆ ಚಿತ್ಪಾವನ ಮಹಿಳಾ ಟ್ರಸ್ಟ್ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದೆ. ಪ್ರಜ್ಞಾ ಮರಾತೆಯವರದು ನಾಲ್ಕನೆಯ ಕಾರ್ಯಕ್ರಮ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಟ್ರಸ್ಟ್ ಅಧ್ಯಕ್ಷೆ ವೀಣಾ ಡೋಂಗ್ರೆ, ಕೋಶಾಧಿಕಾರಿ ದೀಪಾ ಹೆಬ್ಬಾರ ಹಾಗೂ ಸದಸ್ಯೆ ಮಧುರಾ ತಾಮ್ಹನ್ ಕರ್ ಭಾಗವಹಿಸಿದ್ದರು.

# ಮಾ. 27 ರಂದು ಪೌರಾಣಿಕ ನಾಟಕ

**ದೊಡ್ಡೇರಿ:** ತಾಲೂಕಿನ ಬಡವನಹಳ್ಳಿಯ ಶ್ರೀ ಲಕ್ಷ್ಮೀರಂಗನಾಥ ಸ್ವಾಮಿ ಜಾತ್ರ ಮಹೋತ್ಸವದ ಪ್ರಯುಕ್ತ ದಿನಾಂಕ 27.3.2026ನೇ ಶುಕ್ರವಾರ ರಾತ್ರಿ 7.30.ಕ್ಕೆ ಸರಿಯಾಗಿ ಶ್ರೀ ಲಕ್ಷ್ಮೀರಂಗನಾಥ ಸ್ವಾಮಿ ಕೃಪಾಪೋಷಿತ ನಾಟಕ ಮಂಡಳಿ ಇವರ ವತಿಯಿಂದ ಬಾವಿಮನೆ ಕಾಂತರಾಜು ರವರ ಸಾರಥ್ಯದಲ್ಲಿ ಸಂಗೀತ ನಿರ್ದೇಶಕ ಸಿಡದರಗಲ್ಲು ಶ್ರೀ ನಿವಾಸ್‌ರವರ ನಿರ್ದೇಶನದಲ್ಲಿ ಕುರುಕ್ಷೇತ್ರ ಅಥವಾ ಭಗವದ್ಗೀತೆ ಎಂಬ ಸುಂದರ ಪೌರಾಣಿಕ ನಾಟಕ ಪ್ರದರ್ಶನವಾಗಲಿದೆ. ಕಲಾ ಪ್ರೇಕ್ಷಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಪ್ರೋತ್ಸಾಹಿಸಬೇಕೆಂದು ಪತ್ರಿಕಾ ಪ್ರಕಟಣೆಯಲ್ಲಿ ಮನವಿ ಮಾಡಿರುತ್ತಾರೆ.

# ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಕೆ.ರಾಜು ಹೇಳಿಕೆ
# 'ಗೃಹಲಕ್ಷ್ಮೀ'ಯಲ್ಲಿ 1,777 ಮೃತರ ಹೆಸರು ಕೈಬಿಡಿ

**ರಾಮನಗರ:** ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳಲ್ಲಿ ಪ್ರಮುಖವಾಗಿರುವ ಗೃಹಲಕ್ಷ್ಮೀ ಯೋಜನೆಯಡಿ ಜಿಲ್ಲೆಯ ಫಲಾನುಭವಿಯಾಗಿ, ತದನಂತರದಲ್ಲಿ ವಯೋಸಹಜ ಸೇರಿದಂತೆ ಇತರೆ ಕಾರಣಗಳಿಂದ ಮೃತರಾದ ಮಹಿಳೆಯರ ಹೆಸರುಗಳನ್ನು ಫಲಾನುಭವಿಗಳ ಪಟ್ಟಿಯಿಂದ ಕೈಬಿಡಲು ಕ್ರಮವಹಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಕೆ. ರಾಜು ಅವರು ಸೂಚಿಸಿದರು.




ಅವರು ಮಾ.24ರ ಮಂಗಳವಾರ ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಗ್ಯಾರಂಟಿ ಯೋಜನೆಗಳ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯಲ್ಲಿ ಗೃಹಲಕ್ಷ್ಮೀ ಯೋಜನೆಯಡಿ ನೋಂದಣಿಯಾಗಿ ಮರಣ ಹೊಂದಿದ 6,624 ಫಲಾನುಭವಿಗಳನ್ನು ಗುರುತಿಸಲಾಗಿದ್ದು, ಅದರಲ್ಲಿ 1,777 ಫಲಾನುಭವಿಗಳನ್ನು ಗೃಹಲಕ್ಷ್ಮೀ ಯೋಜನೆಯಿಂದ ಕೈಬಿಡಲಾಗಿದೆ. ಬಾಕಿ ಇರುವ 4,847 ಫಲಾನುಭವಿಗಳನ್ನು ಗೃಹಲಕ್ಷ್ಮೀ ಫಲಾನುಭವಿಗಳ ಪಟ್ಟಿಯಿಂದ ತೆಗೆದು ಹಾಕಲು ಶೀಘ್ರವಾಗಿ ಕ್ರಮವಹಿಸುವಂತೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕ ದಿನೇಶ್ ಅವರಿಗೆ ತಿಳಿಸಿದರು.

ಚನ್ನಪಟ್ಟಣ ತಾಲ್ಲೂಕಿನಲ್ಲಿ 1,700 ಫಲಾನುಭವಿಗಳು ಮರಣ ಹೊಂದಿದ್ದು, ಅದರಲ್ಲಿ 425 ಫಲಾನುಭವಿಗಳನ್ನು ಕೈಬಿಡಲಾಗಿದ್ದು, 1,275 ಫಲಾನುಭವಿಗಳು ಬಾಕಿ ಉಳಿದಿದ್ದಾರೆ. ಕನಕಪುರ ತಾಲ್ಲೂಕಿನಲ್ಲಿ 1,660 ಫಲಾನುಭವಿಗಳು ಮರಣ ಹೊಂದಿದ್ದು, ಅದರಲ್ಲಿ 418 ಫಲಾನುಭವಿಗಳನ್ನು ಕೈಬಿಡಲಾಗಿದ್ದು, 1,242 ಫಲಾನುಭವಿಗಳು ಬಾಕಿ ಉಳಿದಿದ್ದಾರೆ. ಹಾರೋಹಳ್ಳಿ ತಾಲ್ಲೂಕಿನಲ್ಲಿ 398 ಫಲಾನುಭವಿಗಳು ಮರಣ ಹೊಂದಿದ್ದು, ಅದರಲ್ಲಿ 96 ಫಲಾನುಭವಿಗಳನ್ನು ಕೈಬಿಡಲಾಗಿದ್ದು, 302 ಫಲಾನುಭವಿಗಳು ಬಾಕಿ ಉಳಿದಿದ್ದಾರೆ. ಮಾಗಡಿ ತಾಲ್ಲೂಕಿನಲ್ಲಿ 1,375 ಫಲಾನುಭವಿಗಳು ಮರಣ ಹೊಂದಿದ್ದು, ಅದರಲ್ಲಿ 332 ಫಲಾನುಭವಿಗಳನ್ನು ಕೈಬಿಡಲಾಗಿದ್ದು, 1,043 ಫಲಾನುಭವಿಗಳು ಬಾಕಿ ಉಳಿದಿದ್ದಾರೆ. ರಾಮನಗರ ತಾಲ್ಲೂಕಿನಲ್ಲಿ 1,491 ಫಲಾನುಭವಿಗಳು ಮರಣ ಹೊಂದಿದ್ದು, ಅದರಲ್ಲಿ 506 ಫಲಾನುಭವಿಗಳನ್ನು ಕೈಬಿಡಲಾಗಿದ್ದು, 985 ಫಲಾನುಭವಿಗಳು ಬಾಕಿ ಉಳಿದಿದ್ದಾರೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ಸಭೆಗೆ ಮಾಹಿತಿ ನೀಡಿದರು.

ಜಿಲ್ಲೆಯ 2,94,399 ಅರ್ಹ ಫಲಾನುಭವಿಗಳ ಪೈಕಿ 2,81,726 (95.70%) ಫಲಾನುಭವಿಗಳು ನೋಂದಣಿಯಾಗಿದ್ದು, ಉಳಿದ 12,673 (4.30%) ಫಲಾನುಭವಿಗಳ ನೋಂದಣಿಗೆ ಬಾಕಿ ಇರುತ್ತದೆ. 27 ಕಂತುಗಳಲ್ಲಿ ಅಂದರೆ 2025ರ ಡಿಸೆಂಬರ್ ಮಾಹೆಯವರೆಗೆ 2,68,612 ಫಲಾನುಭವಿಗಳಿಗೆ 1427,16,26,000 ರೂ.ಗಳನ್ನು ಪಾವತಿಸಲಾಗಿದೆ. 2026ರ ಜನವರಿ ಮಾಹೆಯ 28ನೇ ಕಂತನ್ನು ಇನ್ನೆರಡು ದಿನಗಳಲ್ಲಿ ಪಾವತಿಸಲಾಗುವುದು ಎಂದರು.

> **ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಜಿಲ್ಲೆಯಲ್ಲಿ ಅವಶ್ಯವಿರುವ ಗ್ರಾಮಗಳಿಗೆ ಬಸ್ ಸೌಕರ್ಯ ಕಲ್ಪಿಸುವಂತೆ ಕೆಎಸ್‌ಆರ್‌ಟಿಸಿ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಗ್ಯಾರಂಟಿ ಯೋಜನೆಗಳನ್ನು ಜಿಲ್ಲೆಯಲ್ಲಿ ಸಮರ್ಪಕವಾಗಿ ಅನುಷ್ಠಾನ ಮಾಡಲು ಜಿಲ್ಲೆಯ ಸಂಬಂಧಿಸಿದ ಎಲ್ಲಾ ಅಧಿಕಾರಿಗಳು ಹಾಗೂ ಇಲಾಖೆಗಳು ಶ್ರಮಿಸಬೇಕು, ಯೋಜನೆಗೆ ಅರ್ಹರಿರುವ ಯಾವುದೇ ಫಲಾನುಭವಿಯು ಗ್ಯಾರಂಟಿ ಯೋಜನೆಯಿಂದ ಹೊರಗುಳಿಯಬಾರದು. ಯೋಜನೆ ಯಶಸ್ಸಿಗೆ ಎಲ್ಲಾ ಅಧಿಕಾರಿಗಳು ಸಹಕರಿಸಬೇಕು.**

ಅನ್ನಭಾಗ್ಯ ಯೋಜನೆಯಡಿ ಜಿಲ್ಲೆಯಲ್ಲಿ 15,053 ಬಿಪಿಎಲ್ ಪಡಿತರ ಚೀಟಿಗಳ ಪೈಕಿ 12,216 ಪಡಿತರ ಚೀಟಿಗಳನ್ನು ಎಪಿಎಲ್ ಪಡಿತರ ಚೀಟಿಗಳನ್ನಾಗಿ ಪರಿವರ್ತನೆ ಮಾಡಲಾಗಿದೆ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಉಪನಿರ್ದೇಶಕರಾದ ಶಿಲ್ಪ ಅವರು ಸಭೆಗೆ ಮಾಹಿತಿ ನೀಡಿದಾಗ ಪ್ರತಿಕ್ರಿಯಿಸಿದ ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷರು ಪಡಿತರ ಚೀಟಿಗಳನ್ನು ಪರಿವರ್ತಿಸುವ ಸಂದರ್ಭದಲ್ಲಿ ಅಧಿಕಾರಿಗಳು ಕೂಲಕುಂಷವಾಗಿ ಪರಿಶೀಲಿಸಬೇಕು ಅರ್ಹ ಫಲಾನುಭವಿಗಳು ಅನ್ನಭಾಗ್ಯ ಯೋಜನೆಯಿಂದ ಹೊರಗುಳಿಯದಂತೆ ಅಗತ್ಯ ಕ್ರಮ ವಹಿಸಬೇಕು ಎಂದು ನಿರ್ದೇಶಿಸಿದರು.

ಶಕ್ತಿ ಯೋಜನೆಯಡಿ ಜಿಲ್ಲೆಯಲ್ಲಿ ಇದುವರೆಗೂ 11,05,61,882 ಮಹಿಳಾ ಪ್ರಯಾಣಿಕರು ಪ್ರಯಾಣಿಸಿದ್ದಾರೆ ಅವರ ಪ್ರಯಾಣ ದರದ ಮೊತ್ತ 324,99,17,043 ರೂಪಾಯಿಗಳಾಗಿವೆ ಹಾಗೂ ಜಿಲ್ಲೆಯಲ್ಲಿ ಯುವನಿಧಿ ಯೋಜನೆಯಡಿ 2024ರ ಜನವರಿ ಮಾಹೆಯಿಂದ 2025ರ ಡಿಸೆಂಬರ್ ಮಾಹೆಯವರೆಗೆ ಒಟ್ಟು ಅರ್ಹ 3,799 ಡಿಪ್ಲೋಮಾ ಹಾಗೂ ಪದವೀಧರರ ಫಲಾನುಭವಿಗಳಿಗೆ ನೇರ ನಗದು ವರ್ಗಾವಣೆ ಮೂಲಕ ಒಟ್ಟು 11,19,75,000 ರೂ.ಗಳನ್ನು ಪಾವತಿಸಲಾಗಿದೆ ಎಂದು ತಿಳಿಸಿದರು.

ಗೃಹಜ್ಯೋತಿ ಯೋಜನೆಯಡಿ ಜಿಲ್ಲೆಯಲ್ಲಿ 3,33,452 ಮಂದಿ ನೋಂದಾಯಿಸಿಕೊಂಡಿದ್ದು, ಈ ಯೋಜನೆ ಪ್ರಾರಂಭವಾದಾಗಿನಿಂದ ಇದುವರೆಗೂ ಒಟ್ಟಾರೆ 378.46 ಕೋಟಿ ರೂಗಳನ್ನು ವೆಚ್ಚ ಮಾಡಲಾಗಿದೆ. ರೈತರ ಜಮೀನಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವಾಗ ವಿಳಂಬ ತೋರದೆ ಬೆಸ್ಕಾಂ ಅಧಿಕಾರಿಗಳು ಉತ್ತಮ ಸೇವೆ ನೀಡಬೇಕೆಂದು ಸೂಚಿಸಿದರು.

ಸಭೆಯಲ್ಲಿ ಸಮಿತಿಯ ಉಪಾಧ್ಯಕ್ಷರಾದ ಮಹದೇಶ್, ಎಸ್.ಸಿ. ಶೇಖರ್, ಸಿದ್ದೇಗೌಡ, ಸದಸ್ಯರು ಹಾಗೂ ರಾಮನಗರ ತಾಲ್ಲೂಕು ಅಧ್ಯಕ್ಷರಾದ ರಾಜು ವಿ.ಎಚ್., ಮಾಗಡಿ ತಾಲ್ಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಶಿವಣ್ಣ, ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಸದಸ್ಯರಾದ ಶಿವಮಾದಯ್ಯ, ಎಂ. ಮಹದೇವ್, ಕಾಳಮ್ಮ, ವನಜಾ ಎಸ್.ಜಿ, ಶೋಭಾ ಸೇರಿದಂತೆ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಧನರಾಜ್ ಹಾಗೂ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ಸರ್ಕಾರ ಒತ್ತಡಕ್ಕೆ ಮಣಿದು ಒಳಮೀಸಲಾತಿ ಜಾರಿಗೆ ಹಿಂದೇಟು ಹಾಕುತ್ತಿದೆ: ಎಚ್.ಹನುಮಂತಪ್ಪ

**ಮಂಡ್ಯ:** ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರಕಾರವು ಒಳಮೀಸಲಾತಿ ವಿರೋಧಿಗಳ ಒತ್ತಡಕ್ಕೆ ಮಣಿದು ಒಳಮೀಸಲಾತಿ ಜಾರಿಗೆ ಹಿಂದೇಟು ಹಾಕುತ್ತಿದ್ದಾರೆ ಎಂದು ಕರ್ನಾಟಕ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಚ್.ಹನುಮಂತಪ್ಪ ಬಳ್ಳಾರಿ ಆರೋಪಿಸಿದರು.




ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಳಮೀಸಲಾತಿ ಜಾರಿ ಮಾಡಲು ರಾಜ್ಯ ಸರಕಾರಗಳಿಗೆ ಅಧಿಕಾರ ಇದೆ ಎಂದು ಸುಪ್ರೀ ಕೋರ್ಟ್ 2024ರ ಆಗಸ್ಟ್‌ನಲ್ಲಿಯೇ ಆದೇಶ ನೀಡಿದೆ. ಆದರೆ ಕಾಂಗ್ರೆಸ್ ಸರಕಾರ ಯಾರ ಒತ್ತಡಕ್ಕೆ ಮಣಿದು ಒಳಮೀಸಲಾತಿ ಜಾರಿ ಮಾಡದೇ ನಾಟಕವಾಡುತ್ತಿದೆ ಎಂಬುದು ತಿಳಿಸಬೇಕು ಎಂದು ಒತ್ತಾಯಿಸಿದರು.

ಈಗಾಗಲೇ ಕಾಂಗ್ರೆಸ್ ಸರಕಾರದ ಬಳಿ 3 ಆಯೋಗಗಳ ವರದಿಯಿದೆ. ಈ ಸಂಬಂಧ ಸದನದಲ್ಲಿ ಹಾಗೂ ಸಂಪುಟ ಸಭೆಯಲ್ಲಿ ತೀರ್ಮಾನ ಮಾಡಿ, ರಾಜ್ಯಪಾಲರ ಅಂಕಿತ ಪಡೆದರೂ ಯಾವ ಕಾರಣಕ್ಕೆ ತಡೆಹಿಡಿಸಿದ್ದೀರಿ. ನಾಗಮೋಹನ್ ದಾಸ್ ಅವರ ವರದಿ ಪ್ರಕಾರ ಒಳ ಮೀಸಲಾತಿ ಜಾರಿ ಮಾಡದೇ ರಾಜಕೀಯ ಲಾಭಕ್ಕಾಗಿ 3 ಗುಂಪು ಮಾಡಿ ಬೇಕಾಬಿಟ್ಟಿಯಾಗಿ ಜಾರಿ ಮಾಡಿದೆ ಎಂದು ದೂರಿದರು.

ನೆರೆ ರಾಜ್ಯ ತಮಿಳುನಾಡಿನಲ್ಲಿ ಶೇ.59 ರಷ್ಟು, ಪಂಚಾಬ್‌ನಲ್ಲಿ ಶೇ.56, ಹರಿಯಾಣದಲ್ಲಿ ಶೇ.58ರಷ್ಟು ಮೀಸಲಾತಿಯಿದೆ. ಆದರೆ ನಮ್ಮ ರಾಜದಲ್ಲಿ ಶೇ.56ರಷ್ಟು ಮೀಸಲಾತಿ ಜಾರಿ ಮಾಡಲು ಏನು ಅಡ್ಡಿ ಎಂದು ಪ್ರಶ್ನಿಸಿದ ಅವರು, 2019 ಚುನಾವಣೆ ಸಂದರ್ಭದಲ್ಲಿ ಸದಾಶಿವ ಆಯೋಗದ ವರದಿ ಜಾರಿ ಮಾಡದ್ದೇ ಸೋಲಿಗೆ ಕಾರಣ ಎಂದು ಒಪ್ಪಿಕೊಂಡಿದ್ದೀರಿ. ಮತ್ತೇ ಕಾಂಗ್ರೆಸ್‌ಗೆ ಶೋಷಿತ ಸಮುದಾಯಗಳು ನಿಮಗೆ ತಕ್ಕ ಪಾಠ ಕಲಿಸಲಿದೆ. ಸದ್ಯದಲ್ಲಿ ನಡೆಯುವ ಉಪಚುನಾವಣೆಯಲ್ಲೂ ಕಾಂಗ್ರೆಸ್ ಸೋಲಿಸುತ್ತೇವೆ ಎಂದು ಎಚ್ಚರಿಸಿದರು.

ಒಳಮೀಸಲಾತಿ ಜಾರಿಗೆ ಒತ್ತಾಯಿಸಿ ಹಿರಿಯೂರಿನ ಆದಿಜಾಂಭವ ಮಠದ ಪೀಠಾಧಿಪತಿ ಶ್ರೀಷಡಕ್ಷರಮುನಿ ಸ್ವಾಮೀಜಿ ನೇತೃತ್ವದಲ್ಲಿ ಹರಿಹರದಿಂದ ಪಾದಯಾತ್ರೆ ನಡೆಯುತ್ತಿದ್ದೆ. ಮಾ.27ರಂದು ಬೆಂಗಳೂರು ತಲುಪಲಿದೆ. ಅಂದು ನಡೆಯುವ ಸಭೆಯಲ್ಲಿ ರಾಜ್ಯಾದ್ಯಂತ ಇರುವ ಮಾದಿಗ ಸಮುದಾಯದ ಹೋರಾಟಗಾರರು ಭಾಗವಹಿಸಿ ಸರಕಾರವನ್ನು ಎಚ್ಚರಿಸುವಂತೆ ಮನವಿ ಮಾಡಿದರು.

ಗೋಷ್ಠಿಯಲ್ಲಿ ಹುಬ್ಬಳ್ಳಿ ಗ್ರಾಮಾಂತರ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ವೀರಭದ್ರಪ್ಪ ಹಾಲಹರವಿ, ಮಾದಿಗ ಮೀಸಲಾತಿ ಹೋರಾಟ ಸಮಿತಿಯ ಜಿಲ್ಲಾಧ್ಯಕ್ಷ ಸಿ.ಕೆ.ಪಾಪಯ್ಯ, ಶಿವಶರಣ ಮಾದರ ಚನ್ನಯ್ಯ ಸೇವಾ ಸಮಿತಿ ಅಧ್ಯಕ್ಷ ಕೃಷ್ಣ, ನಾಗೇಂದ್ರ, ಪ್ರಸನ್ನ ಚಕ್ರವರ್ತಿ ಇತರರಿದ್ದರು.

# ಕಣ್ಣು ಪ್ರತಿಯೊಬ್ಬರಿಗೂ ಪ್ರಮುಖವಾದ ಅಂಗ

**ಕೆ.ಆರ್.ನಗರ:** ಕಣ್ಣು ಪ್ರತಿಯೊಬ್ಬರಿಗೂ ಪ್ರಮುಖವಾದ ಅಂಗವಾಗಿದೆ ಎಂದು ಸಾಲಿಗ್ರಾಮ ಸಮುದಾಯ ಆರೋಗ್ಯ ಕೇಂದ್ರದ ವೈದ್ಯ ಡಾ.ಕೀರ್ತಿ ಹೇಳಿದರು.




ಅವರು ಸಾಲಿಗ್ರಾಮ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಕರುನಾಡ ದೀಪ ಸೇವಾ ಟ್ರಸ್ಟ್, ಗ್ರಾಮೀಣ ನಿಧಿ ಸೌಹಾರ್ದ ಕೋ ಆಪರೇಟಿವ್ ಸೊಸೈಟಿ, ಬೆಂಗಳೂರಿನ ಶಂಕರ ಕಣ್ಣಿನ ಆಸ್ಪತ್ರೆ, ಜಿಲ್ಲಾ ಅಂಧತ್ವ ನಿಯಂತ್ರಣ ವಿಭಾಗ, ಸಾಲಿಗ್ರಾಮ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ ಇವರುಗಳ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ಉಚಿತ ನೇತ್ರ ಶಸ್ತ್ರ ಚಿಕಿತ್ಸಾ ಶಿಬಿರದಲ್ಲಿ ಪಾಲ್ಗೊಂಡು ಮಾತನಾಡಿದರು.

ಗ್ರಾಮೀಣ ಪ್ರದೇಶದಲ್ಲಿನ ಜನರು ತಮ್ಮ ಬದುಕಿನ ದಿನನಿತ್ಯದ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಾಗ ಕಣ್ಣಿನ ಬಗ್ಗೆ ಅತಿಹೆಚ್ಚಿನ ಜಾಗೃತಿ ವಹಿಸಬೇಕಾದ ಅಗತ್ಯತೆ ಪ್ರಮುಖವಾಗಿದೆ. ಮಕ್ಕಳು ಆಟವಾಡುವ ಸಮಯದಲ್ಲಿ ಅವರುಗಳ ಮೇಲೆ ಪೋಷಕರುಗಳು ಸದಾ ಎಚ್ಚರಿಕೆ ವಹಿಸಬೇಕು. ಇಲ್ಲದಿದ್ದರೆ ಅವಘಡಗಳು ಸಂಭವಿಸುವ ಸಾಧ್ಯತೆ ಇರುತ್ತದೆ ಎಂದರು.

**ಉಚಿತ ನೇತ್ರ ಶಸ್ತ್ರ ಚಿಕಿತ್ಸಾ ಶಿಬಿರ**

ಆರೋಗ್ಯಕ್ಕೆ ಸಂಬಂಧಿಸಿದಂತೆ ಯಾವುದೇ ವಿಷಯಕ್ಕೂ ಯಾರೂ ಕೂಡ ಎಂತಹ ಸಂದರ್ಭದಲ್ಲಿಯೂ ತಾತ್ಸರ ತೋರದೆ ಕೂಡಲೇ ವೈದ್ಯರ ಭೇಟಿ ಮಾಡಿ ಅವರಿಂದ ಸಲಹೆಯನ್ನು ಪಡೆದು ಆರೋಗ್ಯದ ಕಡೆಗೆ ಹೆಚ್ಚಿನ ಗಮನವನ್ನು ಹರಿಸಬೇಕು ಎಂದರು. ಸಂಘ ಸಂಸ್ಥೆಗಳು ಆರೋಗ್ಯಕ್ಕೆ ಸಂಬಂಧಿಸಿದಂತಹ ವಿವಿಧ ಉಚಿತ ಶಿಬಿರಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಿನ ಮಟ್ಟದಲ್ಲಿ ಮಾಡುವ ಮೂಲಕ ಗ್ರಾಮಾಂತರ ಪ್ರದೇಶದ ಜನರಿಗೆ ಉತ್ತಮ ಆರೋಗ್ಯ ಸೇವೆಯು ಸಿಗುವಂತೆ ಮಾಡಬೇಕು ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಕರುನಾಡ ದೀಪ ಸೇವಾ ಟ್ರಸ್ಟ್ ಅಧ್ಯಕ್ಷ ಕೆ.ಟಿ.ಮೋಹನ್ ಕುಮಾರ್, ಗ್ರಾಮೀಣ ನಿಧಿ ಸೌಹಾರ್ದ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷ ಕೆ.ಆರ್.ಶ್ಯಾಮಸುಂದರ್, ಗ್ರಾ.ಪಂ. ಮಾಜಿ ಉಪಾಧ್ಯಕ್ಷ ಚಿಕ್ಕನಾಯಕನಹಳ್ಳಿ ವಾಸು, ವೀರಶೈವ ಲಿಂಗಾಯತ ಮಹಾಸಭಾದ ದಡದಹಳ್ಳಿನಟರಾಜ್, ಆರೋಗ್ಯ ರಕ್ಷಾ ಸಮಿತಿ ಸದಸ್ಯರಾದ ಲಕ್ಕಿ ಕುಪ್ಪೆ ಮಂಜೇಗೌಡ, ದಿನೇಶ್, ಮುಖಂಡ ಕರ್ತಾಳು ಧರ್ಮೇಶ್, ಗ್ರಾಮೀಣ ನಿಧಿ ಸೌಹಾರ್ದ ಕೋ ಆಪರೇಟಿವ್ ಸೊಸೈಟಿಯ ನಿರ್ದೇಶಕರಾದ ಎಂ.ಎಸ್.ನರಸಿಂಹ, ಮಂಜುನಾಥ, ಕುಮಾರ್, ಸಿಇಒ ಸಿಂಧೂ ಮಂಜುನಾಥ್, ಮಮತ, ಶಂಕರ ಕಣ್ಣಿನ ಆಸ್ಪತ್ರೆಯ ಶ್ರೀಕಂಠಮೂರ್ತಿ, ತೇಜ, ಫರಿದಾ, ಹರೀಶ್, ಮೋಹನ್, ಶಿವು, ನೇತ್ರಾಧಿಕಾರಿ ಕೆ.ಎಸ್.ಶೇಖರ್, ಆಸ್ಪತ್ರೆಯ ನೌಕರರು ಹಾಗೂ ಸಿಬ್ಬಂದಿ ವರ್ಗದವರು ಇದ್ದರು.

# ಗಣತಿ ಕಾರ್ಯಕ್ಕೆ ಸಹಕರಿಸಲು ಡೀಸಿ ಮನವಿ

**ರಾಮನಗರ:** ಭಾರತೀಯ ಜನಗಣತಿ ಕಾಯ್ದೆ 1948ರ ಸೆಕ್ಷನ್ 4ರ ಉಪವಿಭಾಗ (2)ರ ಅಡಿಯಲ್ಲಿ ನೀಡಲಾದ ಅಧಿಕಾರವನ್ನು ಚಲಾಯಿಸಿ (1948ರ ಕಾಯ್ದೆ ಸಂಖ್ಯೆ 37) ಕರ್ನಾಟಕ ಸರ್ಕಾರವು ಜನಗಣತಿ–2027 ಕಾರ್ಯವು 1ನೇ ಹಂತದಲ್ಲಿ ಮನೆ ಪಟ್ಟಿ– 2026ರ ಏಪ್ರಿಲ್ ನಿಂದ 2026ರ ಸೆಪ್ಟೆಂಬರ್ ರವರೆಗೆ ಹಾಗೂ 2ನೇ ಹಂತದಲ್ಲಿ ಜನಗಣತಿ ಕಾರ್ಯ 2027ರ ಫೆಬ್ರವರಿ ಯಿಂದ ನಡೆಸಲು ತೀರ್ಮಾನಿಸಿ ಆದೇಶಿಸಲಾಗಿರುತ್ತದೆ.

ಆದರಂತೆ 2026ರ ಏಪ್ರಿಲ್ 1 ರಿಂದ 15ರ ವರೆಗೆ ಸಾರ್ವಜನಿಕರು ಸ್ವಯಂ ಘೋಷಿಸಲು ಸರ್ಕಾರದಿಂದ ಅನುವು ಮಾಡಿದ್ದು, ಸಾರ್ವಜನಿಕರು ತಮ್ಮ ಮೊಬೈಲ್‌ನಿಂದ ಖುದ್ದಾಗಿ http://se.census.gov.in ಲಿಂಕ್ ಮುಖಾಂತರ ಮನೆ ಗಣತಿಯ ಕುರಿತು ಕೇಳಲಾಗುವ ಪ್ರಶ್ನೆಗಳಿಗೆ ಉತ್ತರಿಸಿ, ತದನಂತರ ಜನರೇಟ್ ಆಗುವ ಯೂನಿಕ್ ನಂಬರ್ ಅನ್ನು ಏಪ್ರಿಲ್ 16 ರಿಂದ ಭೌತಿಕವಾಗಿ ಗಣತಿದಾರರು ಮನೆಗಣತಿ ಕಾರ್ಯಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ನೀಡುವುದು ಹಾಗೂ ಸ್ವಯಂ ಗಣತಿ ಘೋಷಿಸದೇ ಇರುವ ಸಾರ್ವಜನಿಕರು ಸೂಕ್ತ ಮಾಹಿತಿಯನ್ನು ಗಣತಿದಾರರುಗಳಿಗೆ ನೀಡಿ, ಮನೆ ಗಣತಿ ಕಾರ್ಯಕ್ಕೆ ಸಹಕರಿಸುವಂತೆ ಬೆಂಗಳೂರು ದಕ್ಷಿಣ ಜಿಲ್ಲಾ ಪ್ರಧಾನ ಜನಗಣತಿ ಅಧಿಕಾರಿಗಳೂ ಆಗಿರುವ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ಕೋರಿದ್ದಾರೆ.



# ಕಳಪೆ ಗುಣಮಟ್ಟದ ಸರಕು ಖರೀದಿಸಿ ಮೋಸ ಹೋಗ್ಬೇಡಿ: ನ್ಯಾ| ಅಣ್ಣಯ್ಯನವರ್





**ರಾಮನಗರ:** ರೈತರು, ಗ್ರಾಹಕರು, ಸಾರ್ವಜನಿಕರು ಸರಕುಗಳನ್ನು ಖರೀದಿ ಸುವಾಗ ಅದರ ಸಂಪೂರ್ಣ ಮಾಹಿತಿ ತಿಳಿದು, ಎಚ್ಚರಿಕೆಯಿಂದ ಖರೀದಿಸುವಂತೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ನ್ಯಾ. ಎಂ.ಎಚ್. ಅಣ್ಣಯ್ಯನವರ್ ಅವರು ಕರೆ ನೀಡಿದರು.

ಅವರು ಮಾ.25ರ ಬುಧವಾರ ನಗರದ ಎಂ.ಎಚ್. ಕಾಲೇಜು ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಗ್ರಾಹಕ ಮಾಹಿತಿ ಕೇಂದ್ರ, ಎಂ.ಎಚ್. ಕಾಲೇಜು ಹಾಗೂ ಜಿಲ್ಲಾ ವಕೀಲರ ಸಂಘದ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ ವಿಶ್ವ ಗ್ರಾಹಕ ದಿನಾಚರಣೆ–2026ಅನ್ನು ಉದ್ಘಾಟಿಸಿ ಮಾತನಾಡಿದರು.

ರೈತರು, ಗ್ರಾಹಕರು ಅಂಗಡಿಗಳಲ್ಲಿ ಕಲಬೆರಕೆ ಹಾಗೂ ಕಳಪೆ ಗುಣಮಟ್ಟದ ಸರಕುಗಳನ್ನು ಖರೀದಿಸಿ ಮೋಸಗಳಾದ ಸಂದರ್ಭದಲ್ಲಿ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದಲ್ಲಿ ಪ್ರಕರಣ ದಾಖಲಿಸಿದರೆ, ಸಂಬಂಧಿಸಿದವರಿಂದ ಪರಿಹಾರ ಕೊಡಿಸಿಕೊಡಲು ಅನುಕೂಲವಾಗುತ್ತದೆ, ಆದ್ದರಿಂದ ಸರಕುಗಳನ್ನು ಖರೀದಿಸುವಾಗ ತಪ್ಪದೇ ರಶೀದಿಗಳನ್ನು ಪಡೆಯಬೇಕು, ಆನ್‌ಲೈನ್‌ಗಳಲ್ಲಿ ವಸ್ತುಗಳನ್ನು ಖರೀದಿಸುವ ಮುನ್ನ ಸರಿಯಾದ ಮಾಹಿತಿಗಳನ್ನು ತಿಳಿದುಕೊಳ್ಳಬೇಕು. ಆಕರ್ಷಣೀಯ ಜಾಹೀರಾತುಗಳಿಗೆ ಬೆರಗಾಗಿ ಸರಕುಗಳನ್ನು ಖರೀದಿಸಿ, ಮೋಸ ಅಥವಾ ವಂಚನೆಗೊಳಗಾಗದಂತೆ ಎಚ್ಚರವಾಗಿರಬೇಕೆಂದರು.

ಮಾರುಕಟ್ಟೆಗಳಲ್ಲಿ ನಡೆಯುವಂತಹ ಮೋಸ ಮತ್ತು ವಂಚನೆಗಳಿಗೆ ಪರಿಹಾರ ಪಡೆಯುವುದು ಹೇಗೆ ಎಂಬ ಬಗ್ಗೆ ಹೆಚ್ಚಿನ ಗ್ರಾಹಕರಿಗೆ ತಿಳಿದಿರುವುದಿಲ್ಲ. ಈ ನಿಟ್ಟಿನಲ್ಲಿ ಗ್ರಾಹಕರಿಗೆ ಇರುವಂತಹ ಹಕ್ಕುಗಳ ಮುಖಾಂತರ ಯಾವ ರೀತಿ ಸಮಸ್ಯೆಗಳಿಗೆ ಪರಿಹಾರ ಪಡೆದುಕೊಳ್ಳಬೇಕು ಎಂಬುದರ ಬಗ್ಗೆ ಜನರಿಗೆ ಮಾಹಿತಿ ನೀಡಲು, ಗ್ರಾಹಕರ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸಲು ಪ್ರತಿವರ್ಷ ಮಾರ್ಚ್ 15 ರಂದು ವಿಶ್ವ ಗ್ರಾಹಕರ ಹಕ್ಕುಗಳ ದಿನವನ್ನು ಆಚರಿಸಲಾಗುತ್ತದೆ ಎಂದು ಹೇಳಿದರು.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಸವಿತ ಪಿ.ಆರ್ ಅವರು ಮಾತನಾಡಿ, ಗ್ರಾಹಕರ ಕಾಯ್ದೆಯು ಮಗುವಿನಿಂದ ಹಿಡಿದು ವಯಸ್ಸಾಗುವವರೆಗೂ ಅನ್ವಯಿಸುತ್ತದೆ. ಯಾವುದೇ ವಸ್ತುಗಳನ್ನು ಖರೀದಿಸಿದಾಗ ಲೋಪದೋಷಗಳು ಕಂಡು ಬಂದಲ್ಲಿ ನೇರವಾಗಿ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಕ್ಕೆ ದೂರು ದಾಖಲಿಸಬಹುದು. ಅಮೆಜಾನ್, ಫ್ಲಿಪ್‌ಕಾರ್ಟ್ ನಂತಹ ಆನ್‌ಲೈನ್ ಆ?ಯಪ್‌ಗಳ ಮೂಲಕ ಖರೀದಿ ಮಾಡಿ ಆ ವಸ್ತು ಸಮಯಕ್ಕೆ ಸರಿಯಾಗಿ ಬರದಿದ್ದರೆ ಹಾಗೂ ಬದಲಾದ ವಸ್ತುಗಳು ಬಂದರೆ ಪ್ರಕರಣ ದಾಖಲಿಸಬಹುದು ಎಂದರು.

ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷರಾದ ರೇಣುಕಾದೇವಿ ದೇಶಪಾಂಡೆ ಅವರು ಮಾತನಾಡಿ, ಯಾವುದೇ ವಸ್ತುವನ್ನು ಗ್ರಾಹಕ ಹಣ ಕೊಟ್ಟು ಕೊಂಡುಕೊಂಡಾಗ ಅದಕ್ಕೆ ಮುಖ್ಯವಾಗಿ ರಶೀದಿಯನ್ನು ಕಡ್ಡಾಯವಾಗಿ ಪಡೆದುಕೊಳ್ಳಬೇಕು. ಒಂದು ವೇಳೆ ಮಾಲೀಕರು ಗ್ರಾಹಕನಿಗೆ ಕಳಪೆ ಪ್ರಮಾಣದ ವಸ್ತುಗಳನ್ನು ಕೊಟ್ಟಿದ್ದರೆ ಅವರ ಮೇಲೆ ಜಿಲ್ಲಾ ಗ್ರಾಹಕರ ಆಯೋಗದಲ್ಲಿ ಪ್ರಕರಣ ದಾಖಲು ಮಾಡಬಹುದು ಎಂದರು.

ಜಿಲ್ಲಾ ಕಾನೂನು ಮಾಪನಾ ಇಲಾಖೆಯ ಸಹಾಯಕ ನಿಯಂತ್ರಕರಾದ ಸುಜಾತ, ಜಿಲ್ಲಾ ಗ್ರಾಹಕರ ರಕ್ಷಣಾ ಪರಿಷತ್ತಿನ ಸದಸ್ಯರಾದ ಕಲಾವತಿಬಾಯಿ ಎಚ್.ಎ., ಚಂದ್ರಯ್ಯ ಕೆ., ಎಚ್. ಗೋವಿಂದಯ್ಯ ಉಪಸ್ಥಿತರಿದ್ದರು.

ಎಂ.ಎಚ್. ಕಾಲೇಜಿನ ಪ್ರಾಂಶುಪಾಲರಾದ ಗಂಗರಾಜು ಕೆ.ಎಂ. ಸ್ವಾಗತಿಸಿದರು. ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಸಹಾಯಕ ಆಡಳಿತಾಧಿಕಾರಿ ಪುಷ್ಪ ವಂದಿಸಿದರು. ಎಂ.ಎಚ್. ಕಾಲೇಜಿನ ವಿದ್ಯಾರ್ಥಿನಿ ನಿಶ್ಚಿತ ನಿರೂಪಸಿದರು.

ಎಂ.ಎಚ್. ಕಾಲೇಜಿನ ಉಪನ್ಯಾಸಕರು, ವಿದ್ಯಾರ್ಥಿಗಳು ಹಾಗೂ ಇತರರು ಉಪಸ್ಥಿತರಿದ್ದರು.

# ಕೃಷಿ ಚಟುವಟಿಕೆಗಳಿಗಾಗಿ ಕೆರೆಗಳಿಗೆ ನೀರು: ಎಸ್.ಗಂಗಾಧರ್

**ರಾಮನಗರ:** ಬಹು ಹಿಂದಿನಿಂದಲೂ ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಚನ್ನಪಟ್ಟಣದ ರೈತರ ಅನುಕೂಲಕ್ಕಾಗಿ ಸರ್ಕಾರವು ಕೆರೆಗಳಿಗೆ ನೀರು ತುಂಬಿಸುವ ಕೆಲಸ ಮಾಡುತ್ತಿದೆ, ಕ್ಷೇತ್ರದ ಶಾಸಕರು ಇದಕ್ಕೆ ಒತ್ತಾಸೆಯಾಗಿ ನಿಂತಿದ್ದಾರೆ ಎಂದು ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ಅಧ್ಯಕ್ಷ ಎಸ್. ಗಂಗಾಧರ್ ಅವರು ಹೇಳಿದರು.

ಅವರು ಮಾ. 24ರ ಮಂಗಳವಾರ ಚನ್ನಪಟ್ಟಣದ ಬಾಲಕರ ಪದವಿ ಪೂರ್ವ ಕಾಲೇಜು ಮೈದಾನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕೃಷಿ ಇಲಾಖೆ ವತಿಯಿಂದ ಆಯೋಜಿಸಲಾಗಿದ್ದ ಜಿಲ್ಲಾ ಮಟ್ಟದ ವಾಣಿಜ್ಯ ಮೇಳ–2026 ಅನ್ನು ಉದ್ಘಾಟಿಸಿ ಮಾತನಾಡಿದರು.

ಚನ್ನಪಟ್ಟಣದಲ್ಲಿ ಆಯೋಜಿಸಿರುವ ಜಿಲ್ಲಾ ಮಟ್ಟದ ವಾಣಿಜ್ಯ ಮೇಳ ಉತ್ತಮವಾದ ಕಾರ್ಯಕ್ರಮ, ಚನ್ನಪಟ್ಟಣದ ರೈತರು ಬುದ್ಧಿವಂತರು, ಈ ಭಾಗದಲ್ಲಿ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಾರೆ. ಬೆಂಗಳೂರು ದಕ್ಷಿಣ ಜಿಲ್ಲೆ ಹೈನುಗಾರಿಕೆ ಹಾಗೂ ರೇಷ್ಮೆಗೆ ದೊಡ್ಡ ಹೆಸರಾಗಿದೆ, ಚನ್ನಪಟ್ಟಣದ ಕೃಷಿಕರ ಅನುಕೂಲಕ್ಕಾಗಿ ಸರ್ಕಾರ ಕೆರೆಗಳಿಗೆ ನೀರು ತುಂಬಿಸುತ್ತಿದೆ ಎಂದು ಹೇಳಿದರು.

ಇಂದು ಕೃಷಿ ನಿರ್ಲಕ್ಷಿತ ಕ್ಷೇತ್ರವಾಗಿದೆ. ರೈತರ ಮಕ್ಕಳಿಗೆ ಹೆಣ್ಣು ಸಿಗುವುದು ಕಷ್ಟವಾಗಿದೆ. ಇಂದು ಡಿಗ್ರಿ, ಡಬಲ್ ಡಿಗ್ರಿ ಪಡೆದವರು ಸೇರಿದಂತೆ ಶಿಕ್ಷಿತರಿಗೆ ಉದ್ಯೋಗ ಸಿಗುವುದೇ ಕಷ್ಟವಾಗಿದೆ. ಆದರೆ ಕೃಷಿ ಕ್ಷೇತ್ರ ಹಾಗಲ್ಲ, ತನ್ನನ್ನು ನಂಬಿದ ಎಲ್ಲರಿಗೂ ಕೆಲಸ ಕೊಡುವ ಕ್ಷೇತ್ರವಾಗಿದೆ. ನಮ್ಮ ದೇಶದ ಜಿಡಿಪಿ ಉತ್ತಮ ಮಟ್ಟದಲ್ಲಿರಲು ಕೃಷಿಯೇ ಕಾರಣ. ಚನ್ನಪಟ್ಟಣ ತಾಲೂಕಿನಲ್ಲಿ ವಾಣಿಜ್ಯ ಬೆಳೆಗೆ ಹೆಚ್ಚಿನ ಉತ್ತೇಜನವಿದೆ, ರಾಗಿಯನ್ನು ಹೆಚ್ಚಾಗಿ ಬೆಳೆಯಲಾಗುತ್ತದೆ. ಭತ್ತ ಕಡಿಮೆ, ತೆಂಗು ಉತ್ತಮವಾಗಿದೆ ಹಾಗೂ ಹೇರಳವಾಗಿ ತರಕಾರಿಗಳನ್ನು ಬೆಳೆಯಲಾಗುತ್ತಿದೆ ಇದಕ್ಕೆ ಮುಖ್ಯ ಕಾರಣ ಬೆಂಗಳೂರಿನ ಮಾರುಕಟ್ಟೆ. ಆದ್ದರಿಂದ ಅಧಿಕಾರಿಗಳು, ರೈತರು ಯಾವ ಬೆಳೆಯನ್ನು ಬೆಳೆದರೆ ಹೆಚ್ಚು ಆದಾಯ ಬರುತ್ತದೆ ಎಂಬುದನ್ನು ತಿಳಿಸಿಕೊಡಬೇಕು ಎಂದು ಹೇಳಿದರು.

ದುರಾಸೆಗೆ ವಿಪರೀತವಾದ ರಾಸಾಯನಿಕ ಗಳನ್ನು ಬಳಸಿ ಬೆಳೆ ಬೆಳೆದರೆ ಅವು ಸಾಕಷ್ಟು ರೋಗಗಳಿಗೆ ಕಾರಣವಾಗುತ್ತದೆ. ಸಾವಯವ ಕೃಷಿಯಿಂದ ನಮ್ಮ ಮುಂದಿನ ಪೀಳಿಗೆಗೆ ಈ ಭೂಮಿಯನ್ನು ಉತ್ತಮ ಸ್ಥಿತಿಗೆ ಬಿಡಬಹುದು, ಸಾವಯವದೊಂದಿಗೆ ಸಿರಿಧಾನ್ಯಗಳನ್ನು ಬೆಳೆಯಬಹುದಾಗಿದೆ. ಕೃಷಿಯಲ್ಲಿ ಸಾಕಷ್ಟು ಸಾಧನೆ ಮಾಡಬಹುದು. ಸರ್ಕಾರದೊಂದಿಗೆ ರೈತರು ಕೈಜೋಡಿಸಬೇಕು. ಹೆಚ್ಚಿನ ಸಂಖ್ಯೆಯಲ್ಲಿ ಯುವಕರು ಕೃಷಿ ಕ್ಷೇತ್ರಕ್ಕೆ ಬರಬೇಕು. ಕೃಷಿ ಉತ್ತಮವಾಗಬೇಕೆಂದರೆ ಕೃಷಿ ಉದ್ಯಮವಾಗಿ ಬದಲಾಗಬೇಕು, ಕೃಷಿಯಲ್ಲಿ ಕಷ್ಟಗಳೂ ಇವೆ, ಆದರೆ ಇಂದು ಸಾಕಷ್ಟು ವೈಜ್ಞಾನಿಕ ವಿಧಾನಗಳಿದ್ದು ಅವುಗಳನ್ನು ಕೃಷಿಯಲ್ಲಿ ಅಳವಡಿಸಿಕೊಳ್ಳಬೇಕು. ರೈತರ ಮುನ್ನಡೆಯಿಂದ ಅಭಿವೃದ್ಧಿ ಸಾಧ್ಯ ಎಂದು ಅವರು ಹೇಳಿದರು.

ಮಳವಳ್ಳಿಯ ಸಂಪೂರ್ಣ ಸಾವಯವ ಕೃಷಿಕರ ಸಂಘದ ಅಧ್ಯಕ್ಷರಾದ ಮಹೇಶ್ ಕುಮಾರ್ ಮಾತನಾಡಿದರು. ಟಿ.ಎಂ.ಎಫ್. ಎಂ.ಇ ಯೋಜನೆಯ ಜಿಲ್ಲಾ ಸಂಪನ್ಮೂಲ ವ್ಯಕ್ತಿ ಕುಮುದಾ, ಕನಕಪುರದ ಆರ್ಗಾನಿಕ್ ಪ್ರೊಡ್ಯೂಸರ್ ಕಂಪನಿಯ ಸಿ.ಇ.ಓ ಸುಜಯ್, ಪ್ರಮೋದ್ ಕುಮಾರ್ ಅವರು ಉಪನ್ಯಾಸ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲೆಯಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದ ಬೆಳೆ ಸಮೀಕ್ಷೆಯ ಖಾಸಗಿ ನಿವಾಸಿಗಳನ್ನು, ಉತ್ತಮ ಕೃಷಿ ಮಾಡುತ್ತಿರುವ ರೈತರಿಗೆ ಸನ್ಮಾನಿಸಲಾಯಿತು.


ಚನ್ನಪಟ್ಟಣ ನಗರಸಭೆ ಅಧ್ಯಕ್ಷರಾದ ನಾಗೇಶ್, ಸದಸ್ಯರಾದ ಮುನ್ನಾವರ್, ಚನ್ನಪಟ್ಟಣ ತಾಲ್ಲೂಕಿನ ಕೃಷಿಕ ಸಮಾಜದ ಅಧ್ಯಕ್ಷರಾದ ರಾಜೇಶ್, ಜಂಟಿ ಕೃಷಿ ನಿರ್ದೇಶಕರಾದ ಅಂಬಿಕಾ, ಪ್ರಭಾರ ಕೃಷಿ ಉಪ ನಿರ್ದೇಶಕರಾದ ವನಿತಾ, ಕೃಷಿ ವಿಜ್ಞಾನ ಕೇಂದ್ರ ವಿಜ್ಞಾನಿಗಳಾದ ದೀಪಾ ಪೂಜಾರ್, ತಾರಿಣಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಚನ್ನಪಟ್ಟಣ ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕರಾದ ಅರ್ಪಣ ಸ್ವಾಗತಿಸಿದರು. ಜಾರಿದಳದ ಸಹಾಯಕ ನಿರ್ದೇಶಕರಾದ ರಮೇಶ್ ವಂದಿಸಿದರು. ಸಹಾಯಕ ಕೃಷಿ ನಿರ್ದೇಶಕರಾದ ಶಶಿಕಲಾ ನಿರೂಪಿಸಿದರು.

ವಸ್ತು ಪ್ರದರ್ಶನ ಮಳಿಗೆಯಲ್ಲಿ ಅಪಾರ ಸಂಖ್ಯೆಯಲ್ಲಿ ರೈತರು ಭಾಗವಹಿಸಿ ಮಾಹಿತಿ ಪಡೆದರು.




# ಆಯ್ಕೆ ನಮ್ಮದಾಗಿರುವಾಗ"



| ಸತ್ಯಶ್ರೀ ಗಣಂಗೂರು ಮಂಡ್ಯ

ನಾವು ಯಾವುದೇ ರುಚಿಕರವಾದ ತಿಂಡಿಗಳನ್ನ ಆಯ್ಕೆ ಮಾಡಿಕೊಂಡಿದ್ದೇವೆ ಅಂದಾದ್ಮೇಲೆ ಯಾಕೆ ಅದನ್ನೇ ಆಯ್ಕೆ ಮಾಡಿಕೊಳ್ಳುತ್ತೇವೆ ಎಂಬ ಪ್ರಶ್ನೆ ಮೂಡುತ್ತದೆ.

ನಾವು ಅದನ್ನ ಆಯ್ಕೆ ಮಾಡಿದ್ದೇವೆ ಅದಕ್ಕೋಸ್ಕರ ನಾವು ಅದನ್ನ ಇಷ್ಟ ಪಡಲೇಬೇಕು ಆದ್ದರಿಂದ ಅದರಿಂದ ಆಗುವ ಅನಾರೋಗ್ಯವನ್ನು ಸಹ ನಾವೇ ಸ್ವೀಕರಿಸಬೇಕು ಅಲ್ಲವೇ?

ಹಾಗೆ ಮನುಷ್ಯನ ವ್ಯಕ್ತಿತ್ವವು ಸಹ ನಾವು ಯಾವ ವ್ಯಕ್ತಿಯನ್ನ ಗಂಡನಾಗಿ, ಮಗನಾಗಿ, ಸ್ನೇಹಿತನಾಗಿ ಅಥವಾ ಹೆಂಡತಿಯಾಗಿ,ಮಗಳಾಗಿ ಸ್ನೇಹಿತೆ ಯಾಗಿ, ಆಯ್ಕೆ ಮಾಡಿಕೊಂಡಿದ್ದೇವೆ ಆದ್ದರಿಂದ ಅವರಿಂದ ಆಗುವ ನೋವುಗಳು ಹಿಂಸೆಗಳು, ಆತಂಕ ಭಯ ದುಃಖ ನೋವು, ಕೊರತೆ ಒಂಟಿತನ, ಎಲ್ಲವನ್ನು ಬಹಳ ಪ್ರೀತಿಯಿಂದ ಸ್ವೀಕರಿಸಬೇಕು ಜೊತೆಗೆ ಇವೆಲ್ಲವನ್ನೂ ನಾನೇ ನಿರ್ವಹಿಸುವೆ ಎಂಬುವ ಆತ್ಮ ವಿಶ್ವಾಸವು ನಮ್ಮಲ್ಲಿರಬೇಕು.

ನಾವು ಬೇರೆ ವ್ಯಕ್ತಿಯಿಂದ ಮೋಸ ಹೋಗಿದ್ದೇವೆ ಎಂದರೆ ಅದು ನಾವು ಯಾವುದೋ ಜನ್ಮದ ಕರ್ಮದ ಫಲ ಎಂದು ಭಾವಿಸಬೇಕೆ ವಿನಹ ಜೊತೆಗೆ ನಾವು ಮೋಸ ಹೋದೆ ಎಂಬ ಭಾವನೆಎಲ್ಲಿ ಇರಬಾರದು . ನಮ್ಮನ್ನ ನಾವು ಪಾಪದ ವ್ಯಕ್ತಿಯಾಗಿ, ನೋವಿನ ವ್ಯಕ್ತಿಯಾಗಿ, ನೋಡದೆ ಇಂತಹ ಸಂದರ್ಭದಲ್ಲಿ ನಾನು ಕಲಿತಂತ ಪಾಠ ಏನು ಎಂಬುವ ಚಿಂತನೆ ಮಾಡಬೇಕು.



ನಮ್ಮ ಬಗ್ಗೆ ನಾವು ಆಯ್ಕೆ ಮಾಡಿಕೊಳ್ಳುವ ಮಾತುಗಳು ವಿಚಾರಗಳು ನಿರ್ಧಾರಗಳು ಭಾವನೆಗಳು ನಮ್ಮ ಪ್ರಸ್ತುತ ಸಂತೋಷವನ್ನು ನೆಮ್ಮದಿಯನ್ನ ಆರೋಗ್ಯವನ್ನ ಹಾಳು ಮಾಡುವ ಹಾಗೆ ಇರಬಾರದು ಬದಲಾಗಿ ಮಾತಿನ ಮೇಲೆ ಸ್ಥಿರತೆಯನ್ನ ಕಾಪಾಡಿಕೊಂಡಾಗ ನಮ್ಮ ಆಯ್ಕೆಗಳೇ ನಮ್ಮ ಔಷಧಿಯಾಗಿ ಮಾರ್ಪಾಡಾಗುತ್ತದೆ.

ಹಾಗಾಗಿ ಜೀವನದಲ್ಲಿ ನಮ್ಮ ಆಯ್ಕೆ ಪಟ್ಟಿಗಳು ಸರಿಯಾಗಿ ಇರಬೇಕಾದರೆ ಮೊದಲು ನಮ್ಮನ್ನು ನಾವು ಪ್ರೀತಿಸಬೇಕು ಸ್ವಯಂ ಪ್ರೀತಿಯ ಮೂಲಕವೇ ಉತ್ತಮ ಆಯ್ಕೆಗಳನ್ನು ಸಹ ಮಾಡಲು ಸಾಧ್ಯವಾಗಿ ನಮ್ಮನ್ನು ಯಶಸ್ವಿಯತ್ತ ನೆಮ್ಮದಿಯತ್ತ ಆರೋಗ್ಯದತ್ತ ಕರೆದುಯಲು ಸಹಾಯ ಮಾಡುತ್ತವೆ.

# ಮಹಿಳೆಗೇನು ಬೇಕು ಗೊತ್ತೇ?



| ವೀಣಾ ಹೇಮಂತ್‌ಗೌಡ ಪಾಟೀಲ್

ಮಾಮ್.... ನಮ್ಮಿಬ್ಬರಿಗೂ ವಿಪರೀತ ಕೆಲಸದ ಒತ್ತಡ ಇದ್ದಾಗ ಯಾವುದೇ ರೀತಿಯ ಗಿಲ್ಟ್ ಇಲ್ಲದೆ ಹೊರಗಿನಿಂದ ಊಟಕ್ಕೆ ಆರ್ಡರ್ ಮಾಡಿ ತರಿಸಿಕೊಳ್ಳುತ್ತೇವೆ. ಅನುಕೂಲವಿದ್ದಾಗ ನಾವಿಬ್ಬರೂ ಸೇರಿ ಅಡುಗೆಯನ್ನು ಮಾಡುತ್ತೇವೆ. ನಾನು ಅಡುಗೆ ಮಾಡಿದರೆ ನನ್ನ ಗಂಡ ಪಾತ್ರೆ ತೊಳೆಯುತ್ತಾನೆ. ಮನೆ ಕೆಲಸ ಕೂಡ ಅಷ್ಟೇ ಇಬ್ಬರು ಹಂಚಿಕೊಂಡು ಮಾಡುತ್ತೇವೆ ಎಂದು ಇತ್ತೀಚೆಗಷ್ಟೇ ಅಂತರ್ಜಾತೀಯ ವಿವಾಹವಾದ ನನ್ನ ವಿದ್ಯಾರ್ಥಿನಿ ಹೇಳಿದಾಗ ಅಬ್ಬ! ಈಗಲಾದರೂ ಹೆಣ್ಣು ಮಕ್ಕಳು ತಮ್ಮ ಮನದ ಭಾವನೆಗಳನ್ನು ನಿರ್ದಾಕ್ಷಿಣ್ಯವಾಗಿ ಹೇಳಿಕೊಳ್ಳುವಂತಹ ನಡೆದುಕೊಳ್ಳುವಂತಹ ಒಂದೆರಡು ಘಟನೆಗಳು ಅಲ್ಲಲ್ಲಿ ಕಾಣಸಿಗುತ್ತಿವೆ ಎಂದು ತುಸು ನೆಮ್ಮದಿಯಾಯಿತು. ಅಂತೆಯೇ ತಮಗೆ ಬೇಕಾದಂತೆ ತಮ್ಮ ಬದುಕನ್ನು ರೂಪಿಸಿಕೊಳ್ಳುತ್ತಿರುವ ಆ ಪುಟ್ಟ ದಂಪತಿಗಳನ್ನು ಕಂಡು ನೆಮ್ಮದಿ ಹಾಗೂ ತೃಪ್ತಿಯ ನೆಟ್ಟುಸಿರು ಬಿಡುವಂತಾಯಿತು.... ಇಷ್ಟೇ ಅಲ್ಲವೇ ಪ್ರತಿ ಹೆಣ್ಣು ಬಯಸುವುದು.

ಪ್ರತಿ ವರ್ಷವೂ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಮಯದಲ್ಲಿ ಹೆಣ್ಣು ಮಕ್ಕಳು ಬಲಿಷ್ಠರಾಗಲಿ ಎಂದು ಕರೆ ನೀಡುತ್ತಾರೆ... ನಿಜ ಹೇಳಬೇಕೆಂದರೆ ಹೆಣ್ಣು ಮಕ್ಕಳು ಎಲ್ಲಾ ಸಮಯದಲ್ಲಿಯೂ ಬಲಿಷ್ಠರಾಗುವ ಅವಶ್ಯಕತೆ ಇಲ್ಲ.ಪ್ರತಿ ವಿಷಯದಲ್ಲೂ ಮಹಿಳೆ ಗಟ್ಟಿಯಾಗಬೇಕಾಗಿಲ್ಲ, ಆದರೆ ಆಕೆ ಎಲ್ಲ ಸಮಯದಲ್ಲಿಯೂ ಕೂಡ ಸುರಕ್ಷತತೆಯನ್ನು ಅನುಭವಿಸಬೇಕು... ಅದೇ ಮುಖ್ಯವಾಗಿ ಬೇಕಾಗಿರುವುದು.

ತನ್ನ ಅನಿಸಿಕೆಗಳನ್ನು ಮುಕ್ತವಾಗಿ ಹೇಳಿಕೊಳ್ಳುವ, ತನ್ನ ಹೇಳಿಕೆಯ ಮೂಲಕ ತನ್ನ ವ್ಯಕ್ತಿತ್ವವನ್ನು ಅಳೆಯುವ ಜನರ ಮಾನಸಿಕತೆಯಿಂದ ಆಕೆಗೆ ಸುರಕ್ಷಿತತೆ ಬೇಕು.

ತನ್ನ ಹೇಳಿಕೆಗಳನ್ನು ತಿರುಚಿ ಮಾತನಾಡುವ ಜನರಿಂದ, ಅವುಗಳಲ್ಲಿ ತಮಗೆ ಬೇಕಾದ ಮತ್ತೊಂದು ಅರ್ಥವನ್ನು ಹುಡುಕುವ ಜನರಿಂದ ಆಕೆಗೆ ಸುರಕ್ಷಿತತೆ ಬೇಕು.

ಅಯ್ಯೋ, ಇಷ್ಟೊತ್ತು ಮಲಗಿಬಿಟ್ಟೆ ಅತ್ತೆ ಮಾವ ಏನೆಂದುಕೊಳ್ಳುತ್ತಾರೋ? ಗಂಡ ಮಕ್ಕಳಿಗೆ ಏನನ್ನೂ ಮಾಡಿಕೊಡಲು ಆಗಲಿಲ್ಲ ಅಷ್ಟಕ್ಕೂ ಅವರೆಲ್ಲ ತಮ್ಮ ಕೆಲಸ ಕಾರ್ಯಗಳಿಗೆ ಹೋದ ಮೇಲೆ ನಾನು ರೆಸ್ಟ್ ಮಾಡಬೇಕಿತ್ತು ಎಂದು ತನ್ನನ್ನು ತಾನು ದೂಷಿಸಿಕೊಳ್ಳುವ ಆಕೆಗೆ ಬೇಕಾದ ಪ್ರಮಾಣದ ನಿದ್ದೆಯನ್ನು ಮಾಡಲು, ಬೇಕಾದಷ್ಟು ಸಮಯವನ್ನು ವಿನಿಯೋಗಿಸುವ ಸುರಕ್ಷಿತತೆ ಬೇಕಾಗಿರುವುದು. ಅಯ್ಯೋ ನಾನು ಹೀಗೆ ಮಲಗಿದರೆ ಮನೆಯ ಜನರು ಏನು ತಿಳಿದುಕೊಳ್ಳುತ್ತಾರೆ ಎಂಬ ಚಿಂತೆ ಇಲ್ಲದೆ, ತಪ್ಪಿತಸ್ಥ ಭಾವನೆ ಹೊಂದದೆ ಆಕೆ ವಿಶ್ರಾಂತಿ ಪಡೆಯುವ ಸ್ವಾತಂತ್ರ್ಯ ಆಕೆಗೆ ಬೇಕು.



ತನ್ನ ಸೋಲನ್ನು ಅತ್ಯಂತ ಸಹಜವಾಗಿ ಸ್ವೀಕರಿಸುವ ಸೋಲಿಗೆ ಯಾವುದೇ ರೀತಿಯ ನಾಚಿಕೆ ಪಟ್ಟುಕೊಳ್ಳದೆ,, ತಮ್ಮ ಸೋಲಿನ ಕುರಿತು ಅಂಜಿಕೆ, ಕಳವಳ ಮತ್ತು ಅವಮಾನಗಳನ್ನು ಹೊಂದದೆ ಇರುವ ಅವಶ್ಯಕತೆ ಇದೆ ಆಕೆಯ ಸೋಲಿಗೆ ಯಾವುದೇ ರೀತಿಯ ಠರಾವುಗಳನ್ನು ಪಾಸು ಮಾಡದೇ, ಬದುಕಿನ ಸಹಜ ಪ್ರಕ್ರಿಯೆಗಳಲ್ಲಿ ಇದು ಕೂಡ ಎಂದು ಭಾವಿಸುವಂಥ ಜನರ ಮಧ್ಯದಲ್ಲಿ ಆಕೆ ಸುರಕ್ಷಿತತೆಯನ್ನು ಅನುಭವಿಸಬೇಕು.

ಸೋಲು ಕೂಡ ಆಕೆಗೆ ಒಂದು ರೀತಿಯ ಧೈರ್ಯವನ್ನು ತುಂಬಿ ಮುಂದಿನ ಗೆಲುವಿಗಾಗಿ ಪ್ರಯತ್ನಿಸುವ ಮೆಟ್ಟಿಲಾಗುವಂತೆ ಭರವಸೆ ನೀಡುವ ಪ್ರೋತ್ಸಾಹಿಸುವ ಆತ್ಮೀಯ ವಲಯದ ಮಧ್ಯದಲ್ಲಿ ಆಕೆ ಸುರಕ್ಷಿತತೆಯನ್ನು ಅನುಭವಿಸಬೇಕು.

ತನ್ನ ಮನದಲ್ಲಿ ಆಗುತ್ತಿರುವ ಆಂದೋಲನಗಳನ್ನು, ಕಳವಳಗಳನ್ನು ಮುಕ್ತವಾಗಿ ಹೇಳಿಕೊಳ್ಳುವ ಸ್ವಾತಂತ್ರ್ಯ ಆಕೆಯದಾಗಬೇಕು. ಒಂದೊಮ್ಮೆ ಅತ್ಯಂತ ಮುಕ್ತವಾಗಿ ತನ್ನ ಮನದ ಅನಿಸಿಕೆಗಳನ್ನು ಆಕೆ ಹೇಳಿಕೊಂಡಾಗ ಅದನ್ನು ಯಾವುದೇ ರೀತಿಯಲ್ಲಿ ಜಡ್ಜ್ ಮಾಡದೆ ಸಾಂಪ್ರದಾಯಿಕ ನೀತಿ ನಿಯಮಾವಳಿಗಳನ್ನು ದೂರೀಕರಿಸುತ್ತಿದ್ದಾರೆ ಎಂಬ ಭಾವದಿಂದ ನಕಾರಾತ್ಮಕವಾಗಿ ಯೋಚಿಸದೆ ಆಕೆಯ ಹೇಳಿಕೆಗಳನ್ನು ನಿರ್ಲಿಪ್ತವಾಗಿ ಕೇಳಬೇಕು.

ಒಂದೊಮ್ಮೆ ಆಕೆಯ ಭಾವನಾತ್ಮಕ ಹೇಳಿಕೆಗಳಿಗೆ ನಿಮ್ಮ ಉತ್ತರ ಅತ್ಯಂತ ಒರಟಾಗಿದ್ದರೆ ಆಕೆಯ ಮನಸ್ಸನ್ನು ನೋಯಿಸುವಂತಿದ್ದರೆ ಆಕೆ ಮುಂದೆ ನಿಮ್ಮ ಮುಂದೆ ತನ್ನ ಮನದ ಬೇಗುದಿಯನ್ನು ತೋಡಿಕೊಳ್ಳುವುದಿಲ್ಲ. ಅಯ್ಯೋ ಹೇಳಿಬಿಟ್ಟರೆ ಅನಾಹುತವಾಗುತ್ತದೆ ಎಂಬ ಭಾವ ಆಕೆಯಲ್ಲಿ ಮೂಡುತ್ತದೆ... ಆದ ಕಾರಣ ಹೆಣ್ಣು ಮಕ್ಕಳು ನಿಮ್ಮ ಮುಂದೆ ತಮ್ಮ ಮನದಾಳದ ಭಾವವನ್ನು ಮುಕ್ತವಾಗಿ ಹೇಳಿಕೊಳ್ಳುವಂತಹ ಪರಿಸ್ಥಿತಿಯನ್ನು ಹಾಗೂ ನಂಬಿಕೆಯನ್ನು ನೀವು ಸೃಷ್ಟಿಸಬೇಕು.

ಮಹಿಳೆಯರ ನಿಜವಾದ ಸಬಲೀಕರಣ ಆಗುವುದು ಎಲ್ಲವನ್ನೂ ಆಕೆಯೇ ತನ್ನ ಹೆಗಲ ಮೇಲೆ ಹೊರುವುದರಿಂದ ಅಲ್ಲ. ಆಕೆಯ ಕೆಲಸ ಕಾರ್ಯಗಳಲ್ಲಿ ಆಕೆಗೆ ಸಂಪೂರ್ಣವಾಗಿ ಅಲ್ಲದಿದ್ದರೂ ಕೊಂಚ ಮಟ್ಟಿನ ಸಹಾಯ ಸಹಕಾರಗಳನ್ನು ನೀಡುವುದರ ಮೂಲಕ ಖಂಡಿತವಾಗಿಯೂ ಆಕೆಗೆ ಆಸರೆಯಾಗಬಹುದು.

ಭಾವನಾತ್ಮಕವಾಗಿಯೂ ಆಕೆಯ ಧೈರ್ಯವನ್ನು ಹೆಚ್ಚಿಸಬಹುದು ಆದರೆ ಕೇವಲ ಒಣ ಭಾವನಾತ್ಮಕತೆ ಕೂಡ ಕೆಲವೊಮ್ಮೆ ಅಸಹನೆಗೆ ಕಾರಣವಾಗುತ್ತದೆ. ಬಾಯಿ ಮಾತಿನಲ್ಲಿ ಅನುಕಂಪ ತೋರಿಸುವುದರಿಂದ ಕಾರ್ಯಸಿದ್ಧಿಯಾಗುವುದಿಲ್ಲ ಕಾರ್ಯಸಿದ್ಧಿಯಾಗಲು ಕರಗಳು ಚಲಿಸುವುದು ಕೂಡ ಅಷ್ಟೇ ಮುಖ್ಯ.

ಹೆಣ್ಣು ಮಕ್ಕಳು ನಿಜವಾಗಿ ಉದ್ಯೋಗವನ್ನು ಮಾಡುವುದು ಆಕೆಗೆ ಆರ್ಥಿಕವಾಗಿ ಸಬಲತೆ ಗಳಿಸಲು ಅನುಕೂಲವಾಗುತ್ತದೆ ನಿಜ ಇದರ ಜೊತೆಗೆ ಆಕೆ ಭಾವನಾತ್ಮಕವಾಗಿ ಸಂಬಂಧಗಳಲ್ಲಿ ಸುರಕ್ಷಿತತೆಯನ್ನು ಅನುಭವಿಸುತ್ತಾಳೆ ಮುಖ್ಯವಾಗಿ ತಾನು ಯಾರ ಮೇಲೂ ಅವಲಂಬಿತವಾಗಿಲ್ಲ ಎಂಬ ಭಾವವೇ ಆಕೆಯಲ್ಲಿ ಒಂದು ರೀತಿಯ ಧೈರ್ಯವನ್ನು, ಸ್ಥೈರ್ಯವನ್ನು ಮಾನಸಿಕ ಬೆಂಬಲವನ್ನು ತುಂಬುತ್ತದೆ. ಆಕೆ ತನ್ನ ಕುಟುಂಬದವರ,ಸಂಬಂಧಿಕರ ಜೊತೆಗಿನ ಒಡನಾಟದಲ್ಲಿ ಕೆಲಸ ನಿರ್ವಹಿಸುವ ಕಾರ್ಯಕ್ಷೇತ್ರದಲ್ಲಿ ಮತ್ತು ಖುದ್ದು ತನ್ನೊಳಗೆ ತಾನು ಭಾವನಾತ್ಮಕ ಸುರಕ್ಷತೆಯನ್ನು ಅನುಭವಿಸುತ್ತಾಳೆ.

ಈ ವರ್ಷದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಮಹಿಳೆಯ ಶಕ್ತಿಯನ್ನು, ಆಕೆಯ ಸಬಲೀಕರಣದ ವ್ಯಾಖ್ಯಾನವನ್ನು ಮರುಪರಿಶೀಲಿಸಲಿ ಮತ್ತೊಮ್ಮೆ ನಾವು ಹೆಣ್ಣು ಮಕ್ಕಳಿಗಾಗಿ ಅತ್ಯಂತ ಮಾನವೀಯ ಮೌಲ್ಯಗಳನ್ನು ಒಳಗೊಂಡ ಜಗತ್ತನ್ನು ಸೃಷ್ಟಿಸೋಣ.... ಅಲ್ಲಿ ಹೆಣ್ಣು ಮಕ್ಕಳು ಕೇವಲ ತಾವೇ ತಾವಾಗಿರುವ ಮೂಲಕ ಬದುಕನ್ನು ಕಟ್ಟಿಕೊಳ್ಳಲಿ

ಸ್ನೇಹಿತರೆ, ಈ ಜಗತ್ತಿನಲ್ಲಿ ಭಾವನಾತ್ಮಕವಾಗಿ ಅತಿ ಹೆಚ್ಚು ಸಂತೋಷವನ್ನು, ವಿಪರೀತ ಒತ್ತಡವನ್ನು ನೀವು ಹೊಂದಿದ್ದೀರಿ ಎಂದಾದರೆ ಅದು ಕೇವಲ ನಿಮ್ಮೊಬ್ಬರ ತೊಂದರೆಯಲ್ಲ ಅಥವಾ ಯಾರೊಬ್ಬರೂ ನಿಮ್ಮನ್ನು ಪರಿಗಣಿಸುತ್ತಿಲ್ಲ ಎಂದು ನೀವು ಭಾವಿಸುವುದಾದರೆ

ಅದು ಕೇವಲ ನೀವೊಬ್ಬರಲ್ಲ.... ನಿಮ್ಮಂತಹ ನೂರಾರು ಕೋಟಿ ಜನ ಹೆಣ್ಣು ಮಕ್ಕಳು ಈ ಜಗತ್ತಿನಲ್ಲಿ ಇದ್ದಾರೆ.

ಈ ವರ್ಷದ ಮಹಿಳಾ ಸಬಲೀಕರಣವು ಭಾರತ ದೇಶದಲ್ಲಿ ಭಾವನಾತ್ಮಕ ಬೆಂಬಲವನ್ನು ನೀಡುವಂತಾಗಲಿ ಮಹಿಳೆಯರಿಗೆ ಮಾನಸಿಕ ಆರೋಗ್ಯದ ಕುರಿತಾದ ತಿಳುವಳಿಕೆಯನ್ನು ನೀಡಲಿ ದೈಹಿಕ ಆರೋಗ್ಯದಷ್ಟೇ ಮುಖ್ಯವಾಗಿ ಮಾನಸಿಕ ಆರೋಗ್ಯ ಕೂಡ ಇರಬೇಕು ಎಂಬ ಅರಿವನ್ನು ಮೂಡಿಸಲಿ. ನಿಮ್ಮ ಮಾನಸಿಕ ಆರೋಗ್ಯ ಹಾಗೂ ದೈಹಿಕ ಆರೋಗ್ಯಗಳು ಪರಸ್ಪರ ಪೂರಕವಾಗಿದ್ದು ಇದರಲ್ಲಿ ಒಂದರಲ್ಲಿ ವ್ಯತ್ಯಾಸವಾದರೂ ಅದರ ಪರಿಣಾಮ ಮತ್ತೊಂದರ ಮೇಲೆ ಕೂಡ ಆಗುತ್ತದೆ ಎಂಬುದನ್ನು ಅರಿತು ನಿಮ್ಮ ಬದುಕಿನ ಚುಕ್ಕಾಣಿಯನ್ನು ನೀವೇ ಹಿಡಿದು ಅದನ್ನು ರೂಪಿಸಿಕೊಳ್ಳುವ ಜವಾಬ್ದಾರಿಯನ್ನು ನಿಮ್ಮದಾಗಿಸಿಕೊಂಡು ತೃಣದಷ್ಟಾದರೂ ಸಾಧನೆಯನ್ನು ನಿಮ್ಮದಾಗಿಸಿಕೊಳ್ಳಿ.

ವೇದನೆಯೇ ಎಲ್ಲಾ ಸಾಧನೆಗಳ ಮೊದಲ ಸೋಪಾನ ಎಂಬುದನ್ನು ನಿಮ್ಮ ನೆನಪಿನಲ್ಲಿಟ್ಟುಕೊಂಡು ಎಲ್ಲವನ್ನು ಸವಾಲಿನಂತೆ ಸ್ವೀಕರಿಸಿ ಬದುಕಲಿ.... ಆ ಮೂಲಕ ಮಹಿಳಾ ಸಬಲೀಕರಣಕ್ಕೆ ಹೊಸ ವಾಖ್ಯಾನವನ್ನು ಬರೆಯಲಿ ಎಂಬ ಆಶಯದೊಂದಿಗೆ



Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,